# ಕೊಡಗು ಸಂಗಾತಿ


ಜೂನ್ 16 ರಿಂದ 30, 2000 ಪಾಕ್ಷಿಕ ಪತ್ರಿಕೆ (ಕಾರ್ತೆಲ್ 2 ರಿಂದ 16 )

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

KA/SK/MYS-88 ಸಂಪುಟ : 4 ಸಂಚಿಕೆ : 12 ಪುಟಗಳು : 24 ಬೆಲೆ ರೂ. : 6-00





ಲೇಖನ : ಒಳಪುಟಗಳಲ್ಲಿ

ಭಾರತಕ್ಕೆ ಕೀರ್ತಿ ತಂದ 'ಭುವನ ಸುಂದರಿ' ಬೆಂಗಳೂರಿನ ಲಾರಾ ದತ್ತ.

UDAYA PRESS SOMWARPET




॥ ಸ್ರೀ ಎಂಕಟ್ರಮ್ಮ ದೇವ್ರ ಪಾದ್ಕೆ ॥



ॐ

## ನಮ್ಮೆಲ್ಲಾ ಕುಲಬಾಂಧವ್ಕೆ ಮತ್ತೆ ಸ್ನೇಹಿತವ್ಕೆ ಸುಭಾಸಯ ಉಟ್ಟು

ತಾರೀಕ್ 7-5-2000 ಐತ್ವಾರ ನಮ್ಮ ಮಕ್ಳ ಮದ್ವೆ ಮಡ್ಕೇರಿ ಕೆಳ್ಗಿನ ಗೌಡ ಸಮಾಜ್ಲಿ ನಡ್ಸ್‌ಕಾಕ್ನ ನೀವೆಲ್ಲ ಬಂದ್ ಅವ್ರ ತಲ್ಗೆ ಅಕ್ಕಿಕಾಳ್ ಹಾಕಿ ಆಸೀರ್ವಾದ ಮಾಡ್ದೆರಿ. ನಮ್ಗೆಲ್ಲಾ ತುಂಬಾ ಕುಸಿ ಆತ್. ಹಂಗೆನೆ ನಿಮ್ಗೆ ಕೂಡಾ ಸ್ರೀ ಎಂಕಟ್ರಮ್ಮ ಮತ್ತೆ ಸ್ರೀ ಕಾವೇರಿ ಮಾತೆ ಸಹ ತಂಬಾ ಉಸಾರ್, ಆಯಿಸ, ಸಂಪ್ತ್ ಎಲ್ಲಾ ಕೊಟ್ ಕಾಪಾಡಲೀತೇಳಿ ನಾವ್ ಕೇಳ್ಕಂಡ್ಚೆ.



| ಹೈದ : | ಗೂಡೆ : |
|---|---|
| ಕುದುಕುಳಿ ಬೋಜರಾಜ | ಕೋಳುಮಾಡನ ಚಂದ್ರಕಲಾ |
| (ರಾಜ) | (ಚಿತ್ರ) |

*ನೀವೆಲ್ಲಾ ಬಂದ್ ಆಸೀರ್ವಾದ ಮಾಡ್ದಕ್ಕೆ ಗ್ಯಾನಮಾಡಿಕಂಬ್ವು :*

**ಕುದ್ಕುಳಿ**

**ಶ್ರೀಮತಿ ಬೋಜಮ್ಮ ಮತ್ತೆ ಕೆ.ಟಿ. ರಾಂಪ**
ಉದಯ ಪ್ರೆಸ್
ಬಸ್ಟಾಂಡ್, ಸೋಮವಾರ್ಪೇಟೆ - 571 236
✆ : ಅಂಗ್ಡಿ : 82074 ಮತ್ತೆ ಮನೆ : 82274, ಎಸ್ಟೀಡಿ : 08276

**ಕೋಳ್‌ಮಾಡ್ನ**

**ಶ್ರೀಮತಿ ದೇವ್ಕಿ ಮತ್ತೆ ತಮ್ಮಯ್ಯ**
ಕಾಪಿ ಮತ್ತೆ ಮೆಣ್ಸ್ ಬೆಳ್ಯವು
ಹೊಸ್ಕೇರಿ ಗ್ರಾಮ, ಮಡ್ಕೇರಿ - 571 201
✆ : 31614 ಎಸ್ಟೀಡಿ : 08272

**ಪ್ರಕಟ್ನೆ :** ಉದಯ ಪ್ರಸ್ಸ್ ಮತ್ತೆ ಆಫ್‌ಸೆಟ್ ಪ್ರಿಂಟ್, ಬಸ್ಟೆಂಡ್, ಸೋಮವಾರ್ಪೇಟೆ - 571 236.
ಮತ್ತೆ ಹಂಗೆ ನಮ್ಮದ್ ಉದಯ ಲಾಡ್ಜ್ ಉಟ್ಟು, ಜೆರಾಕ್ಸ್ ಉಟ್ಟು, ಸ್ಟೇಸ್ನರಿ ಸ್ಸೇರಿ ಇನ್ನ್ ತುಂಬಾ ವಸ್ತುಗ ಉಟ್ಟು

ಇಲ್ಲಿಗೆ ಕಂಡಿತಾ ನೀವೆಲ್ಲಾ ಬರೋಕು.

2000, ಜೂನ್ 16 ರಿಂದ 30 ರ ತನಕ

# ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಕೊಡಗಿನ ಓಲಗ ಮತ್ತು ಕುಣಿತ | - ಸಂಪಾದಕೀಯ | 02 |
| ಕೊಡಗು ಜಿಲ್ಲಾ ಸಂಪಾದಕರುಗಳ ಒಕ್ಕೂಟದ ಸಭೆ | - ಸಂಗಾತಿ ವರದಿ | 02 |
| ಪದ್ಮಾವತಿ ಮಹಿಳಾ ಸಂಘ ಕುಶಾಲನಗರ ದ್ವಿತೀಯ ವಾರ್ಷಿಕೋತ್ಸವ | - ಆಜ[illegible]ಣಿ ಬಾಲಕೃಷ್ಣ | 03 |
| ಇಕ್ಕೇರಿ ಅರಸರ ನಾಣ್ಯಗಳು ಪತ್ತೆ | - ಸಂಗಾ[illegible] ವರದಿ | 02 |
| ಮಿಲ್ಲೆನಿಯಂ 2000ದ ಗಣರಾಜ್ಯೋತ್ಸವದಲ್ಲಿ ಕೊಡಗಿನ ಎನ್.ಎಸ್.ಎಸ್. ವಿಭಾಗದಲ್ಲಿ ಪ್ರತಿನಿಧಿಸಿದ ಧೀರೆ ಕುಮಾರಿ ವಾಣಿಗಣಪತಿ | - ಸಂಗಾತಿ ವರದಿ | 04 |
| ಭಾರತಕ್ಕೆ ಹೆಸರು ತಂದ 'ಭುವನ ಸುಂದರಿ' ಬೆಂಗಳೂರಿನ ಲಾರಾ ದತ್ತ | - ಸಂಗಾತಿ ವರದಿ | 05 |
| ಸಂಗಾತಿ ಭವಿಷ್ಯ | - ಗಿರೀಶ್‌ಕುಮಾರ್ | 06 |
| ಬಾವಲಿ, ಹಕ್ಕಿಗಳಿಂದ ಹೇಗೆ ಪ್ರತ್ಯೇಕ? | - ಸಂಗ್ರಹ : ಪಿ. ಪಿ. ನೀಶಾ | 09 |
| ಗೌಡ ಜನಾಂಗದ ಮೇರು ವ್ಯಕ್ತಿತ್ವದೌನ್ನತ್ಯಗಳ ಸೀಮಾಪುರುಷ ಶ್ರೀ ಕುರುಂಜಿ ವೆಂಕಟ್ರಮಣ ಗೌಡ (ಮುಂದುವರಿದ ಭಾಗ) | - ಶ್ರೀ ಡಿ. ಜವರೇಗೌಡ (ವೀಳ್ಯ) | 10 |
| ಆದಿ ಚುಂಚನಗಿರಿ ಮಠ ಮತ್ತು ಶೃಂಗೇರಿ ಶಾರದಾ ಪೀಠಗಳ ಜಗದ್ಗುರುಗಳ ಸಮ್ಮಿಲನ : ಶೃಂಗೇರಿ ಕ್ಷೇತ್ರದ ಅಭಿವೃದ್ದಿಗೆ ಜಂಟಿ ಯೋಜನೆಗಳು | - ಸಂಗಾತಿ ವರದಿ | 13 |
| 'ಸಮ್ಮಿಳನದ ಕೂಟ' ಗೌಡ ಸಮಾಜ, ನಂಜರಾಯ ಪಟ್ಟಣ | - ಎಂ. ಕೆ. ನಂಜುಂಡ | 14 |
| ಸರ್ಪಗಂಧ - ಧಾರವಾಹಿ - 32 | - ಕೌಂಡಿನ್ಯ | 15 |
| ಪ್ರೀತಿ | - ತೆಕ್ಕಡೆ ಬಿ. ಕುಮಾರ್ | 16 |
| ಐ. ಕ್ಯೂ. ಎಂದರೇನು? | - ಉಳುವಾರನ ಧನುಜ ಜನಾರ್ಧನ್ | 16 |
| ವಿದ್ಯಾವಂತ ನಿರುದ್ಯೋಗಿಗಳಿಗೆ ಮಾರ್ಗದರ್ಶನ ಕೈಪಿಡಿ | - ತಡಿಯಪ್ಪನ ಕುಮಾರಜಯ | 17 |
| "ಗುರುಮಹಿಮೆ" | - ಬಿಟ್ಟೀರ ಚೋಂದಮ್ಮ ಶಂಭು | 19 |
| **ಅರೆಭಾಷಿಕ ವಿಭಾಗ** | | |
| "ಸಂಗಾತಿ ಬಗ್ಗೆ ತಾತ್ಸಾರ ಯಾಕೆತ?" | - ಅಣ್ಣೆಚೀರಾ ಭಾರತಿ ಸೋಮಣ್ಣ | 02 |
| [illegible] - 12 | | |


| | |
|---|---|
| ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ, 35,**"[illegible]", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. **ಫೋನ್ : 0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047** |
| ಸಂಗಾತಿ ಚಿಹ್ನೆ, ಬ್ಯಾಡ್ಜ್ ಅರೆಭಾಷೆ ಕ್ಯಾಸೆಟ್ ಲಭ್ಯ | ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಕೊಡಗಿನ ಒಲಗ ಮತ್ತು ಕುಣಿತ

ಕರ್ನಾಟಕದ ಜನಪದ ಕುಣಿತಗಳಲ್ಲಿ ಕೊಡಗಿನ ಡೋಲು ವಾದ್ಯ ಮತ್ತು ಕೊಂಬು ವಾದ್ಯ ಮತ್ತು ಕುಣಿತಕ್ಕೆ ವೈವಿಧ್ಯತೆ ಇದೆ. ಬರುಬರುತ್ತಾ ಇದರ ಅಭಿವೃದ್ಧಿ ಕುಂಟಿತಗೊಳ್ಳುತ್ತಿದೆ. ಇದು ಹರಿಜನರಿಗೆ ಸೇರಿದೆಂದು ಬೇರೆಯವರು ನಿರ್ಲಕ್ಷ್ಯ ಮಾಡಿದರೆ ಕಾಲಕ್ರಮದಲ್ಲಿ ಈ ಕಲೆ ನಶಿಸಿ ಹೋಗಬಹುದು. ಕೊಡಗಿನ ಹೆಚ್ಚಿನ ಜನರ ಎಲ್ಲಾ ಶುಭ ಅಶುಭ ಕಾರ್ಯಗಳಿಗೆ ಈ ವಾದ್ಯವನ್ನು ಮಾಡಿಸುತ್ತಾರೆ. ತಬಲ ಮೃದುಂಗದಂತೆ ಶಾಸ್ತ್ರಬದ್ದವಾಗಿಲ್ಲದಿದ್ದರೂ ಜಾನಪದ ಕಲೆ ತಲತಲಾಂತರದಿಂದ ಲಯಬದ್ದವಾಗಿ ಡೋಲು ಬಾರಿಸುವುದೂ ಹಾಗೂ ವಾದ್ಯ ಊದುವುದು ಶಾಸ್ತ್ರ ಬದ್ದವಾಗಿಯೇ ಇದೆ.

ನಮ್ಮ ವಾದ್ಯ ವೃಂದದವರಿಗೆ ಎಲ್ಲರೂ ಪ್ರೋತ್ಸಾಹಿಸಬೇಕು. ಜನಪದ ಮೇಳಗಳಲ್ಲಿ ನಮ್ಮ ವಾದ್ಯದ ಪಂಗಡದವರು ಹೆಚ್ಚು ಭಾಗವಹಿಸುವಂತೆ ಮಾಡಬೇಕು.

ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಸ್ಪರ್ಧೆಗಳಿಗೆ ಇವರು ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು. ವಿವಿದ ಐಂಗಿಗಳಾದ, ಹುಲಿ ವೇಶದ ಕುಣಿತ, ನಾಗಸ್ವರದ ಕುಣಿತ, ಕರ್‌ಂದ ಮುಂತಾದ ಕುಣಿತಗಳಿಗೂ ಪ್ರೋತ್ಸಾಹಕೊಡಬೇಕು. ಇದಕ್ಕೆ ಆಯಾಯ ಗ್ರಾಮದ ಯಾ ನಾಡಿನ ಸಾರ್ವಜನಿಕರು ಉದಾರವಾಗಿ ಹಣ ಸಹಾಯ ಮಾಡಿ ಈ ಕಲೆಯ ವಿನಾಶವನ್ನು ತಡೆಗಟ್ಟ ಬೇಕೆಂದು ಸಂಗಾತಿಯ ಸಲಹೆಯಾಗಿದೆ.

## ಕೊಡಗು ಜಿಲ್ಲಾ ಸಂಪಾದಕರುಗಳ ಒಕ್ಕೂಟದ ಸಭೆ

ಕೊಡಗು ಜಿಲ್ಲಾ ಪತ್ರಿಕಾ ಸಂಪಾದಕರುಗಳ ಒಕ್ಕೂಟದ ಸಭೆಯು ವಿ. ಪಿ. ಸುರೇಶ್ (ಪರಾಕ್ರಮ)ರವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಗರದ ಹೊಟೇಲ್ ಇಂಟರ್‌ನೇಶನಲ್‌ನಲ್ಲಿ ನಡೆಯಿತು. ಮಡಿಕೇರಿಯಲ್ಲಿ ನಿರ್ಮಾಣಗೊಳ್ಳಲಿರುವ "ಪತ್ರಿಕಾ ಭವನ"ದ ಕಟ್ಟಡಕ್ಕೆ ಜಿಲ್ಲೆಯ ಪ್ರತಿ ಪತ್ರಿಕೆಗಳಿಂದ ತಲಾ 5 ಸಾವಿರ ರೂ. ಗಳನ್ನು ನೀಡುವಂತೆ ತೀರ್ಮಾನಿಸಲಾಯಿತು. ಜಿಲ್ಲೆಯಲ್ಲಿ ಯಾವುದೇ ಪತ್ರಿಕೆಗಳ ಪ್ರತಿನಿಧಿ ಎನಿಸದೆ ತಾನು ಪತ್ರಕರ್ತನೆಂದು ಹೇಳುತ್ತಾ ಕೆಲವರು ಇಲಾಖಾಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ, ಆ ಮೂಲಕ ಪತ್ರಿಕಾ ಕ್ಷೇತ್ರಕ್ಕೆ ಮಸಿ ಬಳಿಯುವಂತವರನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಜರುಗಿಸುವಂತೆ ನಿರ್ಧರಿಸಲಾಯಿತು.

ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಮಡಿಕೇರಿಯ ಪತ್ರಿಕಾಲಯಗಳಿಗೆ ಬಸ್‌ಗಳ ಮೂಲಕ ರವಾನಿಸಲ್ಪಡುವ ಸುದ್ದಿಗಳು ಕಳೆದು ಹೋಗುವಿಕೆ ಅಥವಾ ದುರುಪಯೋಗವಾಗುವಿಕೆಯನ್ನು ತಡೆಗಟ್ಟಲು ನಗರದ ಸೂಕ್ತ ಸ್ಥಳ (ಬಸ್‌ನಿಲ್ದಾಣ)ದಲ್ಲಿ ಪುರಸಭೆಗೆ ನೆಲಬಾಡಿಗೆ ನೀಡಿ "ಸುದ್ದಿ ಸೆಂಟರ್" ಒಂದನ್ನು ತೆರೆಯುವಂತೆ ಒಕ್ಕೂಟವು ತೀರ್ಮಾನಿಸಿತು.

ಸಂಪಾದಕರುಗಳಾದ ಟಿ.ಪಿ. ರಮೇಶ್ (ಗಡಿನಾಡ ಸಂಚಾರಿ) ಜಿ. ರಾಜೇಂದ್ರ (ಶಕ್ತಿ) ಸಿ.ವಿ. ರಾಜ್‌ಗೋಪಾಲ್ (ಕಾಫಿಲ್ಯಾಂಡ್ ನ್ಯೂಸ್) ಬಿ. ಜಿ. ಅನಂತಶಯನ (ಕೊಡಗು ಫ್ರಂಟ್) ಎಂ. ಶ್ರೀಧರ ಹೂವಲ್ಲಿ (ಕೊಡಗು ರತ್ನ) ಬಿ.ಎನ್. ಮನುಶೈಣೈ (ಕೊಡಗು ಸಮಾಚಾರ) ಎಂ. ಇ. ಮಹಮ್ಮದ್ (ಫಿರ್ದೌಸ್) ಯು. ಎಂ. ಪೂವಯ್ಯ (ಬ್ರಹ್ಮಗಿರಿ) ಎಚ್. ಎಂ. ಅಣ್ಣಪ್ಪ (ಒಕ್ಕೂಟದ ಸಲಹೆಗಾರರು) ಮುಂತಾದವರು ಉಪಸ್ಥಿತರಿದ್ದರು.

## "ಸಂಗಾತಿ ಬಗ್ಗೆ ತಾತ್ಸಾರ ಯಾಕೆತ?"

ನಮ್ಮ ಜನಾಂಗದ ಈಗಿರುವ ಅರೆಭಾಷೆ ಪತ್ರಿಕೆತೇಳ್ರೆ ಕೊಡಗು ಸಂಗಾತಿ ಇದರ ಬಗ್ಗೆ ತಿಳ್ದ್‌ವುಕ್ಕಿಂತ ತಿಳಿಯದವೇ ಜಾಸ್ತಿತೇಳಕ್. ಮಂಗಳವಾರ ಪತ್ರಿಕೆ ಬಾತ್‌ತೇಳ್ರೆ ಅಂಗಡಿಗೆ ಓಡುವ ಜನ, ನಮ್ಮ ಸಂಗಾತಿ ಬಗ್ಗೆ ಹೇಳ್ಕನ ಯಾಕಿಷ್ಟ್ ಮೂಗು ಮುರಿಯದುತ. ಈ ಪತ್ರಿಕೆಂದ ನಮಿಗೆ ನಮ್ಮ ಜನಾಂಗಕ್ಕೆ ನಮ್ಮ ಮುಂದಿನ ಪೀಳಿಗೆಗೆ ಎಷ್ಟ್ ಪ್ರಯೋಜನ ಉಟ್ಟ್‌ತಾ ತಿಳ್ಕಂಡ್ ಒಲೆಗೊಂದರಂಗೆ ತಕಂಡ್ ಓದಿರೆ ಪತ್ರಿಕೆಯ ಬೆಳವಣಿಗೆಗೆ ಜನಾಂಗದ ಅಭಿವೃದ್ಧಿಗೆ ಎಷ್ಟೊ ಹಿತಕಾರಿಯಾಗ್‌ತ್ತಿತ್. ಆದರೆ ಇದರ್‍ನ ಜನ ಇನ್ನೂ ತಿಳ್ಕಂಣ್‌ತ್ತಿಲ್ಲೆ. ನಾನ್ ಎಷ್ಟೊ ಜನರೊಟ್ಟಿಗೆ ಸಂಗಾತಿ ಬಗ್ಗೆ ವಿಚಾರ್‌ಸ್‌ಕನ ನಾವು ಅದರ್‍ನ ತಾದೇ ಇಲ್ಲೆ. ಎಂತಾಕ್ಕೆ ಸುಮ್ಮನೆ ದುಡ್ಡ್ ಉಟ್ಟುತಾ ತಾದು. ಅದರ್‌ಲ್ಲಿಒಂದ್ ಇಲ್ಲೆ. ಹತ್ತ್ ಹನ್ನೆರ್‌ಡ್ ಹಾಳೇ ಇದ್ದೆದೆ "6" ರೂಪಾಯಿಗಡ. ನಮೀಗೆ ಬ್ಯಾಡಪ್ಪ. ಎಲ್ಲಾದರ್ ಸಿಕ್ಕಿರೆ ಓದಿಕಂಬೋದು ತಾ ಹೇಳವೆ ಜಾಸ್ತಿ. ನಮೀಗಾಗಿ ಇರುವ ಪುಸ್ತಕನ ಇನ್ನೊಬ್ಬರತ್ರ ಕೇಳಿ ಓದುದು ಎಷ್ಟೊಂದು ನಾಚಿಕೆಗೇಡ್. ನಾನ್ ಕೂಡ ಗೌಡ ಜಾತೀಲಿ ಹುಟ್ಟಿ ಬೇಳ್‌ತ್ಲೆನಾ. ನಾನ್ ಯಾಕೆ ಅವರಂಗೆ ಕೊಂಡ್ ಓದ್‌ಕಾಗದ್‌ತ ಈ ಜನ ಯಾಕೆ ಗ್ಯಾನ ಮಾಡ್ಲೆ. ದುಡ್ಡ್‌ನ ಮುಖ ನೋಡದೆ, ಪತ್ರಿಕೆನ ಬೆಳ್ಸಿಕೆ ಮತ್ತೆ ಜನಾಂಗದ ಅಭಿವೃದ್ಧಿಗಾಗಿ ಪ್ರತಿ ಕುಟುಂಬನೂ ಒಂದೊಂದು ಪತ್ರಿಕೆಕೊಂಡ್ ಓದಕ್. ಆರ್ ರೂಪಾಯಿ ಕೊಟ್ಟ್ ಓದಕಾಗದಷ್ಟ್ ನಮ್ಮ ಜನ ಆರ್ಥಿಕವಾಗಿ ಹಿಂದುಳ್ತ್ಲೆ. ಅಂತ ದುಡ್ಡ್ ಎಷ್ಟೊ ಕಳ್ದ್‌ವೆ. ಕಳೀತಾ ಒಳೊ. ಇನ್ನ್ ಕೆಲವು ಜನ್‌ರಿಗೆ ಪತ್ರಿಕೆ ತರ್‍ಸಿಕೆ ಮನ್ಸ್ ಇದ್ದದೆ. ಆದರೆ ಪತ್ರಿಕೆ ಬಗ್ಗೆ ಅವುಹಂಗೆ ಹೇಳುವೆ, ಇವು ಹಿಂಗೆ ಹೇಳುವೆ. ಅದ್ ಲಾಯ್ಕ್ ಇರ್‍ದ್ಲೆಗಡ. ತಾ ಉದಾಸೀನ ಮಾಡುವೆ. ಅವರ ಇವರ ಮಾತ್ ಯಾಕೆ ಕೇಳಕು. ನಮಿಗೆ ಅದರ ಬಗ್ಗೆ ತಿಳ್ಕಂಣ್‌ವಷ್ಟ್ ಬುದ್ದಿ ಇಲ್ಲೆವಾ? ಜನಸಾವಿರ ಹೇಳ್‌ವೆ. ಆದರೆ ಅವರವರ

4ನೇ ಪುಟಕ್ಕೆ

# ಪದ್ಮಾವತಿ ಮಹಿಳಾ ಸಂಘ ಕುಶಾಲನಗರ ದ್ವಿತೀಯ ವಾರ್ಷಿಕೋತ್ಸವ

G.M.P. ಶಾಲೆ ಕುಶಾಲನಗರದಲ್ಲಿ ಮಂಗಳವಾರ ತಾ.11-4-2000ರಂದು ಗೌಡ ಮಹಿಳಾ ಸಂಘದ ಕಾರ್ಯ ಕ್ರಮವನ್ನು ಶ್ರೀಮತಿ ನಾಟೋಳನ ಶೇಷಮ್ಮ ಪೂಣಚ್ಚನವರು, ಮುಖ್ಯ ಉಪಾಧ್ಯಾಯಿನಿ ಸ.ಮಾ.ಪ್ರಾ.ಶಾಲೆ ಗುಡ್ಡೆ ಹೊಸೂರು ಇವರು ಉದ್ಘಾಟಿಸಿದರು ಹಾಗೂ ಆರ್. ಚಿನ್ನಸ್ವಾಮಿ G. M. P. ಶಾಲೆ, ಕುಶಾಲನಗರ ಮುಖ್ಯ ಅತಿಥಿಯಾಗಿ ಆಗಮಿಸಿದರು. ಚಿಕ್ಕ ಮಕ್ಕಳಿಗಾಗಿ ಆ ದಿನದ ಸುಗಮ ಸಂಗೀತವನ್ನು ಹೇಳಿ ಕೊಡುವುದರೊಂದಿಗೆ ಕಾರ್ಯಕ್ರಮ ಮುಂದುವರಿದಿತ್ತು. ಮಕ್ಕಳು ಉತ್ಸಾಹದಿಂದ ಆಟಗಳನ್ನು ಮರೆತು ತಾಮುಂದು ನಾಮುಂದು ಎಂಬಂತೆ ಸಂಗೀತದ ಕಡೆ ಓಗೊಟ್ಟರು. ಮಕ್ಕಳಿಗೆ ತಂದೆ ತಾಯಿಯ ಪ್ರೋತ್ಸಾಹ ಮುಖ್ಯವಾಗಿ ಹಾಗೂ ಉಚಿತವಾಗಿ ತಿಳಿಸಿ ಕೊಡುವ ಗುರುಗಳನ್ನು ನಾವು ಸ್ಮರಿಸಬೇಕು.

ಬುಧವಾರ ತಾ. 12-4-2000 ರಂದು ಅದೇ ಶಾಲೆಯಲ್ಲಿ ಅಂದಿನ ಕಾರ್ಯ ಕ್ರಮದ ಉದ್ಘಾಟನೆಯನ್ನು ಕುದುಪಜೆ ಶಾಂತಿ ಬೋಜಪ್ಪನವರು ನಡೆಸಿಕೊಟ್ಟರು. ಅವುಗಳ ವಿವರ ಈ ರೀತಿ ಇದೆ. ಮಕ್ಕಳಿಗೆ ಭಾವಗೀತೆ, ಶಾಸ್ತ್ರೀಯ ಸಂಗೀತ, ಇವುಗಳ ಬಗ್ಗೆ ಸೂದನ ರತ್ನ ಪೂಣಚ್ಚನವರು ಮಕ್ಕಳಿಗೆ ತಿಳಿಯಪಡಿಸಿದರು. ಅಲ್ಲದೆ, ಡ್ರಾಯಿಂಗ್, ಕ್ರಾಫ್ಟ್, ಮುಖವಾಡದ ತಯಾರಿಕೆ ಇವುಗಳ ಬಗ್ಗೆ ಮೋಂಟಡ್ಕ ಪುರುಷೋತ್ತಮ, ಸೆಂಟ್ ಫಿಲೋಮಿನ ಶಾಲೆ ಪುತ್ತೂರ್, ಇವರಿಂದ ಮಕ್ಕಳಿಗೆ ಕುತೂಹಲ ಮೂಡುವಂತೆ ವಿವರಿಸಿ ತಿಳಿಯಪಡಿಸಿದರು.

ಗುರುವಾರ ತಾ 13-4-2000 ರಂದು ಕೂಡ ಮಕ್ಕಳಿಗಾಗಿ ಹಸಿರು ತೋರಣ ಕಟ್ಟುವುದು, ಮತ್ತು ಹೈಸ್ಕೂಲ್ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯ ಕ್ರಮವನ್ನು ಸೂದನ ಗೋಪಾಲ, ಮೂಕಾಂಬಿಕ ಪ್ರೌಢಶಾಲೆ, ಕುಶಾಲನಗರ, ಇವರು ನಡೆಸಿ ಕೊಟ್ಟರು.

ಶುಕ್ರವಾರ ತಾ. 14-4-2000 ರಂದು ಪದ್ಮಾವತಿ ಮಹಿಳಾ ಸಂಘದ ದ್ವಿತೀಯ ವಾರ್ಷಿಕ ಮಹಿಳಾ ಸಭೆಯನ್ನು ಕುಶಾಲನಗರದ ಗೌಡಸಮಾಜದಲ್ಲಿ ಏರ್ಪಾಡಿಸಲಾಗಿತ್ತು. ಮುಖ್ಯ ಅತಿಥಿಯಾದ ಶ್ರೀಮತಿ ಪಡಿಕಲ್ಲು ಸೀತಮ್ಮ ಗೋಣಿ ಕೊಪ್ಪಲು, ಇವರಿಂದ ದೀಪ ಹಚ್ಚಿ ಉದ್ಘಾಟಿಸಿದರು. ಪ್ರಾರ್ಥನೆ ಸೂದನ ರತ್ನ ಪೂಣಚ್ಚ ಇವರಿಂದ ಮೊದಲುಗೊಂಡು, ಸ್ವಾಗತ ಭಾಷಣವನ್ನು ಕೆಮ್ಮಾರನ ಮೀನಾಕ್ಷಿ ಉತ್ತಯ್ಯನವರು ಮಾಡಿದರು. ವೇದಿಕೆಯ ಮೇಲೆ ಅತಿಥಿಯರಾದ ಅಯ್ಯಂಡ್ರ ಭೀಮಯ್ಯ ವಕೀಲರು, ಕುಶಾಲನಗರ, ಕೋರನ ಪೂಣಚ್ಚನವರು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಅಭಿವೃದ್ಧಿ ಸಂಘದ ಅಧ್ಯಕ್ಷರು, ಅಧ್ಯಕ್ಷತೆ ವಹಿಸಿದ ಕುದುಪಜೆ ಶಾಂತಿ ಬೋಜಪ್ಪನವರು ಮುಖ್ಯ ಅತಿಥಿ ಪಡಿಕಲ್ಲು ಸೀತಮ್ಮ ಗೋಣಿಕೊಪ್ಪಲು, ಹಾಗೂ ಗೌಡ ಸಂಸ್ಕೃತಿ ಅಕಾಡೆಮಿಯ ಅಧ್ಯಕ್ಷ ತುಂತಜೆ ಗಣೇಶನವರು ಉಪಸ್ಥಿತರಿದ್ದರು. ಮೊದಲಿಗೆ ಪುಟಾಣಿ ಮಕ್ಕಳಿಂದ ಭಾವಗೀತೆಗಳೊಂದಿಗೆ ಕಾರ್ಯ ಕ್ರಮವು ಪ್ರಾರಂಭವಾಯಿತು. ಅತಿಥಿಯರಾದ ಪಡಿಕಲ್ಲು ಸೀತಮ್ಮನವರು ಮಾತನಾಡಿ ಮಹಿಳೆಯರು ಸಕ್ರಿಯವಾಗಿ ಮತ್ತು ಮಾನವತೆಯ ಗುಣಗಳ ಬಗ್ಗೆ ಮತ್ತು ಹೆಣ್ಣು ಅಬಲೆಯಲ್ಲ ಅವಳು ಸಬಲೆ. ವಿಧವೆಯಾದವಳು, ಎದೆ ಗುಂದದೆ ಸಮಾಜದ ಕಟ್ಟು ಪಾಡುಗಳಿಗೆ ಬಗ್ಗದೆ ಮುನ್ನುಗ್ಗಬೇಕು. ಸಮಾಜದ ಕುಂದು ಕೊರತೆಗಳನ್ನು ಹೋಗಲಾಡಿಸಬೇಕು. ಹೆಣ್ಣು ಯಾವುದರಲ್ಲಿ ಕಡಿಮೆ ಇಲ್ಲ ಎಂಬುವುದನ್ನು ದಿಟ್ಟತನದಿಂದ ತೋರಿಸಬೇಕು ಎಂದು ಸ್ಪಷ್ಟಪಡಿಸಿದರು.

1999-2000ರ ವರದಿಯನ್ನು ಬೈಮನ ಬೋಜಮ್ಮನವರು ಓದಿದರು. ಅತಿಥಿಯರಾದ ಅಯ್ಯಂಡ್ರ ಭೀಮಯ್ಯ, ವಕೀಲರು, ಕುಶಾಲನಗರ, ಇವರು ಹೆಣ್ಣು ಸಂಸಾರದ ಒಂದು ಕಣ್ಣು ಇದ್ದಂತೆ ಒಂದು ಕುಟುಂಬವು ಸಾಗಬೇಕಾದರೆ ಅದು ಹೆಣ್ಣಿಂದ ಮಾತ್ರ ಸಾಧ್ಯ ಎಂದು ಕೂಲಂಕುಶವಾಗಿ ಮಹಿಳೆಯರಿಗೆ ತಿಳಿಯ ಪಡಿಸಿದರು. ಹಾಗೂ ಮಕ್ಕಳಿಗೆ ಮೊದಲ ಗುರು ತಾಯಿ ಅವರಿಂದ ಮೊದಲು ಗೊಂಡು ಮಕ್ಕಳಲ್ಲಿ ಒಳ್ಳೆಯ ಗುಣ ಮತ್ತು ಸಹನೆ, ಹಿರಿಯರಿಗೆ ಗೌರವ ವಿನಯತೆ ಇವುಗಳು ಮಕ್ಕಳಲ್ಲಿ ಮೂಡುವಂತೆ ತಂದೆ ತಾಯಿಯವರು ಕಲಿಸಬೇಕು ಎಂದು ಸಲಹೆ ನೀಡಿದರು. ಅತಿಥಿಯವರ ಭಾಷಣದಲ್ಲಿ ಗೌಡ ಅಕಾಡೆಮಿಯ ಸಂಸ್ಕೃತಿಯ ಅಧ್ಯಕ್ಷ ತುಂತಜೆ ಗಣೇಶನವರು ಅರೆ ಭಾಷೆಯಲ್ಲಿ ಮಾತನಾಡಿ ಮಹಿಳಾ ಸಂಘಟನೆಗೆ ಮುಖ್ಯವಾಗಿ ಮಹಿಳೆಯರೇ ಈ ಸಭೆಗೆ ಅಲಂಕಾರವಾಗತಕ್ಕದ್ದು, ಆದರೆ ಈ ಸಭೆಗೆ ಆಹ್ವಾನ ಮಾಡುವಾಗ ಗೌಡ ಜನಾಂಗದವರಿಂದಲೇ ಪ್ರೋತ್ಸಾಹ ಮುಖ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ನಮ್ಮ ಅರೆಭಾಷೆಯನ್ನು ಹೆಚ್ಚಿನ ನಮ್ಮ ಗೌಡ ಜನಾಂಗದವರು ಮಾತನಾಡುವುದಿಲ್ಲ. ನಮ್ಮಲ್ಲಿ ಒಳ್ಳೆಯ ಅಭಿಮಾನ ಇರಬೇಕು. ಅದರ ಕೊರತೆ, ಇದೆ ತುಂಬಾ ಇದು ಬೇಸರದ ಸಂಗ್ತಿ ಎಂದು ನಿರಾಸೆಯನ್ನು ವ್ಯಕ್ತ ಪಡಿಸಿದರು. ಗೌಡ ಸಂಸ್ಕೃತಿ ಮತ್ತು ಭಾಷೆ ಉಳಿಯಬೇಕಾದರೆ ಶ್ರೀಮಂತ ಬಡವ ಎಂಬ ಬೇಧವನ್ನು ತೊರೆಯಬೇಕು ಎಂದು ಬೋಧಿಸಿದರು.

ಮಹಿಳೆಯರ ಅಭಿವೃದ್ಧಿಗೊಸ್ಕರವಾಗಿ ಅವುಗಳ ಬಗ್ಗೆ ಯಾವ ರೀತಿಯಲ್ಲಿ ಸಲಹೆಯನ್ನು ಪಡೆಯಬೇಕು ಎಂದು, ಬ್ಯಾಂಕಿನಿಂದ ಸಾಲ, ಠೇವಣಿ ಬಗ್ಗೆ, ಸೊಸೈಟಿಯ ಬಗ್ಗೆ, ಇವುಗಳಿಂದ ಆಗುವ ಅನುಕೂಲಗಳ ಬಗ್ಗೆ ವಿವರವನ್ನು ಸೂದನ ರತ್ನ ಪೂಣಚ್ಚನವರು ವಿವರವಾಗಿ ಮಹಿಳೆಯರಿಗೆ ತಿಳಿಯ ಪಡಿಸಿದರು.

ಕೋರನ ಪೂಣಚ್ಚನವರು ಮಾತನಾಡಿ ಮಹಿಳೆಯರು ಒಂದೇ ಒಕ್ಕೂಟದಲ್ಲಿ ಸಹಕರಿಸಬೇಕು ಎಂದು ಉದ್ದೇಶಿಸಿ ಮಾತನಾಡಿದರು. ಪೆರ್‌ಬಾಯಿ ಪೊನಮ್ಮ ಚಿಣ್ಣಪ್ಪ ಇವರು 1999-2000ರ ಖಜಾಂಚಿಯ ಬಗ್ಗೆ ವರದಿ ಓದಿದರು. ಕೊನೆಯದಾಗಿ 4ದಿನಗಳ ಬೇಸಿಗೆ ಶಿಬಿರ ಕಾರ್ಯಕ್ರಮದಲ್ಲಿ ಪುಟಾಣಿ ಮಕ್ಕಳು ಹಾಗೂ ಹಿರಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿ

12ನೇ ಪುಟಕ್ಕೆ

ನಮ್ಮ ಜನಾಂಗಕ್ಕೆ ಸಂಗಾತಿಯ ಸೇವೆಯನ್ನು ಇನ್ನೂ ಹೆಚ್ಚಿಸಿ ಅಮರವಾಗಿ ಬೆಳೆಯಲಿ – ನಂಗಾರು ಅಪ್ಪಾಜಿ, ಬೆಂಗಳೂರು

# ಮಿಲ್ಲೆನಿಯಂ 2000ದ ಗಣರಾಜ್ಯೋತ್ಸವದಲ್ಲಿ ಕೊಡಗಿನ ಎನ್.ಎಸ್.ಎಸ್. ವಿಭಾಗದಲ್ಲಿ ಪ್ರತಿನಿಧಿಸಿದ ಧೀರೆ ಕುಮಾರಿ ವಾಣಿಗಣಪತಿ



ಕೊಡಗಿನ ಗೌಡ ಜನಾಂಗದಲ್ಲಿ ಬದುಕಿ ಬಾಳುತ್ತಿರುವ ಬಾಂಧವರ ಮಕ್ಕಳಲ್ಲಿ ಅನೇಕರು ಅನೇಕ ವಿಧದ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳಾಗಿದ್ದಾಗಲೇ ವಿವಿಧ ಸಾಧನೆಗೈಯುತ್ತಿರುವ ವರದಿಗಳು ಆಗಾಗ್ಗೆ ಪತ್ರಿಕೆಯಲ್ಲಿ ಬರುತ್ತಿರುವುದು ಸಂತೋಷದ ವಿಷಯ.

ಈಕೆ ಬೇರೆ ಯಾರು ಅಲ್ಲ ಇವಳೇ ಮೂಡಗದ್ದೆ ವಾಣಿ ಗಣಪತಿ. ದಕ್ಷಿಣ ಕೊಡಗಿನ ತಿತಿಮತಿಯಲ್ಲಿ ವಾಸವಿರುವ ಮೂಡಗದ್ದೆ ಕುಟುಂಬದ ಗಣಪತಿಯವರ ತೃತೀಯ ಪುತ್ರಿ ಈಕೆ. ಓದುತ್ತಿರುವುದು ದ್ವಿತೀಯ ಬಿ.ಎಸ್ಸಿ. ಗೋಣಿಕೊಪ್ಪಲಿನ ಕಾವೇರಿ ಕಾಲೇಜು ಎಷ್ಟು ಹೆಸರು ವಾಸಿಯೋ ಅಷ್ಟೇ ಹೆಸರಾಂತ ವಿದ್ಯಾರ್ಥಿನಿ ವಾಣಿಗಣಪತಿ ಕೂಡ.

ಪ್ರಸ್ತುತ ಹೊಸ ಶತಮಾನದ ಜನವರಿ ತಿಂಗಳಿನಲ್ಲಿ ರಾಜಧಾನಿ ದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ದೆಹಲಿಯಲ್ಲಿ ಕೊಡಗು ಜಿಲ್ಲೆಯನ್ನು ರಾಷ್ಟ್ರೀಯ ಸೇವಾ ಯೋಜನೆ N.S.S. ಕ್ಷೇತ್ರದ ಮೂಲಕ ಪ್ರತಿನಿಧಿಸಿದ ಕೀರ್ತಿ ಈಕೆಯದು. ವಾಣಿ ಗಣಪತಿಯವರು ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳ ಪಟ್ಟ ಕಾವೇರಿ ಕಾಲೇಜಿನ N.S.S. ವಿಭಾಗದ ವಿದ್ಯಾರ್ಥಿ ನಾಯಕಿ ಕೂಡ. ಸದಾ ಗೆಳೆಯ - ಗೆಳತಿಯರ ಬಳಗದಿಂದ ಕಂಗೊಳಿಸುವ ವಾಣಿಗಣಪತಿಯವರದು ಹೊರನೋಟಕ್ಕೆ ಧೀಮಂತ ವ್ಯಕ್ತಿತ್ವ. ಅವರ ಸ್ನೇಹಿತರ ಬಳಗದ ಅಭಿಪ್ರಾಯದಂತೆ ಭವಿಷ್ಯದ ಧೀರ ಹೆಣ್ಣು ಮಕ್ಕಳಲ್ಲಿ ಒಂದಾಗಬಹುದಾದ ವಿಶೇಷತೆ ಈಕೆಯಲ್ಲಿದೆ ಎಂಬುದು ಕಾಲೇಜಿನ ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿ ಸದಾ ಮಿಂಚುವ ವಿದ್ಯಾರ್ಥಿಗಳ ಸಾಲಿನಲ್ಲಿ ಈಕೆಯೂ ಒಬ್ಬಳು. ಈಗಾಗಲೇ ಶಿವಮೊಗ್ಗ, ಕೇರಳದ ಎರ್ನಾಕುಲಂ, ಮಂಡ್ಯ, ಧಾರವಾಡ, ಬೆಂಗಳೂರು ಹೀಗೆ ಹಲವೆಡೆ N.S.S. ಕ್ಯಾಂಪ್‌ಗಳಲ್ಲಿ ಭಾಗವಹಿಸಿರುವ ವಾಣಿಗಣಪತಿಯವರು ಈ ವಿಷಯದಲ್ಲಿ ಬಹಳ ಅನುಭವಿ.

ಇಂತಹ ಕೀರ್ತಿ ಸಾಧಿಸಿದ ವಿಚಾರ ಅಪ್ಪತಪ್ಪಿಯೂ ಜನಾಂಗ ಬಾಂಧವರಲ್ಲಿ ಅನೇಕರಿಗೆ ಯಾಕೆ, ತೀರಾ ಸಂಬಂಧಿಕರಿಗೆ ಇನ್ನೂ ತಿಳಿಯದಿರುವುದು ವಿಷಾದಕರ ಸಂಗತಿ. ನಮ್ಮ ತನವನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾದ ನಿಟ್ಟಿನಲ್ಲಿ ಗೌಡಬಾಂಧವರು ನಾವಿರುವಾಗ ಇಂತಹ ಪ್ರತಿಭೆಗಳತ್ತ ಮೆಚ್ಚುಗೆಯ ನುಡಿಗಳನ್ನಾಡಿ ಪ್ರೋತ್ಸಾಹಿಸಿ ತಿಳಿಯಪಡಿಸುವುದು ನಮ್ಮ ತನದ ಸಾರ್ಥಕತೆಯಾದೀತು.

**ಸಂಗಾತಿ ವರದಿ**

---

## ಇಕ್ಕೇರಿ ಅರಸರ ಕಾಲದ ಚಿನ್ನದ ನಾಣ್ಯಗಳು ಪತ್ತೆ

ಶಾಸಕ ವಡ್ನಾಳ್ ರಾಜಣ್ಣನವರ ಗ್ರಾಮ ವಡ್ನಾಳದಲ್ಲಿ ರೇವಣಸಿದ್ದಪ್ಪ ಎಂಬಾತನ ಹಿತ್ತಲಲ್ಲಿ ಇಕ್ಕೇರಿ ಅರಸರ ಕಾಲದ್ದೆಂದು ಹೇಳಲಾದ 175 ಚಿನ್ನದ ನಾಣ್ಯಗಳು (ವರಹಗಳು) ದೊರೆತಿದೆ.

ರೇವಣಸಿದ್ದಪ್ಪ ತಮ್ಮ ಹಿತ್ತಲಲ್ಲಿ ಶೌಚಾಲಯಕ್ಕಾಗಿ ಗುಂಡಿ ತೋಡಲು ಕೂಲಿಯವರಿಗೆ ಕೊಟ್ಟಿದ್ದರು. ಗುಂಡಿ ಅಗೆಯುವಾಗ ಕೂಲಿಯವರಿಗೆ ಮಣ್ಣಿನ ಕುಡಿಕೆ ಸಿಕ್ಕಿದಾಗ ಒಡೆದು ತೆಗೆದು ನೋಡಿ ಚಿನ್ನದ ನಾಣ್ಯಗಳೆಂದು ಮನೆಗೆ ತೆಗೆದುಕೊಂಡು ಹೋದರು.

ಗುಂಡಿ ಅಗೆಯುವಾಗ ಮನೆಯವರು ಇರಲಿಲ್ಲ. ನಾಣ್ಯಗಳನ್ನು ಹಂಚಿಕೊಳ್ಳುವಾಗ ಕೂಲಿಕಾರರಲ್ಲಿ ಜಗಳಕ್ಕೆ ಕಾರಣವಾಗಿ ಈ ಸುದ್ದಿ ಪೊಲೀಸ್ ಅಧಿಕಾರಿಗಳ ಗಮನಕ್ಕೆ ಬರುತ್ತಿದ್ದಂತೆಯೆ ಕೂಲಿಕಾರರು 175 ಚಿನ್ನದ ನಾಣ್ಯ ಹಾಗೂ ಮಡಕೆ ಚೂರುಗಳನ್ನು ತಾಲ್ಲೂಕು ದಂಡಾಧಿಕಾರಿಗಳ ವಶಕ್ಕೆ ಕೊಟ್ಟರು.

ನಾಣ್ಯಗಳು ಇಕ್ಕೇರಿ ಅರಸರ ಕಾಲದಲ್ಲಿ ಚಲಾವಣೆಯಲ್ಲಿದ್ದಿರಬೇಕೆಂದು ಊಹಿಸಿದ ಅಧಿಕಾರಿಗಳು ತಜ್ಞರಿಂದ ಸಂಶೋಧನೆ ನಡೆಸುವಂತೆ ಸರ್ಕಾರಕ್ಕೆ ತಿಳಿಸಿದ್ದಾರೆ.

2ನೇ ಪುಟದಿಂದ

ಅನುಭವ ಅವುಕವುಕೆ. ಹಂಗೇ ಒಂದ್ ಉದಾ : ಒಂದ್ ಊರ್‌ಲಿ ಮೂರ್ ಜನ ಕುರ್‌ಡರ್ ಇದ್ದುವೆ. ಅವುಕೆ ಆನೆ. ನೋಡಕ್ಕುತಾ ತುಂಬಾ ಆಸೆ. ಒಬ್ಬ ಬುದ್ಧಿವಂತ ಅವರ್ನ ಕರ್ಕಂಡ್ ಹೋತ್. ಒಂದನೆಯವ ಹೋಗಿ ಆನೆದ್ ಬಾಲನ ಉದ್ದಕ್ಕೆ ಮುಟ್ಟಿತ್. ಎರಡ್ನೆಯವ ಅದರ ಕಾಲ್‌ನ ಉದ್ದಕೆ ಪೂಜಿತ್. ಇನ್ನ್ ಮೂರ್ನೆಂವ ಅದರ ಹೊಟ್ಟೆನ ಅಡ್ಡಕ್ಕೆ ಸವುರ್‌ತ್. ಕುರುಡರ್ ಆನೆ ನೋಡ್ದ ಕುಸೀಲಿ ಅವರವರ ಅನುಭವನ ಹೇಳಿಕೆ ಸುರ್ ಮಾಡ್ದೊ. ಬಾಲ ಮುಟ್ಟಿದವ ಹೇಳ್ತ್ ಆನೆತೇಳ್ರೆ ಎಂತಾಲಾ ಬರೀ ಒಂದು ಕೋಲು. ಕಾಲ್ ಮುಟ್ಟಿದವ ಹೇಳ್ತ್ ಬಾರಿದೊಡ್ಡ ಆನೆಗಡ ಅದ್ ಎಂತಾ ಬರೀ ಒಂದ್ ಕಂಬ. ಹೊಟ್ಟೆ ಮುಟ್ಟಿದವ ಹೇಳ್ತ್ ಆನೆ ಬರೀ ಒಂದು ಗೋಡೆ ಇದ್ದಂಗೆತಾ. ನೀವು ಇವರ ಮಾತ್‌ನ ನಂಬುದಾದರೆ ನನ್ನದೇನು ಅಡ್ಡಿ ಇಲ್ಲೆ. ನಾನ್ ಮಾತ್ರ ಆನೆನ ನೋಡಿಯೇ ತಿಳಿಯದು.

"ಅರೆಭಾಷೆ ಜನರೇ ಸಂಗಾತಿಯನ್ನು ಕೇಳಿ ಓದುವುದಕ್ಕಿಂತ ಕೊಂಡು ಓದಿ"

- ಅಣ್ಣೆಚೀರಾ ಭಾರತಿ ಸೋಮಣ್ಣ, ಮಕ್ಕಂದೂರು ಗ್ರಾಮ

# ಭಾರತಕ್ಕೆ ಹೆಸರು ತಂದ 'ಭುವನ ಸುಂದರಿ' ಬೆಂಗಳೂರಿನ ಲಾರಾ ದತ್ತ

ಕಳೆದ ಆರು ವರ್ಷಗಳಲ್ಲಿ ಭಾರತಕ್ಕೆ ಎರಡನೆಯ 'ಭುವನ ಸುಂದರಿ' ಬಿರುದು ತಂದುಕೊಟ್ಟ ಲಾರಾದತ್ತ. ಮೊದಲನೆಯವಳು ೧೯೯೪ರ ಬಿರುದಾಂಕಿತೆ ಸುಷ್ಮಿತಾ ಸೇನ್, ಹಾಗೂ ಕೆಲವು ವರ್ಷಗಳಿಂದೀಚೆಗೆ ಜಗತ್ತಿನ ಅಪ್ರತಿಮ ಸುಂದರಿಯರ ಸಾಲಿನಲ್ಲಿ ಐದನೆಯ ಭಾರತೀಯಳಾದ ಬೆಂಗಳೂರಿನ ಹುಡುಗಿ ಲಾರಾ ದತ್ತಳ ಬಗ್ಗೆ ಈಗಾಗಲೇ ಜಗತ್ತಿನ ಉದ್ದಗಲಕ್ಕೂ ಟನ್‌ಗಟ್ಟಲೆ ಬರೆಯಲಾಗಿದೆ. ಆದರೆ ಈ ಬಾರಿಯ 'ಭುವನ ಸುಂದರಿ'ಯ ವೈಶಿಷ್ಟ್ಯವೆಂದರೆ ತೀರ್ಪುಗಾರರು ಆಕೆಯ ಮಾತುಗಳಿಂದ ಅವಾಕ್ಕಾದುದು. ನಿಕೋಸಿಯಾದಲ್ಲಿ ಸೌಂದರ್ಯ ಸ್ಪರ್ಧೆ ನಡೆಯುವಾಗ 'ಕಟ್ಟಡದ ಹೊರಗೆ ಸ್ಪರ್ಧೆಯನ್ನು ಪ್ರತಿಭಟಿಸುತ್ತಿರುವವರಿಗೆ ಅವರದು ತಪ್ಪು ಎಂದು ನೀವು ಹೇಗೆ ಮನವರಿಕೆ ಮಾಡಿಕೊಡುತ್ತೀರಿ' ಎಂಬ ತೀರ್ಪುಗಾರರ ಪ್ರಶ್ನೆಗೆ ಲಾರಾ ನೀಡಿದ ಉತ್ತರವೇ ಆಕೆಗೆ ಹೊಸ ಸಹಸ್ರ ಮಾನದ ಮೊದಲ 'ಭುವನ ಸುಂದರಿ'ಯ ಕಿರೀಟ ತಂದು ಕೊಟ್ಟಿತು. 'ಭುವನ ಸುಂದರಿ'ಯಂತಹ ಸೌಂದರ್ಯ ಸ್ಪರ್ಧೆಗಳು ನಮ್ಮಂತಹ ತರುಣಿಯರಿಗೆ ನಮಗೆ ಬೇಕಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಪ್ರೇರೇಪಿಸುತ್ತವೆ. ಅದು ಕೈಗಾರಿಕೆಯೇ ಇರಬಹುದು, ರಾಜಕಾರಣವೇ ಆಗಬಹುದು ಅಥವಾ ಸೈನ್ಯವೇ ಆಗಿರಬಹುದು, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಲು ವೇದಿಕೆ ಕಲ್ಪಿಸಿ, ನಮ್ಮನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತವೆ', ಎಂಬ ಅವಳ ಉತ್ತರಕ್ಕೆ ತೀರ್ಪುಗಾರರು ತಲೆದೂಗಬೇಕಾದರೆ ಆಕೆಯ ಉತ್ತರಿಸುವ ಶೈಲಿ ಎಂತಹದಿರಬಹುದು?

ಲಾರಾ ಎಷ್ಟು ಕುಶಾಗ್ರಮತಿಯೆಂದರೆ ಸ್ಪರ್ಧೆ ನಡೆದ ಕ್ರೀಡಾಂಗಣವನ್ನು ಪ್ರವೇಶಿಸುವಾಗ ಬಾಗಿಲಲ್ಲಿ ನಡೆಯುತ್ತಿದ್ದ ಪ್ರತಿಭಟನೆಯನ್ನು ನೋಡಿ" ಇವತ್ತು ಈ ಬಗ್ಗೆಯೇ ಪ್ರಶ್ನೆ ಕೇಳಲಾಗುತ್ತದೆನೋ" ಎಂದುಕೊಂಡಿದ್ದಳಂತೆ. ಅದು ಹಾಗೆಯೇ ಆಯಿತು.

ಆಕೆಯು ಉತ್ತರಗಳು ಲಾರಾಳ ಕುಶಾಗ್ರಮತಿಗೆ ನಿದರ್ಶನವೆನಿಸಿದುವು. ಮಹಿಳಾ ರಾಜಕಾರಣಿಗಳು ಪುರುಷ ರಾಜಕಾರಣಿಗಳಿಗಿಂತ ಹೇಗೆ ಭಿನ್ನ ಎಂಬ ಪ್ರಶ್ನೆಗೆ "ಮಹಿಳೆಯರಲ್ಲಿ ಸಂವೇದನಾಶೀಲತೆ ಸ್ವಲ್ಪ ಹೆಚ್ಚಿರುತ್ತದೆ' ಎಂದುತ್ತರಿಸಿದಳಾಕೆ.

ಭರತನಾಟ್ಯದ ಕೆಲವು ಹೆಜ್ಜೆಗಳನ್ನು ಹಾಕುವಂತೆ ತೀರ್ಪುಗಾರರು ಕೇಳಿದಾಗ " ನಾನು ಉದ್ದನೆಯ ಗೌನ್ ಧರಿಸಿದ್ದೇನೆ. ಈ ಉಡುಪಿನಲ್ಲಿ ಅದು ಸಾಧ್ಯವಿಲ್ಲ" ಎಂದು ತಟ್ಟನೆ ಉತ್ತರಿಸಿದಳು. ಆದರೆ ನಾಟ್ಯದ ಕೆಲವು ಹಸ್ತಮುದ್ರೆಗಳನ್ನು ಪ್ರದರ್ಶಿಸಿ, ಚಪ್ಪಾಳೆಗಿಟ್ಟಿಸಿದಳು.

ಸೌಂದರ್ಯಆರಾಧನೆ ಹಾಗೂ ದಿಟ್ಟತನ ಲಾರಾಗೆ ರಕ್ತಗತವಾಗಿ ಬಂದ ಗುಣ. ಆಕೆಯ ತಾಯಿ ಜೆನ್ನಿಫರ್ ದತ್ತರನ್ನು (ಅರೆ ಯೂರೋಪಿಯನ್)೧೯೬೭ರಲ್ಲಿ 'ಮಿಸ್ ಮದ್ರಾಸ್" ಬಿರುದು ಅಲಂಕರಿಸಿತ್ತು. ಪಂಜಾಬಿ ತಂದೆ ನಿವೃತ್ತ ವಿಂಗ್ ಕಮಾಂಡರ್ ಲಲಿತ್ ಕುಮಾರ್ ದತ್ತ ಅಚ್ಚುಮೆಚ್ಚಿನ ಕಿರಿಯ ಮಗಳು ಲಾರಾ ತನ್ನಂತೆಯೇ ವಾಯುಪಡೆ ಸೇರಲೆಂಬ ಮಹತ್ವಾಕಾಂಕ್ಷೆ ಹೊಂದಿದವರು(ಬೋರಿಸ್ ಪಾಸ್ಟರ್ ನಾಕ್‌ರವರ ಅಜರಾಮರ ಕಾದಂಬರಿ "ಜಾ. ಝಿವ್ಯಾಗೋ' ದ ನಾಯಕಿಯ ಹೆಸರನ್ನೇ ಮಗಳಿಗಿಟ್ಟರು ಪೈಲಟ್ ಆದವಳು ಲಾರಾಳ ಅಕ್ಕ ಚೆರಿಲ್. ದೊಡ್ಡಕ್ಕ ಸಬ್ರೀನಾ ಬೆಂಗಳೂರಿನ ಗೃಹಿಣಿ.

ದೆಹಲಿಯಲ್ಲಿ ಹುಟ್ಟಿದ ೨೧ ವರ್ಷದ ಲಾರಾ ಓದಿದ್ದು, ಬೆಳೆದದ್ದೆಲ್ಲ ಬೆಂಗಳೂರಿನಲ್ಲಿ ಎಂಬುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಬೆಂಗಳೂರಿನ ಸೇಂಟ್ ಫ್ರಾನ್ಸಿಸ್ ಝೇವಿಯರ್ಸ್ ಕಾಲೇಜಿನಿಂದ ಸಮೂಹ ಸಂಪರ್ಕ(ಪತ್ರಿಕೋದ್ಯಮ) ದಲ್ಲಿ ಪದವಿ ಪಡೆದಿರುವ ಲಾರಾ ಎರಡು ವರ್ಷಗಳ ಹಿಂದೆ ಫ್ಯಾಷನ್ ಜಗತ್ತಿನ ಹೊಸ ಅವಕಾಶಗಳನ್ನರಸುತ್ತ ಮುಂಬಯಿಗೆ ಹೋದಳು. ಅಲ್ಲಿಯ ಸಂತ ಝೇವಿಯರ್ ಕಾಲೇಜಿನಲ್ಲಿ ಆಕೆ ಈಗಲೂ ಬಿ.ಎ. ಅರ್ಥಶಾಸ್ತ್ರ ವಿದ್ಯಾರ್ಥಿನಿ.

ಎಳನೆಯ ವಯಸ್ಸಿನಿಂದಲೇ ಆಕೆಗೆ "ಮಿಸ್ ಇಂಡಿಯಾ" (ಫೆಮಿನಾ) ಬಿರುದಿನ ಹುಚ್ಚು. ಈ ವರ್ಷದ ಆರಂಭದಲ್ಲಿ ಆಕೆಗೆ ಆ ಬಿರುದೂ ಗಿಟ್ಟಿತ್ತು. ಸೌಂದರ್ಯ ಹಾಗೂ ಫ್ಯಾಶನ್ ಜಗತ್ತಿನಲ್ಲಿ ಒಂದೊಂದೇ ಮೆಟ್ಟಿಲು ಹತ್ತುತ್ತ ಆಕೆ ಎತ್ತರಕ್ಕೇರಿದವಳು. "ಗ್ಲಾಡ್‌ರಾಗ್ಸ್" ಪತ್ರಿಕೆಯ ಸೂಪರ್ ಮಾಡೆಲ್(೧೯೯೫-೯೬), "ಮಿಸ್ ಇಂಟರ್ ನ್ಯಾಷನಲ್ ಟೂರಿಸಂ" (೧೯೯೬-೯೭) ಪ್ರಶಸ್ತಿಗಳು ಆಕೆಯ ಗೆಲುವಿನ ಸೋಪಾನಗಳೆನಿಸಿದವು.

"ಮಿಸ್ ಯೂನಿವರ್ಸ್" ವ್ಯವಸ್ಥಾಪಕರ ಅತಿಥಿಯಾಗಿ ಮುಂದಿನ ಒಂದು ವರ್ಷ ನ್ಯೂಯಾರ್ಕ್‌ನಲ್ಲಿ ನೆಲೆಸಲಿರುವ ಲಾರಾಗೆ ಪತ್ರಕರ್ತೆಯಾಗಿ "ಸತ್ಯವನ್ನು ಹೊರಗೆಡಹುವ" ಆಸೆಯಂತೆ, ಅಂತೆಯೇ ಆಕೆಗೆ ಸಿಎನ್‌ಎನ್ ಟಿವಿಯ ಯುದ್ಧ ವರದಿಗಾರ್ತಿ ಕ್ರಿಶ್ಚಿಯನ್ ಅಮನ್‌ಪೈರ್‌ಳೇ ಆದರ್ಶ.

ಭಾರತದಲ್ಲಿ ನಿರಕ್ಷರ ಕುಕ್ಷಿಗಳಾಗಿರುವ ಮಹಿಳೆಯರಲ್ಲಿ ಏಡ್ಸ್ ಬಗ್ಗೆ ಜಾಗೃತಿ ಮೂಡಿಸಲು ಭಾರೀ ಕಾರ್ಯಕ್ರಮವನ್ನು ಆಕೆ ಹಮ್ಮಿಕೊಂಡಿದ್ದಾಳೆ.

ಈ "ಭುವನ ಸುಂದರಿ" ಭಾರತೀಯ ಹೆಣ್ತನದ ಪ್ರತೀಕ. "ಹೆಣ್ಣಾದವಳು ತನ್ನ ಗಂಡನಿಗೆ ಕೊಡಬಹುದಾದ ಶ್ರೇಷ್ಠ ಕೊಡುಗೆಯೆಂದರೆ ಮಗು. ಬೇಷರತ್ ಪ್ರೀತಿ ಹಾಗೂ ಪಾತಿವ್ರತ್ಯವೂ ಅಷ್ಟೇ ಮುಖ್ಯ" ಎಂಬುದು ಅವಳ ಧ್ಯೇಯ ವಾಕ್ಯ. ಈ ದೃಷ್ಟಿಯಿಂದ ಆಕೆಯ ಗೆಳೆಯ ಹಾಗೂ ಟಿವಿ ತಾರೆ ಕೆಲ್ಲಿ ದೂರ್ಜಿ ಅದೃಷ್ಟವಂತ.

ಐದಡಿ ಎಂಟಂಗುಲ ಎತ್ತರದ ಲಾರಾಗೆ ಸಾಹಸ ಕ್ರೀಡೆಗಳೆಂದರೆ ಅಚ್ಚುಮೆಚ್ಚು. ಶಿಲಾರೋಹಣ, ಪ್ಯಾರಾಗ್ಲೈಡಿಂಗ್, ಪರ್ವತಾ ರೋಹಣ ಹಾಗೂ ಬಂಗಿ ಜಂಪಿಂಗ್‌ನಲ್ಲಿ ಆಕೆಯದು ಎತ್ತಿದ ಕೈ. ಹಿಂದಿನ ವಿಶ್ವಸುಂದರಿಯರಂತೆ ಆಕೆ ಸುತಾರಾಂ ಚಲನಚಿತ್ರರಂಗ ಪ್ರವೇಶಿಸುವುದಲಿಲ್ಲ ಎಂದು ಅಕ್ಕ ಸಬ್ರೀನಾ ಹೇಳಿದ್ದಾರೆ. "ಭುವನ ಸುಂದರಿ" ಪದವಿಯು ಅನೇಕ ಹೊಸ ಅವಕಾಶಗಳೆಡೆಗೆ ನನ್ನನ್ನು ಕರೆದೊಯ್ಯುತ್ತದೆ" ಎಂದು ಲಾರಾ ನಂಬಿದ್ದಾಳೆ." ಬದುಕಿನಲ್ಲಿ ಅತ್ಯಂತ ಮಹತ್ವದ ಸಂಗತಿ ಎಂದರೆ ಅದನ್ನು ಪರಿಪೂರ್ಣವಾಗಿ ಬದುಕುವುದು" ಎಂಬುದು ಆಕೆಯ ಸಂದೇಶ.

– ಸಂಗಾತಿ ವರದಿ.

## ಸಂಗಾತಿ ಭವಿಷ್ಯ : ಜೂನ್ 16 - 30, 2000

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ :** ದೈವಾನುಕೂಲವಿಲ್ಲ. ಕುಟುಂಬದಲ್ಲಿ ಅನಾರೋಗ್ಯ ಸಂಭವವಿದೆ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳಬಹುದು. ಮಧ್ಯಂತರದಲ್ಲಿ ಶತ್ರುಗಳು ದೂರವಾಗಿ ಮನಸ್ಸಿಗೆ ನೆಮ್ಮದಿಯಾಗಬಹುದು.

**ವೃಷಭ ರಾಶಿ :** ಹಣಕಾಸಿನ ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ಅನಾರೋಗ್ಯ ಕಾಡಲಿದೆ. ಗೃಹವಲಯದಲ್ಲಿ ನೆಮ್ಮದಿ ಇಲ್ಲ. ಮಿತ್ರರಿಂದ ಕಿರಿ ಕಿರಿ ತಪ್ಪಿದ್ದಲ್ಲ. ಸಂಸಾರದಿಂದ ದೂರ ಆಗುವಿರಿ. ಮಾಸಾಂತ್ಯದೊಳಗೆ ಚಿಂತೆಯು ಸ್ವಲ್ಪ ಮಟ್ಟಿಗೆ ಕಡಿಮೆ ಆಗುವುದು. ಶನೀಶ್ವರನನ್ನು ಆರಾಧನೆ ಮಾಡಿಕೊಂಡು ಬನ್ನಿ.

**ಮಿಥುನ ರಾಶಿ :** ಗೃಹವಲಯದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ಸಂಸಾರದ ಸದಸ್ಯರಿಗೆ ಅನಾರೋಗ್ಯ ಕಾಡಲಿದೆ. ಸ್ಥಾನಮಾನಗಳಿಗೆ ಧಕ್ಕೆ ಬರಬಹುದು. ಮಿತ್ರರೊಡನೆ ಸಲುಗೆ ಬೇಡ. ಲಗ್ನ ಕಾರ್ಯಗಳು ಕೈಗೂಡುವುದು.ದೇವತಾ ಕ್ಷೇತ್ರಗಳಿಗೆ ಯಾತ್ರೆ ಕೈಗೊಳ್ಳುವಿರಿ.

**ಕರ್ಕಾಟಕ ರಾಶಿ :** ಖರ್ಚು ವೆಚ್ಚಗಳು ಹೆಚ್ಚಾಗುವುದು. ಆರೋಗ್ಯಕ್ಕೆ ಧಕ್ಕೆ ಬರಲಾರದು. ಸ್ತ್ರೀಯರಿಂದ ಕಿರುಕುಳ ಬರಬಹುದು. ಆದರೆ ಗುಪ್ತವಾಗಿ ಚಿಂತೆಯಲ್ಲಿ ಮುಳುಗಬೇಡಿ. ಗೌರವಗಳಿಗೆ ಯಾವುದೇ ಕೊರತೆ ಬರಲಾರದು. ಆದಾಯವೂ ಹೆಚ್ಚಾಗುವುದು.

**ಸಿಂಹ ರಾಶಿ :** ಯವುದೇ ಕಾರ್ಯಗಳನ್ನು ಮಾಡುವಾಗ ಧೃಢಮನಸ್ಸಿನಿಂದ ಮಾಡಿ. ಸಾಲ ವಸೂಲಾತಿ ಆಗಬಹುದು. ಸಂಸಾರದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ಸ್ಥಾನಮಾನಗಳಿಗೆ ಕೊರತೆ ಇಲ್ಲ. ವ್ಯವಹಾರ, ಉದ್ಯೋಗದಲ್ಲಿ ಸ್ವಲ್ಪಮಟ್ಟಿಗೆ ಲಾಭವಿದೆ. ದೇವತಾರಾಧನೆ ಮಾಡಿ.

**ಕನ್ಯಾ ರಾಶಿ :** ಆಸ್ತಿ ಪಾಸ್ತಿಗಳಿಗೆ ಶತ್ರುಗಳಿಂದ ಹಾನಿಯಾಗುವ ಸಂಭವವಿದೆ. ರಕ್ತದೊತ್ತಡದಿಂದ ತೊಂದರೆಯಿದೆ. ಮನಸ್ಸಿನಲ್ಲಿ ಗುಪ್ತವಾಗಿರುವ ವಿಷಯವನ್ನು ದೂರಮಾಡಿ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ. ವಿಷ್ಣುವಿನ ಆರಾಧನೆಯಿಂದ ತುಸು ನೆಮ್ಮದಿ.

**ತುಲಾ ರಾಶಿ :** ಕುಟುಂಬ ವಲಯದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ಅನಾರೋಗ್ಯ ಕಾಡಲಿದೆ. ಸ್ತ್ರೀಯರಿಗೆ ಎಡಭಾಗಕ್ಕೆ ವ್ಯಾದಿ ಕಾಣಿಸಬಹುದು. ಹಣಕಾಸಿನ ವ್ಯವಹಾರ ಸ್ವಲ್ಪ ಮಟ್ಟಿಗೆ ಉತ್ತಮವಿದೆ. ದೇವತಾರಾಧನೆ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ.

**ವೃಶ್ಚಿಕ ರಾಶಿ :** ಕುಟುಂಬದಲ್ಲಿ ನಿಷ್ಠುರಗಳು ವಿಮೋಚನೆಯಾಗಿ ನೆಮ್ಮದಿ ಇರುವುದು. ಶತ್ರುಗಳು ಹಿಂದೇಟು ಹಾಕುತ್ತಾರೆ. ರೋಗದಿಂದ ವಿಮುಕ್ತಿ. ಹೊಸ ಭೂಮಿ ಖರೀದಿ ಯೋಗವಿದೆ. ಹಣಕಾಸಿನ ವ್ಯವಹಾರ ಸುಧಾರಿಸುವುದು. ನಾಗಾರಾಧನೆ ಮಾಡಿಕೊಂಡು ಬಂದಲ್ಲಿ ಶುಭ. ಪುತ್ರಸಂತಾನ ಭಾಗ್ಯವಿದೆ. ಮಿತ್ರರಿಂದ ಮನಸ್ಸಿಗೆ ಮುದ ನೀಡುವ ವಿಷಯ ಪ್ರಾಪ್ತವಾಗುವುದು.

**ಧನಸ್ಸು ರಾಶಿ :** ಕೆಲಸ ಕಾರ್ಯಗಳು ಸ್ವಲ್ಪ ನಿಧಾನಗತಿಯಲ್ಲಿ ಸಾಗುವುದು. ಆರೋಗ್ಯ ಸುಧಾರಿಸುವುದು. ಉಲ್ಬಣಗೊಂಡ ಮಾನಸಿಕ ವ್ಯಥೆಯು ನಿಧಾನಗತಿಗೆ ತಿರುಗುವುದು. ಹೊಸ ವ್ಯವಹಾರ ಉದ್ಯೋಗಗಳಿಗೆ ಇದು ತಕ್ಕ ಸಮಯವಲ್ಲ. ದೇವತಾರಾಧನೆ ಮಾಡಿಸಿ.

**ಮಕರ ರಾಶಿ :** ಗುರು ಹಿರಿಯರ ಅನುಗ್ರಹವಿದೆ. ಮನಸ್ಸಿಗೆ ನೆಮ್ಮದಿ ಸಿಗುವುದು. ಬಂದುಗಳ ಆಗಮನದಿಂದ ಸಂತೋಷ. ಪುತ್ರಸಂತಾನ ಭಾಗ್ಯವಿದೆ. ಶತ್ರುಗಳು ಹಿಂದೆ ಬೀಳುವುದರಿಂದ ಕಾರ್ಯ ಜಯ. ದೇಹದಲ್ಲಿ ಅನಾರೋಗ್ಯ ಸಂಭವವಿದೆ. ಶನಿದೇವರನ್ನುಆರಾಧಿಸಿ.

**ಕುಂಭ ರಾಶಿ :** ದೈವಾನುಕೂಲ ಚೆನ್ನಾಗಿಲ್ಲ. ಗೃಹವಲಯದಲ್ಲಿ ದೇವತಾಕಾರ್ಯ ಮಾಡುವುದರಿಂದ ಲಗ್ನಗಳು ಕೈಗೂಡುವುದು. ಕುಟುಂಬ ಅಭಿವೃದ್ಧಿ ಆಗುವುದು. ಮನಸ್ಸಿನಲ್ಲಿ ಗುಪ್ತವಾಗಿದ್ದ ವಿಷಯ ನೆರವೇರುವುದರಿಂದ ಮನಸ್ಸಿಗೆ ನೆಮ್ಮದಿ. ಕುಟುಂಬದ ಸದಸ್ಯರಿಗೆ ಅನಾರೋಗ್ಯ ಕಾಡುವುದು.

**ಮೀನ ರಾಶಿ :** ಕುಟುಂಬ ವಲಯದಲ್ಲಿ ಸ್ವಲ್ಪ ಮಟ್ಟಿಗೆ ನೆಮ್ಮದಿ ಇದೆ. ಶತ್ರುಗಳು ದೂರವಾಗುವುದರಿಂದ ಮನಸ್ಸಿಗೆ ನೆಮ್ಮದಿ. ಆದರೆ ಮನಸ್ಸಿಗೆ ಒಂದು ರೀತಿಯ ಬೇಸರ. ಮನಸ್ಸಿನಲ್ಲಿ ಗುಪ್ತವಾಗಿರುವ ವ್ಯವಹಾರಗಳು ಬಹಿರಂಗವಾಗಲಿದೆ. ದೂರದ ಊರಿಗೆ ಪ್ರಯಾಣಕ್ಕೆ ಆಹ್ವಾನ ಬರಲಿದೆ.

---

**ಅಹಂಕಾರಕ್ಕೆ ಉದಾಸೀನವೆ ಮದ್ದು**

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಧಾರಾವಾಹಿ -12

**ಹಿಂದೆ ನಡದದ್.......**

ಪೋಲಿಸರ್ ಕಬಿನಿ ಹೊಳೆಗೆ ಹಾರಿ ಪ್ರಾಣ ಬುಡಿಕೆ ಪ್ರಯತ್ನಿಸಿದ ಆ ಕುಂಟಿ ಗೂಡೆನ ಪ್ರಾಣನ ಉಳ್ಸಿದ ಮೇಲೆ ಮಿ. ರಾಜು ಅಲ್ಲಿಂದ ಹಂಗೇ ಹೊಳೆ ಹರ್ದಂಗೆ ಕೆಳ್‌ಗಡೆಗೆ ನಡ್ದದೆ ಆಗ ಅಲ್ಲೊಬ್ಬ ಸನ್ಯಾಸಿ ಹೊಳೆ ಒಳಗೆಮೀಯಿತಿದ್ದದೆ. ಸರಿ ಅವನ ವೇಷನ ಅಪಹರಿಸಿ ಆ ವೇಷಲೇ ಲಾರಿ ಸಾಹುಕಾರನಹತ್ರ ಹಣನ ಚೊಟ್ಟಿದೆ. ಅಲ್ಲಿಂದ ಪೋಲಿಸ್ ಡ್ರೆಸ್‌ನ ಹಾಕಂಡ್ ಟ್ರಾಫಿಕ್ ಇನ್ಸ್‌ಪೆಕ್ಟರ್ ತರ ಕೆಲ್ಸ ಮಾಡಿದೆ.

ಮುಂದಕೆ...........

ಒಳ್ಳೆ ಕರೀಕತ್ತಲೆ ನಿರ್ಜನ ಪ್ರದೇಶ. ಪಣಕ್ ಪಣಕ್‌ತ ಮಿಂಚಿಕಂಡ್ ಹಾರಾಡುತ್ತಿದ್ದ ಮಿಣ್‌ಕ್ ಹುಳುಗಳ ಬೆಳಕ್ ಇವರ ಸುತ್ತೆಲ್ಲಾ ತಿರುಗಾಡುತಿದ್ದೊ. ದಫೇದಾರ ರಾಜು ಆ ಊರುಗೌಡ್ರ ಒಟ್ಟಿಗೆ ಬೈಕ್ ನಿಲ್ಸಿಕಂಡ್ ಇಬ್ರೂ ಸಿಗರೇಟ್‌ನ ಸೇದಿಕಂಡ್ ಮಾತಾಡಿಕಂಡ್ ನಿಂತಿದ್ದೊ.

ಗೌಡ್ರೇ ನೀವು ಇಲ್ಲೇ ರೋಡ್ ಸೈಡ್‌ಲಿ ನಿಮ್ಮ ಬೈಕ್‌ನ ನಿಲ್ಸಿಕಂಡ್ ಅದರ ಮೇಲೆ ಕುದ್ದಿರಕು. ನಿಮ್ಮ ಈ ಸಾಲ್‌ನ ತಲೆ ಮೇಲೆಂದ ಇಳಿಬುಟ್ಟ್ ಹೊದ್ದ್‌ಕಂಡಿರಿ. ನಾನ್ ಇಲ್ಲೇ ಸ್ವಲ್ಪ ದೂರಲಿ ನಿಂತ್‌ಕಂಡ್ ಹೋಗಿ ಬರುವ ಗಾಡಿನ ಚೆಕಪ್ ಮಾಡ್‌ತಿದ್ದನೆ ನಾನ್ ಒಮ್ಮೊಮ್ಮೆ ಈ ಟಾರ್ಚ್ ಬೆಳಕನ ನಿಮ್ಮ ಮ್ಯಾಲೆ ಬುಟ್ಟ್ ಸಿಗ್ನಲ್ ಕೊಡಿಕಾಕನ ನೀವು ಒಂದ್ ಸರ್ತಿ ಕೆಮ್ಮಿ ಬುಟ್ಟ್ ಜೋರಾಗಿ ಹೇ ಅಂವನ್ನ ಎಳ್ಕೊಂಡು ಬಾರಯ್ಯಾ ಇತ್ತ ಅಂತ ಜೋರಾಗಿ ಘರ್ಜಿಸಕು. ಇಷ್ಟ್ ಮಾಡಿರೆ ಸಾಕ್ ನಾನ್ ನಿಮ್ಮ ಕೈಗೆ ಮುನ್ನೂರು ರೂಪಾಯಿ ಕೊಟ್ಟನೆ ತೇಳ್ತ್. ಅದಕ್ಕೆ ಆಗಲಿ ಸ್ವಾಮಿ ನಾನ್ ಹಂಗೇ ಮಾಡಿನೆ. ನೀವು ಅದೇನ್ ಕೆಲ್ಸ ಮಾಡ್ತಿರೋ ಮಾಡ್ಕೊಳ್ಳಿತೇಳಿ ಒಪ್ಪಿಕಂಡ್ ಪುನಃ ಧಂ ಎಳೆಯಕೆ ಶುರು ಮಾಡ್ದೊ.

ದೂರಲಿ ಬಿ.ಇ.ಎಂ.ಎಲ್. ಫ್ಯಾಕ್ಟರಿ ಕಡೇಂದ ಜೋರ್ ಸೌಂಡ್ ಮಾಡಿಕಂಡ್ ಒಂದ್ ಲಾರಿ ಬರ್‌ತ್ತಿತ್. ಅದರ ಸೌಂಡ್‌ನ ಕೇಳಿಯೇ ಈ ದಫೇದಾರಂಗೆ ಅದು ಓವರ್ ಲೋಡ್ ಲಾರಿತ್ತೇಳಿ ಅರ್ಥ ಆಗಿ ಹೋತ್. ಏನಿದ್ರೂ ಅದರಲ್ಲಿ ಹದಿನಾರು ಟನ್‌ಗಿಂತ ಹೆಚ್ಚ್ ಲೋಡ್ ಉಟ್ಟು. ಬಡ್ಡಿಮಂಜ ಹತ್ರ ಬರ್ಲಿತ್ತೇಳಿಕಂಡ್ ಕೈಲಿ ಟಾರ್ಚ್ ಲೈಟ್‌ನ ಹಿಡ್‌ಕಂಡ್ ಸ್ವಲ್ಪ ಅತ್ತಕಡೆಗೆ ಹೋತ್. ಲಾರಿ ಹತ್ರ ಬಂದಂಗೆ ಡ್ರೈವರ್‌ನ ಮುಖದ ಮೇಲೆ ಬೆಳಕ್‌ನ ಬುಟ್ಟತ್. ಆಮೇಲೆ ಲಾರಿ ಬೋರ್ಡ್ ಮೇಲೆ ಬೆಳಕ್‌ನ ಬುಟ್ಟ್ ನಿಲ್ಸ್ ನಿಲ್ಸ್‌ತಾ ಟಾರ್ಚ್ ಬೆಳಕ್‌ನ ಅಲ್ಲಾಡಿಸಿ ಸಿಗ್ನಲ್ ಕೊಡ್ತ್. ತುಂಬಾ ಲೋಡ್ ಜಾಸ್ತಿ ಇದ್‌ದರಂದ ಲಾರಿನ ಪಕ್ಕಕೆ ತರದೆ ಆ ರಸ್ತೆ ಮಧ್ಯಲೇ ಡ್ರೈವರ್ ನಿಲ್ಸಿತ್. ಕೂಡ್ಲೆ ಡ್ರೈವರ್ ಕಡೆಗೆ ಹೋಗಿ ಹೇ ಡ್ರೈವರ್ ಎಷ್ಟೋ ಲೋಡ್ ಹಾಕಿದ್ದೀಯಾ ಎಲ್ಲಿ ನಿಂದು ಟ್ರಿಪ್‌ಶೀಟ್, ಪರ್ಮಿಟ್ ಎರಡನ್ನೂ ಎತ್ತಿಕಂಡ್ ಕೆಳಗೆ ಇಳಿ. ಅಲ್ಲಿ ನೋಡ್ ಸಾಹೇಬ್ರು ಕರೀತಾ ಒಳೋ ತಾ ಅಲ್ಲಿ ದೂರಲಿ ಬುಲ್ಲೆಟ್ ಮ್ಯಾಲೆ ಕುದ್ದಿದ್ದ ಇನ್‌ಸ್ಪೆಕ್ಟರ್ ಗೌಡ್ರನ್ನ ಟಾರ್ಚ್ ಬೆಳಕ್‌ನ ತೋರ್ಸಿತ್. ಒಳ್ಳೆ ಶನಿ ವಕ್ರಸಿಕಂಡತಲ್ಲಾ ತ್ತೇಳಿ ಡ್ರೈವರ್ ಮನಸ್‌ಲೇ ಬೊಯ್ದಿಕಂಡ್ ಟ್ರಿಪ್‌ಶೀಟ್, ಮತ್ತೆ ಡಿ.ಎಲ್ ಬುಕ್ಕ್ ಎತ್ತಿಕಂಡ್ ಅದರೊಳಗೆ ನೂರರ ಎರಡು ನೋಟ್‌ನ ಸೇರ್ಸಿ ಇಟ್ಟ್ ಸಾಬ್ ಖಾಲೀ ಚಾರ್ ಟನ್ ಜಾದ ಹೈ ಯೇ ಮಾಮೂಲಿಹೈ ನಮ್ದುಕೆ ಬುಡಿತ್ತೇಳಿ ಕೊಡಿಕೆ ಹೊತ್. ಏಯ್ ಬೇಡ ಬೇಡ ತಾ ಹೇಳಿಕಂಡ್ ಲಾರಿ ಬಾಡಿ ಮೇಲೆ ಲೈಟ್ ಬುಟ್ಟ್ ನೋಡ್ತ್. ಎಲ್ಲಾ ಉದ್ದ ಉದ್ದದ ಟಿಂಬರ್ ತೊಲೆಗ ತುಂಬಿತ್ತ್. ಏಯ್ ಇಸ್‌ಕಾ ಅಂದರ್ ಕುಚ್ ಚಂದನ್‌ಕ ತುಕುಡಾ ಏನಾದ್ರೂ ಇರ್ದು ಎಲ್ಲಿ ನಾನ್ ಪೂರ್ತಾ ಚೆಕಪ್ ಮಾಡಿ ನೋಡಿನೆತ್ತೇಳಿ ಆ ಲೋಡ್ ಮೇಲೆ ಹತ್ತಿಕೆ ನೋಡ್ತ್. ಆಗ ಡ್ರೈವರ್ ಹೇಳ್ತ್ ಗಂಧ, ಚಂದನ್ ಏನೂ ಇಲ್ಲೆ ಶಾಬ್ ಬರೀ ನಾಲ್ಕ್ ತೊಲೆ ಮರ ಮಾತ್ರ ತಾ ಹೇಳಿ ಇನ್ನೂ ಒಂದ್ ನೂರರ ನೋಟ್‌ನ ಜೊತೆಗೆ ತೆಗ್ದ್ ಸೇರ್ಸಿತ್. ಈ ಮೂರು ನೋಟುಗಳ ನೋಡ್ದ ರಾಜು ದಫೇದಾರ ಆತ್ ಕೊಡಿಲ್ಲಿ. ಆ ಸಾಹೇಬ್ರ ಹತ್ರ ಹೋದ್ರೆ ನೀನ್ ಐದುನೂರು ಕೊಡಿಕ್ಕಾದೆ. ಸರಿ ಹತ್ತ್ ಮೇಲೆ ಹೊರಡ್ ತ್ತೇಳಿ ಅವನ ಡಾಕ್ಯುಮೆಂಟ್ಸ್‌ಗಳ ವಾಪಾಸ್ ಕೊಟ್ಟ್ ಕಳ್ಸಿತ್.

ಈ ಟಿಂಬರ್ ಲಾರಿ ದಾಟಿ ಹೋದಂಗೆ ಇನ್ನೊಂದು ಲಾರಿ ಹುಣಸೂರು ಕಡೇಂದ ಬರ್‍ತಾ ಇತ್. ಅದರ ನೋಡಿಕೆ ಪುಲ್ ಹೈಟ್ ಲೋಡ್ ಒಂದ್ ಸರ್ತಿ ಲಾರಿ ಲೋಡ್ ಮೇಲೆ ಲೈಟ್ ಬುಟ್ಟ್ ನೋಡ್ತ್. ಆಮೇಲೆ ಲಾರಿದ್ ನಂಬರ್ ಪ್ಲೇಟ್ ಮೇಲೆ ಲೈಟ್ ಬೆಳಕ್‌ನ ಬುಟ್ಟತ್. ಟಕ್ಕತ ರಸ್ತೆಗೆ ಅಡ್ಡ ನಿಂತ್ ಲಾರಿನ ನಿಲ್ಸಿಕೆ ಸೂಚನೆ ಕೊಡ್ತ್. ಲಾರಿ ಕ್ಯಾಬಿನ್ ಒಳಗೆ ಕುದ್ದ್‌ಕಂಡ ಆ ಡ್ರೈವರ್ ತಮಿಳ್ ಭಾಷೆಲೆ ಸಾರ್ ಇದ್ ದೊರೆಸ್ವಾಮಿ ಮೊದಲಿಯಾರ್‌ದ್ ಲಾರಿ ಸಾರ್. ಈ ಕಾಫಿ ಲೋಡ್ ಅವ್ರುದ್ದು ತಾ, ಎಡ್ತ್‌ಕೋ ಸಾರ್ ಇಯಿಲೆ ಮೂರ್‌ನೂರು ಇರುಕ್ಕುತಾ ಅಲ್ಲಿಂದಲೇ ದುಡ್ಡ್‌ನ ಕರ್ದ್ ಕೊಡಿಗೆ ನೋಡ್ತ್. ಏಯ್ ಡ್ರೈವರ್ ಕೆಳಗೆ ಇಳ್ದ್ ಬಾ ಯಾವ್ನೋ ಅವ್ನ ದೊರೆಸ್ವಾಮಿ ಮೊದಲಿಯಾರು, ಐವತ್ತು ಮೂಟೆ ಕಾಫಿ ಚೀಲನೇ ಹೆಚ್ಚಿಗೆ ತುಂಬಿಕಂಡ್ ಇಂವಂದ್ ಜಂಭ ಬೇರೆ ಹೊಡಿತ್ತಿಯೇನೊ ಬಾರಯ್ಯ ಇಳ್ದು ಕೆಳಗೆ. ಸಾಹೇಬ್ರ ಹತ್ರ ನಿನ್ನ ಪುರಾಣನ ಹೇಳ್ವಾ ತಾ ಡ್ರೈವರ್‌ನ ಮುಖಕ್ಕೆ ಲೈಟ್ ಬುಟ್ಟ್‌ಕಂಡ್ ಲಾರಿ ಡೋರ್ ಹಿಡ್ದ್ ಹತ್ತಿ ರೋಪ್ ಹಾಕಿತ್. ಆಗ ಡ್ರೈವರ್ ಮೆತ್ತಂಗೆ ಸೀಟ್‌ಂದ ಕೆಳಗೆ ಇಳ್ದ್ ಬಂದ್ ರೊಂಬ ಅರ್ಜೆಂಟಾಯ್ ಈ ಲೋಡ್ ಇರ್ಕುದು. ಸೀಗ್ರೂಂ ವರ್‌ಕ್ಕ್ ರೀಚ್ ಆವುರ್ಕು ಸಾರ್ ತ್ತಾ ಹೇಳಿಕಂಡ್ ಇನ್ನೊ ಒಂದು

ನೋಟ್‌ನ ಸೇರ್‍ಸಿ ನಿಂಗಳೆ ಸಾಹೇಬ್ರುಕ್ಕು ಸೊಲ್ಲುಂಗೋ ಸಾರಾತ್ತೇಳಿ ನಾಲ್ಕು ನೂರು ರೂಪಾಯಿನ ಕೊಟ್ಟಿತ್. ಅಪ್ಪೊತ್ತಿಗೆ ಕೆ.ಆರ್.ಎಸ್. ಕಡೇಂದ ಯಾವುದೋ ವೆಹಿಕಲ್ ಬರ್ತಾ ಇರ್ದು ಕಂಡತ್. ಹಾಂ. ಹೊರಡ್ ಹೊರಡ್ ಸೀಗ್ರ ಹೋರಡ್ತ್ತೇಳಿ ಆ ಡೋರ್‌ನ ಬುಟ್ಟು ರಾಜು ಕೆಳಗೆ ಹಾರ್‍ತ್. ಕೆ.ಆರ್.ಎಸ್. ಕಡೇಂದ ಬರುತಾ ಇದ್ದದ್ ಟೂರಿಸ್ಟ್ ಮಕ್ಕಳ ಬಸ್ಸು ಅಪ್ಪು ದೂರ ಇರ್‌ಕಾಕನೇ ಬಸ್ ಒಳಗಿದ್ದ ಮಕ್ಕಳ ಹಾಡು, ಕುಣ್ತ, ಡೋಲ್ ಬಾರಿಸುವ ಸದ್ದ್ ಕೇಳ್‌ಸ್ತಿತ್. ಆ ಬಸ್ಸ್‌ನ ರಾಜು ಅಡ್ಡ ಹಾಕಿ ನಿಲ್ಸಿತ್. ಅಪ್ಪೊತ್ತಿಗೆ ಅದರ ಒಳಗಡೆಂದ ಮಕ್ಕ ಕಿಡಿಕಿ ಸಂದಿದ ತಲೆ ಹಾಕಿ ಜೋರಾಗಿ ಕಿರಚಾಡಿಕಂಡ್ ತಮಾಷೆ ಮಾಡಿಕೆ ಶುರು ಮಾಡ್ದೊ. ಸರಿ ಈ ಟೂರ್ ಬಂದ ಮಕ್ಕಳ ಸಂತೋಷಕ್ಕೆ ನಾನೇಕೆ ಅಡ್ಡಿ ಮಾಡೋಕುತ್ತೇಳಿ ಹಾಂ, ರೈಟ್ ರೈಟ್ ಜಾವೋತ್ತೇಳಿ ಕೈ ಬೀಸಿತ್. ಒಳಗಿದ್ದ ಮಕ್ಕ ಎಲ್ಲಾ ಟಾಟಾ ಬಾಯ್ ತೇಳಿಕಂಡ್ ನಗೆ ಆಡಿಕಂಡ್ ಹೊರಟೊ.

ಅಪ್ಪೊತ್ತಿಗೆ ಈ ಕಡೇಂದ ಕೇರಳದ ರಿಜಿಸ್ಟ್ರೇಷನ್ ಲಾರಿ ಹತ್ರ ಬಂದಿತ್. ಅದರ ನಿಲ್ಸಿಕೆ ಈ ದಫೇದಾರ ಸೂಚನೆ ಕೊಟ್ಟಂಗೆ ನೋಡ್ರೆ ಅಂವ ಮಂಗಳೂರುನವ. ಆ ಡ್ರೈವರ್ ಕೆಳಗೆ ಹಾರಿ ಇಳ್ದ್. ಬಾಯಿಲಿದ್ದ ಎಲೆ ಅಡಿಕೆನ ಪಚಕ್ಕ್‌ತ ಸೈಡಿಗೆ ಉಗ್ತ್. ಆಗ ರಾಜು ಅಂವನ ಕೇಳ್ತ್. ದಾನೆ ಮಾರಾಯಾಲ ನಿನ್ನ ಗಾಡಿಗೆ ಕರ್ನಾಟಕದ ಗೂಡ್ಸ್ ಪರ್ಮಿಟ್ ಉಟ್ಟಾಲ ಗಾಡಿ ಕೇರಳದ್, ಡ್ರೈವರ್ ಮಂಗಳೂರುದ್, ಮಾಲು ಮಾತ್ರ ಬೆಂಗಳೂರಿಗೆ ಹೊಗ್ತಾ ಉಟ್ಟು. ಅದೂ ಈ ಅಡ್ಡ ರಸ್ತೇಲಿ ಹಾಕಿ ಮುಚ್ಚೊಳೊರಿ ತಾ ಪಟಪಟನೆ ಕೇಳ್ತ್. ಆ ಡ್ರೈವರ್ ತಲೆನ ಕೆರ್ದ್‌ಕಂಡ್, ಹಲ್ಲ್ ಬುಟ್ಟ್‌ಕಂಡ್, ಏನ್ ಮಾಡೋದು ಸಾರ್. ಅರ್ಜೆಂಟ್‌ಗೆ ಪರ್ಮಿಟ್ ಸಿಕ್ಕುವುದಿಲ್ಲಾ ಅಲ್ಲವೋ. ಸಾರ್ ಎಲ್ಲಾ ಎಡ್‌ಜೆಸ್ಟ್‌ಮೆಂಟ್ ನಿಮಿಗೂ ನಮಿಗೂ ಯಾವಾಗ್ಲೂ ಎಡ್‌ಜೆಸ್ಟ್‌ಮೆಂಟ್ ಗೊತ್ತುಂಟೊ ತ್ತೇಳಿ ಪಂಚೆ ಎತ್ತಿ ಒಳಗಡೆ ನಿಕ್ಕರ್ ಜೋಬ್‌ಂದ್ ಒಂದ್ ಹಿಡಿ ಹತ್ತು ರೂ.ಗಳ ನೋಟ್‌ಗಳ ಮುದ್ದೆ ಮಾಡಿ ಕೊಡ್ತ್. ಇಪ್ಪ್ಟೆ ನೋಟ್‌ಲಿ ಒಟ್ಟು ಐನೂರು ರೂ. ಇರ್ದುತಾ ಗ್ಯಾನ ಮಾಡಿ ರಾಜು ಅದರ ಲೆಕ್ಕ ಹಾಕಿ ನೋಡ್ತ್. ಬರೀ ಇನ್ನೂರು ರೂಪಾಯಿ ಮಾತ್ರ ಉಟ್ಟು. ಎಂಥಾ ಕಿಲಾಡಿ ಡ್ರೈವರ್ ನಂಗೇ ಚಳ್ಳೆಹಣ್ಣ್‌ನ ತಿನ್ಸಿಬುಟ್ಟತಲ್ಲಾ ಕೈ ತುಂಬಾ ಬಿಡಿ ಬಿಡಿ ಮಾಡ್ದ ನೋಟ್‌ಗಳ ಕೊಟ್ಟು ಬುಟ್ಟುತಾ ಗ್ಯಾನ ಮಾಡಿಕಾಕನ ಇಲವಾಲದ ಕಡೇಂದ ಒಂದು ಮಿಟುಬುಸಿ ಮ್ಯಾಕ್ಸಿಕ್ಯಾಬ್ ಹಳದಿ ಲೈಟ್‌ನ ಹಾಕಂಡ್ ತುಂಬಾ ರಭಸಲಿ ಬರ್‍ತಾ ಉಟ್ಟು. ಆಗ ರಾಜು ರಸ್ತೆ ಮಧ್ಯೆಕ್ಕೆ ಹಾರಿ ಟಾರ್ಚ್ ಬೆಳಕನ ಅವಂಗೆ ತೋರ್‍ಸಿಕಂಡ್ ಅಡ್ಡ ನಿಂತತ್. ಆ ಮ್ಯಾಕ್ಸಿಕ್ಯಾಬ್ ಟೆಂಪೋ ಅದೇ ಸ್ಪೀಡ್‌ಲಿ ಚಕ್ಕತ ಸೈಡಿಗೆ ತಕಂಡ್ ಮುಂದಕೆ ಹೊರಟತ್. ಅಂವ ಗಾಡಿನ ನಿಲ್ಸುವ ಸೂಚನೆ ಕಾಣ್ದೇ ಇದ್ದುದರಿಂದ ಕೂಡ್ಲೆ ರಾಜು ಎಗರಿ ಹಾರಿ ಡ್ರೈವರ್ ಕಡೆ ಡೋರ್‌ನ ಹಿಡ್ಕಂಡತ್. Stop it and hands up ತ್ತೇಳಿ ಜೋರಾಗಿ ಕಿರಚಿಕಂಡತ್. ಈ "ಹ್ಯಾಂಡ್ಸ್ ಅಪ್"ತ್ತೇಳುವ ಭಾಷೆನ ಕೇಳ್ದ ಡ್ರೈವರ್ ಹೆದರಿಕಂಡತ್. ಈಗೀಗ ಈ ಚೆಕಿಂಗ್ ಸ್ಕ್ವಾಡ್‌ಗಳ ಹತ್ರ ರೈಫಲ್ ಕೂಡಾ ಇದ್ದದೆ ಗೇನ ಮಾಡಿ ಗಾಡಿನ ಸ್ವಲ್ಪ (ಸ್ಲೋ) ನಿಧಾನ ಮಾಡ್ತ್. ಆಗ ರಾಜು ಗೆಟ್ ಡೌನ್, ಗೆಟ್ ಡೌನ್ ತಾ ಆ ಡ್ರೈವರ್‌ನ ಹಿಡ್ದ್ ಎಳೆಯಕೆ ನೋಡ್ತ್. ಡ್ರೈವರ್ ಗಾಡಿನ ನಿಲ್ಸಿ ಕೆಳಗೆ ಇಳ್ತ್. ಎಯ್ ಡ್ರೈವರ್ ಏನ್ ಲೋಡ್ ಕ್ಯಾರಿ ಮಾಡ್ತಾ ಇದ್ದಿಯಾತ ಕೇಳಿಕಂಡ್ ಬಾಡಿ ಮೇಲೆ ಲೈಟ್ ಬುಟ್ಟು ನೋಡ್ತ್. ಅಲ್ಲಿ ಟಾರ್ಪಾಲಿನ್ ಮುಚ್ಚಿ ಲೋಡ್‌ನ ಕವರ್ ಮಾಡಿ ಚೆನ್ನಾಗಿ ಹಗ್ಗನ ಬಿಗ್ದಿದ್ದೊ.

ಏನ್ ಸಾರ್? ನೀವು ಗಾಡಿನ ಯಾರ್‍ದೂಂತ ನೋಡ್ದ್‌ರಾ? ಮೊನ್ನೆ ತಾನೇ ಮಾಮೂಲಿನ ಕೊಟ್ನಲ್ಲಾ ಸಾರ್? ತಿಂಗ್ಳಗೆ ಎಷ್ಟ್ ಸರ್ತಿ ಕೊಡ್ಬೇಕು ನಿಮಿಗೆ? ಹೋಗಿ ನಿಮ್ಮ ಇನ್‌ಸ್ಪೆಕ್ಟ್‌ರಿಗೆ ಕೇಳಿ. ಇದು ರಾಮಕೃಷ್ಣಪ್ಪನವರ ವೈನ್ ಗಾಡಿ ಅಂತ. ಅವರಿಗೆ ಅರ್ಥ ಆಗುತ್ತೆ ತ್ತೇಳಿ ಆ ಡ್ರೈವರ್ ತಿರುಗಿ ಇಂವಂಗೆ ಪ್ರಶ್ನೆ ಹಾಕಿ ರೋಪ್ ಹೊಡ್ತ್. ಎಯ್ ಅದೆಲ್ಲಾ ನನ್ ಜೊತೆ ಹೇಳ್ಬೇಡಾ. ಅದೆಲ್ಲಾ ಕೆ.ಆರ್.ಎಸ್.ನವರದು ಆಯ್ತು. ಇವತ್ತು ಅಬ್ಕಾರಿ ಇನ್‌ಸ್ಪೆಕ್ಟರ್ ಮುಂದಣ್ಣನವರು ಬಂದಿರೋದು ನೋಡಲ್ಲಿ ಕರೀತವ್ರೇ. ಎತ್ಕೊ ನಿನ್ನ ಪರ್ಮಿಟ್, ಮತ್ತೆ ಇನ್‌ವಾಯ್ಸ್‌ಗಳ ತಿರುಗಿ ಇವನೂ ಜಬರ್‌ದಸ್ತ್ ಮಾಡ್ತ್. ಗಾಡಿ ನಂಬರ್‌ನ ಮತ್ತೆ ನೇಮ್ ಬೋರ್ಡ್ ಒಮ್ಮೆ ಲೈಟ್ ಹಾಕಿ ನೋಡ್ತ್. ಪೆನ್ ತೆಗ್ದ್ ಅಂಗೈಲಿ ಬರ್ದ್‌ಕಂಡಂಗೆ ಮಾಡ್ತ್. ಇದರೆಲ್ಲಾ ನೋಡ್ದ ಟೆಂಪೋ ಒಳಗೆ ಕುದ್ದಿದ್ದ ಇನ್ನೊಬ್ಬ ಕೆಳಗೆ ಇಳ್ದ್ ಬಾತ್. ಆಗ ಈ ದಫೇದಾರ ಏನಯ್ಯಾ ಇನ್‌ವಾಯ್ಸ್ ಮೇಲೆ ಹೆಚ್ಚಿಗೆ ಎಷ್ಟು ಒರಿಜಿನಲ್, ಎಷ್ಟು ಲೋಕಲ್ ಮಾಲು ಉಟ್ಟುತಾ ಕೇಳ್ತ್. ಬಿಡಿ ಸಾರ್ ಅದೆಲ್ಲಾ ಮಾಮೂಲಿ ತಾನೆ. ಎಷ್ಟಿದೆ. ಇಲ್ಲಾಂತ ನಮಿಗೆ ಏನ್ ಸಾರ್ ಗೊತ್ತು ಹೋಗಲಿ ಬಿಡಿ ಇದನ್ನ ನೀವು ಮೊಡ್ಕಣಿ ತ್ತೇಳಿ ಒಂದ್ ದಪ್ಪದ ಉದ್ದದ ಕವರ್‌ನ ಕೊಟ್ಟಿತ್. ಆಮೇಲೆ ಏಯ್ ಲಿಂಗರಾಜು ಸಾಹೇಬ್ರಿಗೆ ಒಂದ್ ಕ್ರೇಟ್‌ನ ಇಳ್ಸಪ್ಪತ ಹೇಳ್ತ್. ಅಂವ ಆ ಕ್ಯಾಬಿನ್ ಒಳಗಿಂದ್ಲೇ ಒಂದು ಕ್ರೇಟ್ ಎಂ.ಸಿ.ಬಿ.ನ ತೆಗ್ದ್ ಈ ಸಾಹೇಬ್ರ ಕೈಗೆ ಹೊರ್‍ಸಿತ್. ಸರಿ ಸಾರ್ ಇನ್ನು ನಾವು ಹೊರಡಬಹುದಾ ತಾ ಕೇಳ್ತ್ ಈಗ ರಾಜುಗೆ ಬಹಳ ಖುಷಿ ಆತ್. ಅಂದಾಜ್‌ಲಿ ಗುಂಡು ಹೊಡ್ದದ್ ಸರಿ ಆಗಿ ತಾಂಗಿ ಕಂಡತ್. ಹಾಂ ಹೊರಡಪ್ಪ ನಾನು ನಮ್ಮ ಸಾಹೇಬ್ರಿಗೆ ಹೇಳಿ ಕಂಡನೆ ತ್ತೇಳಿ ಕಳ್ಸಿ ಕೊಟ್ಟಿತ್. ಅಪ್ಪೊತ್ತಿಗೆ ಒಂದ್ ಜೀಪ್ ಕೆ.ಆರ್.ಎಸ್. ಕಡೇಂದ ಬರುವಂಗೆ ಶಬ್ದ ಕೇಳ್ತ್. ಈ ಜೀಪ್‌ನವರ ಸಹವಾಸ ಸ್ವಲ್ಪ ಕೆಟ್ಟದ್. ನನ್ನಂತವ ಇಲ್ಲಿ ರಸ್ತೆಲಿ ಹೋಗು ಬರುವ ಗಾಡಿಗಳ ನಿಲ್ಸಿಕಂಡ್ ಮಾಮೂಲಿ ವಸೂಲಿ ಮಾಡ್ತಾ ಉಟ್ಟುತ್ತೇಳಿ ಆಸ್ಟೇಷನ್‌ನವುಕೆ ಗೊತ್ತಾಗಿ ಹೋಗಿ ಆ ಪೋಲಿಸ್‌ನವು ಬಂದ್ ನನ್ನ ಹಿಡ್ಕಂಡ್ರೂ ಹಿಡ್ಕಂಡೋ ಹೇಳಿಕ್ಕಾದ್ಲೆ. ಆ ಜೀಪ್ ಮುಂದೆ ದಾಟಿ ಹೋಗ್ಲಿತ್ತೇಳಿ ಒಂದ್ ಸಿಗರೇಟ್‌ನ ಹಚ್ಚಿಕಂಡ್ ರಸ್ತೆಂದ ಆಚೆ ದೂರಲಿ ಮರೆ ಆಗಿ ರೀಸಸ್ ಮಾಡಿಕೆ ನಿಂತ್‌ಕಂಡತ್. ಒಮ್ಮೆ ತನ್ನ ಜೋಬ್‌ನ ಹೊರಗಿಂದ ಸವರಿ ನೋಡ್ತ್. ಇನ್ನೊ ಎರಡು ಸಾವಿರ ಆತ್ಲೆ ಕಂಡದೆತ ಲೆಕ್ಕ ಹಾಕಿಕಂಡತ್. ಈ ಜೀಪ್‌ನ ಹಿಂದೆ ಒಂದು ಬೂದು ಬಣ್ಣದ ಅಂಬಾಸಿಡರ್ ಕಾರ್ ದಾಟಿತ್.

ಅದರೊಳಗೆ ಇರುವ ಜನರ ಕಾಣದಂಗೆ ಅದರ ಸೈಡ್ ಗ್ಲಾಸ್‌ನ ಮೇಲೆ ಏರಿಸಿದ್ದೊ. ಆ ಗಾಜಿಗೂ ಸನ್‌ಸೇಟ್ ಪೇಪರ್‌ನ ಕವರ್ ಮಾಡಿದ್ದೊ. ಆದ್ರೂ ಅದರೊಳಗೆ ಐದಾರು ಗಂಡುಜನ ಇದ್ದಿರುವ್ರೊ. ಆದ್ರೇ ಒಂದ್ ಹೆಂಗಸ್‌ನ ಮಾತು ಕೂಡಾ ಜೋರಾಗಿ ಕೇಳ್‌ತಿತ್ತ್. ಅದೇನೋ ಅಸ್ಪಷ್ಟವಾಗಿ ಕುದ್ದವರ ಮಾತ್‌ಗ ಸರಿಯಾಗಿ ಈ ರಾಜುಗೆ ತಿಳುಕಂಬಕೆ ಸಾಧ್ಯ ಆತ್‌ಲೆ. ಯಾಕೆತ್ತೇಳಿರೆ ಅದೇ ಸಮಯಕ್ಕೆ ಸರಿಯಾಗಿ ಒಂದ್ ಲೋಕಲ್ ಲಾರಿ ಕಲ್ಲು ತುಂಬಿ ಕಂಡ್ ಮಧ್ಯ ದಾಟಿ ಹೋತ್.

ಆಗ ಹಳೇ ಜಾವ ಬೈಕ್ ಒಂದ್ ಜೋರಾಗಿ ಸದ್ದ್ ಮಾಡಿಕಂಡ್ ಬೃಂದಾವನ ಕಟ್ಟೆ ಕಡೆಂದ ಬಾತ್. ಸರಿ ಇಂದಿಗೆ ಇದ್ ಕೊನೆ ಬೇಟೆ ಆಗಿ ಹೋಗಲಿತ ಹೇಳಿಕಂಡ್ ಆ ಬೈಕ್‌ನ ಅಡ್ಡ ಹಾಕಿತ್. ಅದರಲ್ಲಿ ನೋಡ್ರೆ ಮೂರು ಜನ ಕುದ್ದೊಳೊ. ಎರಡ್ ಜನ ಗಂಡ್‌ಸರ ಮಧ್ಯೆ ಒಂದ್ ಗೂಡೆ. ಅವು ಈ ಪೋಲಿಸ್‌ನವನ ಕಂಡಂಗೆ ಕಕ್ಕಾಬಿಕ್ಕಿ ಆಗಿಹೋದೊ. ಓಹೋ ಏನಮ್ಮಾ ಇಷ್ಟ್ ಹೊತ್ನಲ್ಲಿ ಈ ಕಡೆ ತಾ ಗೂಡೆ ಕಡೆಗೆ ಕೇಳಿ ಆಮೇಲೆ ಏನಯ್ಯಾ ಕಟ್ಟೆಂದ, ಮೈಸೂರಿಗೆ ಈ ಕಡೆ ರಸ್ತೇನಾ? ಹೋಗೋದು? ಏನ್ ಸಮಾಚಾರ. ನನ್ನ ಏರಿಯಾದ ಈ ಹುಡ್ಗಿನ ಕೂಡಾ ಜೊತೆಗೆ ತ್ತೇಳಿ ಅರ್ಧಕ್ಕೆ ಮಾತ್‌ನ ನಿಲ್ಸಿತ್. ಇವನ ಪ್ರಶ್ನೆನ ಕೇಳ್ದ್ ಈ ಎರಡ್ ಹುಡುಗರಿಗೂ ಭಯ, ನಾಚಿಕೆ ಆಗಿ ಹೋತ್. ಆಂ ಆಂ.... ಅದೇನಿಲ್ಲಾ ಹಿಂಗೇ ಹಿನ್‌ಕಲ್ ಕಡೇಂದ ತ್ತೇಳಿಕೆ ಬಾಯಿ ತೆಗಿಯಕಾಕನ ಸಾಕಯ್ಯ ಮುಚ್ಚು, ಈ ಹುಡ್ಗಿ ಯಾರು? ನೀವುಗಳು ಯಾರು ಅಂತ ನಂಗೆ ಎಲ್ಲಾ ಲಾಯಕ್‌ಲಿ ಗೊತ್ತುಟ್ಟು ಆತಾ? ಈಗ ಮರ್ಯಾದಿಲಿ ನನ್ನ ಸಾಹೇಬ್ರ ಹತ್ರ ನಿಮ್ಮ ಕಥೆನ ಹೇಳಿಕಣಿ ಬನ್ನಿತ್ತೇಳಿ ಕರ್ತ್. ಛೇ ಛೇ ಬೇಡಿ ಸಾರ್ ಅಲ್ಲಿ ಸಾಹೇಬ್ರಗಂಟ ಹೋದು ಬೇಡ ಆಯ್ತು ಬುಟ್ಟುಬುಡಿ ನಮ್ಮನ್ನ ತೇಳಿಕಂಡ್ ರಾಜ್‌ನ ಕೈಗೆ ಇನ್ನೂರು ರೂಪಾಯಿನ ಹಿಡ್ಸಿದೊ. ಸರಿ ಇನ್ನೊಂದು ಸರ್ತಿ ನನ್ನ ಕೈಗೆ ಸಿಕ್ಕಿಹಾಕಂಡ್ರೆ ಆಗ ನಾನ್ ಮಾತ್ರ ಬುಡಿಕಿಲ್ಲೆ ನಿಮ್ಮ ಮರ್ಯಾದೆನ ಹರಾಜು ಹಾಕಿ ಬುಟ್ಟನೆ ಗೆಟ್ ಲಾಸ್ಟ್ ತ್ತೇಳಿ ಅವುಕೆ ಬೊಯ್ದಿ ಕಳ್ಸಿತ್.

ಈಗ ಅಂದಾಜ್ ಗಂಟೆ ೧೦ ಆಗಿರ್ದು. ಹಂಗಾಗಿ ಈಗ ಹೋಗ್ವ ಬರ್ವ ವೆಹಿಕಲ್‌ಗಳ ಓಡಾಟ ಸ್ವಲ್ಪ ಕಡಿಮೆ ಆಗ್ತಾ ಇತ್ತ್. ಸುತ್ತ ಕತ್ತಲೆ ಜನರ ಓಡಾಟನೂ ಇಲ್ಲೆ. ಒಂದ್ ಥರಾ ಭಯಂಕರ ಮೌನವಾದಂಗೆ ಕಾಂಬೊತಿತ್. ಆದ್ರೂ ಇನ್ ಯಾವುದಾದ್ರೂ ಒಂದು ಬೇಟೆ ಸಿಕ್ಕುದೂತಾ ಮಿ. ರಾಜು ಕಾಯುತಾ ನಿಂತ್ ಕಂಡತ್. ಅಷ್ಟೊತ್ತಿಗೆ ಅಲ್ಲೇ ಒಂದ್ ಇನ್ನೂರು ಮೀಟರ್‌ನಷ್ಟ್ ದೂರಂದ ಒಂದ್ ಹೆಣ್ಣ್‌ನ ಧ್ವನಿ ಅಳುವಂಗೆ, ಕಿರುಚಾಡುವಂಗೆ ಕೇಳಿ ಬರ್ತಿತ್. ಮಿ. ರಾಜುಗೆ ಯಾವುದೋ ಅಪಾಯದ ಘಂಟೆ ಬಾರ್ಸುತಿದ್ದಂಗೆ ಮನ್ಸಿಗೆ ಆತ್. ಕೂಡ್ಲೆ ಅಲ್ಲಿ ಬೈಕ್‌ನ ನಿಲ್ಸಿಕಂಡ್ ನಿಂತಿದ್ದ ಗೌಡ್ರ ಹತ್ರ ಓಡಿ ಹೋತ್. ಗೌಡ್ರೇ ನೋಡಿ ಈ ರಾತ್ರಿ ಒಳಗೆ ಯಾವುದೋ ಒಂದ್ ಹೆಣ್ಣ್ ಹೆಂಗ್ಸ್ ಗೋಳಾಡುತಿರುವ ಸದ್ದ್ ನಿಮಿಗೆ ಕೇಳ್ಸುತಾ ಉಟ್ಟಾ, ತಾ ಹೇಳಿ ಆ ಇಬ್ರೂ ಒಂದ್ ಕ್ಷಣ ಕೆಮಿಕೊಟ್ಟ್ ಆಲಿಸಿದೊ. ಆ ಕೂಡ್ಲೆ ರಾಜುನ ಶರೀರಲಿ ಕರೆಂಟ್ ಹರ್ದಂಗೆ ಆತ್. ಗೌಡ್ರೆ ನೀವು ಹಂಗೇ ಸ್ವಲ್ಪ ಮುಂದೆ ಬಂದ್ ನಿಂತ್ ಕಣಿ. ನಾನ್ ಹೋಗಿ ಅದ್ ಏನ್ ವಿಷಯ ತಾ ನೋಡಿಕಂಡ್ ಬನ್ನೆತಾ ಒಂದೇ ಉಶ್‌ರ್‌ಗೆ ಕೂಗ್ ಕೇಳ್ದ ಕಡೆಗೆ ಓಡಿ ಹೋತ್.

**(ಮುಂದ್‌ವರ್ದದೆ)**

**ಶಂಕರನ ಬಸಪ್ಪ**

## ಬಾವಲಿ, ಹಕ್ಕಿಗಳಿಂದ ಹೇಗೆ ಪ್ರತ್ಯೇಕ?

ಬಾವಲಿ ಹಾರುತ್ತದೆ. ಆದರೂ ಅದನ್ನು ಹಕ್ಕಿಯೆಂದು ಪರಿಗಣಿಸಲಾಗಿಲ್ಲ. ಅದು ಒಂದು ಸಸ್ತನಿ ವರ್ಗದ ಜೀವಿ. ಮರಿಗಳಿಗೆ ಜನ್ಮ ಕೊಟ್ಟು ಅವಕ್ಕೆ, ಹಾಲುಣಿಸಿ ಪೋಷಿಸುವ ಪ್ರಾಣಿಗಳನ್ನು ನಾವು ಸಸ್ತನಿ ಪ್ರಾಣಿಗಳು ಎನ್ನುತ್ತೇವೆ. ಬಾವಲಿಗೆ, ಹಕ್ಕಿಗಳಿಗಿರುವಂತೆ ಗರಿಗಳು ಇರುವುದಿಲ್ಲ. ಆದರೆ ಅದರ ಮೇಲೆ ಕೂದಲಿರುತ್ತದೆ. ಬಾವಲಿಯ ಮರಿ, ತಾಯಿಯ ಹೊಟ್ಟೆಯಿಂದ ನೇರವಾಗಿ ಹುಟ್ಟುತ್ತದೆ. ಅದು ತಾಯಿಯ ಹಾಲುಂಡು ಬೆಳೆಯುತ್ತದೆ. ಬಾವಲಿ ಹಾರಲು ರೆಕ್ಕೆಗಳನ್ನು ಹೊಂದಿರುವ ಏಕಮಾತ್ರ ಸಸ್ತನಿ.

ಈಗ್ಗೆ 6 ಕೋಟಿ ವರ್ಷಗಳ ಹಿಂದೆಯೇ ಬಾವಲಿ ಅಸ್ತಿತ್ವ ದಲ್ಲಿತ್ತು. ಆಗಿನ ಪಳೆಯುಳಿಕೆಗಳ (Fossils) ಅಧ್ಯಯನದಿಂದ ಈ ಅಂಶ ತಿಳಿದುಬಂದಿದೆ. ವಿಜ್ಞಾನಿಗಳು ಇದುವರೆಗೆ 2,000ಕ್ಕೂ ಹೆಚ್ಚು ಬಗೆಯ ಬಾವಲಿಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಧ್ರುವ ಪ್ರದೇಶವನ್ನು ಬಿಟ್ಟು, ಈ ಬಾವಲಿಗಳು ಎಲ್ಲೆಲ್ಲೂ ಇವೆ. ನಾನಾ ಬಗೆಯ ಲಕ್ಷಣಗಳನ್ನು ಹೊಂದಿರುವ ಬಾವಲಿಗಳಿವೆ. ಅವುಗಳ ರೆಕ್ಕೆಗಳು 15 ಸೆಂ. ಮೀ. ಉದ್ದವಿರುತ್ತವೆ. ರೆಕ್ಕೆಗಳನ್ನು ಬಿಚ್ಚಿದಾಗ, ಅವುಗಳ ಉದ್ದ 2 ಮೀಟರ್‌ಗಳಷ್ಟಾಗುತ್ತದೆ.

ಬಾವಲಿಗಳು ಹೆಚ್ಚಾಗಿ ಹುಳು-ಹುಪ್ಪಟೆಗಳನ್ನು ತಿನ್ನುತ್ತವೆ. ಉಷ್ಣವಲಯದ ಪ್ರದೇಶಗಳಲ್ಲಿರುವ ಬಾವಲಿಗಳು ಹಣ್ಣುಗಳು ಮತ್ತು ಹೂವುಗಳನ್ನಷ್ಟೇ ತಿಂದು ಬದುಕುತ್ತವೆ. ಇತರ ಪ್ರಾಣಿಗಳ ಮತ್ತು ಹಕ್ಕಿಗಳ ರಕ್ತವನ್ನು ಹೀರಿ, ಜೀವಿಸುವ ಕೆಲವು ಜಾತಿಯ ಬಾವಲಿಗಳಿವೆ. ಇವಕ್ಕೆ ನೆತ್ತರು ಬಾವಲಿಗಳು(Vampire bats)ಎಂದು ಹೆಸರು. ಈ ಕಾರಣದಿಂದಲೇ ಅನೇಕ ಜನರು ಬಾವಲಿಗಳಿಗೆ ಹೆದರುತ್ತಾರೆ. ಅತ್ಯಂತ ದೊಡ್ಡ ಗಾತ್ರದ ನೆತ್ತರು ಬಾವಲಿಯ ಉದ್ದ 30ಸೆ.ಮೀ.ಗಳಷ್ಟಿರುತ್ತದೆ. ಅವುಗಳ ಹಲ್ಲುಗಳು ಸೂಜಿಯಂತೆ ಮೊನಚಾಗಿರುತ್ತವೆ. ಅವು ಈ ಹಲ್ಲುಗಳಿಂದ ಒಂದು ಪ್ರಾಣಿಯ ಚರ್ಮವನ್ನು ಬಗೆದು, ತಮ್ಮ ನಾಲಗೆಯಿಂದ ನೆತ್ತರನ್ನು ಹೀರುತ್ತವೆ. ಈ ಬಾವಲಿಗಳು ನಿದ್ರಿಸುತ್ತಿರುವ ಮನುಷ್ಯರ ಮೇಲೂ ಎರಗಿ. ಅವರ ರಕ್ತವನ್ನು ಹೀರುತ್ತವೆ. ಹೆಚ್ಚಾಗಿ ಅವು ಹಸುಗಳು, ಕತ್ತೆಗಳು, ಕುದುರೆಗಳು ಮುಂತಾದ ಪ್ರಾಣಿಗಳ ರಕ್ತ ಹೀರಿ ಬದುಕುತ್ತವೆ.

ಬಾವಲಿಯ ಇನ್ನೊಂದು ವೈಚಿತ್ರ್ಯವೇನೆಂದರೆ ಅದು ಒಂದು ಮರದಕೊಂಬೆಯನ್ನು ತನ್ನ ಕಾಲುಗಳಿಂದ ಬಿಗಿಯಾಗಿ ಹಿಡಿದುಕೊಂಡು, ತಲೆಯನ್ನು ಕೆಳಮುಖ ಮಾಡಿ ಜೋತಾಡುತ್ತದೆ. ಹೀಗೆ ಅದು ವಿಶ್ರಾಂತಿ ಪಡೆಯುತ್ತದೆ. ನೇರವಾಗಿ ನಿಲ್ಲುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಅದರ ಅವಯವಗಳು ರಚಿತವಾಗಿರುವುದೇ ಇದಕ್ಕೆ ಕಾರಣ. ಮರದಿಂದ ಜೋತಾಡುವುದೇ ಅದಕ್ಕೆ ಹೆಚ್ಚು ಸುಲಭ.

**ಸಂಗ್ರಹ. ಪಿ.ಪಿ. ನೀಶಾ**

---

**ಹಾಸಿಗೆ ಇದ್ದಷ್ಟು ಕಾಲು ಚಾಚು**

## ಗೌಡ ಜನಾಂಗದ ಮೇರು ವ್ಯಕ್ತಿತ್ವದೌನ್ನತ್ಯಗಳ ಸೀಮಾಪುರುಷ ಶ್ರೀ ಕುರುಂಜಿ ವೆಂಕಟ್ರಮಣ ಗೌಡ (ಮುಂದುವರಿದ ಭಾಗ)

### ಗೌಡ ಜನಾಂಗದ ಕಣ್ಮಣಿಯವರು ತಂದಿಹರೆಮ್ಮೊಳು ಒಗ್ಗಟ್ಟು :



ಸಾಮ್ರಾಟ ಅಶೋಕ ಮತ್ತು ಬಾದಷಾಹ ಅಕ್ಬರ ಇವರನ್ನು ಭಾರತಾಂಬೆಯ ಇಬ್ಬರು ಸುಪುತ್ರರೆಂದೇ ಕರೆಯುತ್ತಾರೆ. ಒಬ್ಬ ವ್ಯಕ್ತಿ ತನ್ನ ಉತ್ತಮ ಸಾಧನೆಗಳಿಂದ ಇಂತಹ ಹೆಗ್ಗಳಿಕೆಗೆ ಪಾತ್ರನಾಗುತ್ತಾನೆ. ಇತಿಹಾಸವಂತೂ ಪುನರಾವರ್ತನೆಗೊಳ್ಳುತ್ತಲೆ ಇರುತ್ತದೆ. ತನ್ನ ಸನ್ನುಡಿ, ಸನ್ನಡತೆ, ಸತ್‌ಚಾರಿತ್ರ್ಯ ಮತ್ತು ಅತ್ಯಮೂಲ್ಯ ಕೊಡುಗೆಗಳ ಮೂಲಕ ಶ್ರೀ ಕುರುಂಜಿಯವರು ಬದುಕಿರುವಾಗಲೇ ದಂತ ಕಥೆಯಾಗಿದ್ದಾರೆ, ಇಡೀ ಗೌಡ ಜನಾಂಗದ ಹೆಮ್ಮೆಯ ಪುತ್ರರೆಸಿದ್ದಾರೆ. ಗೌಡರೆಂದರೆ ಕೃಷಿಯನ್ನೇ ಮಾಡುವ ಅಥವಾ ಅದನ್ನು ಬಿಟ್ಟರೆ ಬೇರೇನನ್ನೂ ಹೆಚ್ಚಾಗಿ ಬೃಹತ್ ಪ್ರಮಾಣದಲ್ಲಿ ಮಾಡಬಯಸದ, ಕೆಲವೊಮ್ಮೆ ಏನನ್ನು ಮಾಡಬೇಕೆಂದು ತೋಚದೆ ನಡೆದದ್ದೇ ದಾರಿಯೇನೊ ಎಂಬ ಭ್ರಮೆಯಲ್ಲಿ ಸಾಗುತ್ತಿದ್ದ ವಾಹಿನಿಯಿಂದ ಹೊರಬಂದ ಶ್ರೀ ಕುರುಂಜಿಯವರು ಇತರರಂತೆ ಈ ದೇಶದ ಅಭಿವೃದ್ಧಿಗಾಗಿ ಎಲ್ಲ ರಂಗದಲ್ಲಿಯೂ ಸಾಧಿಸಿ ತೋರಿಸಬಲ್ಲೆವೆಂಬುದನ್ನು ರುಜುವಾತು ಪಡಿಸಿದಾಗಲೇ ಗೌಡ ಜನಾಂಗಕ್ಕೊಮ್ಮೆ ಅಪರೂಪದ ಸ್ಫೂರ್ತಿಯ..ಸೆಲೆಯಾದರು. ಮಂಗಳೂರಿನಿಂದ ಹಿಡಿದು ಪುತ್ತೂರು, ಮಡಿಕೇರಿ, ಹುಣಸೂರು ಮತ್ತು ಮೈಸೂರು ತನಕ ಇರುವ ವಿಸ್ತಾರ ಭೂ ಪ್ರದೇಶದಲ್ಲಿ ಉತ್ತಮ ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿರುವ ಕೀರ್ತಿ ಶ್ರೀ ಕುರುಂಜಿಯವರಿಗೆ ಸಲ್ಲುತ್ತದೆ. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯಲ್ಲಿರುವ ಗೌಡರೆಲ್ಲರ ಮೂಲ ಸಂಬಂಧ ಘಟ್ಟದ ಮೇಲಿನ ಜಿಲ್ಲೆಯಲ್ಲಿ ನೆಲಸಿರುವ ಗೌಡರೊಂದಿಗಿನದು ಮತ್ತು ಭೌಗೋಳಿಕ ಅಡಚಣೆಗಳಿಂದಾಗಿ ಈ ಸಂಬಂಧ ತಪ್ಪಿಹೋಗಿದೆಯೆಂಬುದನ್ನು ಅರಿತ ಶ್ರೀ ಕುರುಂಜಿಯವರು ಇದನ್ನು ಪುನಃ ಒಟ್ಟಿಗೆ ಬೆಸೆಯಲು ಬಹಳ ಹಿಂದಿನಿಂದಲೇ ಕಾರ್ಯಪ್ರವೃತ್ತರಾಗಿ ಯಶ ಸಾಧಿಸಿದ್ದಾರೆ. ಇದರ ಪರಿಣಾಮವಾಗಿ ಬೆಂಗಳೂರಿನ ಒಕ್ಕಲಿಗ ಸಂಘದ ಸದಸ್ಯರು ಕೊಡಗು ಮತ್ತು ದ.ಕ. ಜಿಲ್ಲೆಯ ವಿದ್ಯಾಸಂಸ್ಥೆಗಳಿಗೆ ಭೇಟಿ ನೀಡುತ್ತಿದ್ದಾರಲ್ಲದೆ ಹಲವು ಸಂಸ್ಥೆಗಳಿಗೆ ಆರ್ಥಿಕ ನೆರವನ್ನೂ ನೀಡುತ್ತಿದ್ದಾರೆ. ಗೌಡರ ಗುರು ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಹಲವು ಬಾರಿ ಸುಳ್ಯಕ್ಕೆ ಆಗಮಿಸಿ ಇಲ್ಲಿಯ ಗೌಡರ ಪ್ರಗತಿ ಕಂಡು ಹರ್ಷ ಚಿತ್ತರಾಗಿದ್ದಾರೆ. ಶ್ರೀ ಕುರುಂಜಿಯವರ ವ್ಯಕ್ತಿತ್ವಕ್ಕೆ ಬಹುವಾಗಿ ಮಾರು ಹೋಗಿರುವ ಬೆಂಗಳೂರಿನ ಒಕ್ಕಲಿಗ ಸಂಘದ ಮುಂದಾಳುಗಳಿಗೆ ಇವರ ಬಗ್ಗೆ ಎಲ್ಲಿಲ್ಲದ ಅಭಿಮಾನ.

ಶ್ರೀ ಕುರುಂಜಿಯವರು ತಮ್ಮ ವಿದ್ಯಾಸಂಸ್ಥೆಗಳಲ್ಲಿ ಸಾಕಷ್ಟು ಉದ್ಯೋಗಗಳನ್ನು ತಮ್ಮ ಸಮುದಾಯದವರಿಗೆ ನೀಡಿರುತ್ತಾರೆ. ತಾರತಮ್ಯವನ್ನು ಕನಸ್ಸಿನಲ್ಲಿಯೂ ಎಣಿಸದ ಶ್ರೀಯುತರು ಹೊರಗಿನ ಪ್ರದೇಶಗಳಿಂದ ಬಂದ ಗೌಡರಿಗೂ ತಮ್ಮ ಸಂಸ್ಥೆಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶವನ್ನು ನೀಡಿರುವ ಮೂಲಕ ರಾಜ್ಯ ವ್ಯಾಪಿ ತುಂಬಿರುವ ಗೌಡರೆಲ್ಲರೂ ಒಂದೇ ಎಂಬ ವಿಶಾಲ ಭಾವನೆಗೆ ತಳಹದಿಯಾಗಿದ್ದಾರೆ. ಸರ್ವ ಸಮುದಾಯಗಳ ಜನರನ್ನೂ ಸಮಾನ ಗೌರವದಿಂದ ಕಾಣುತ್ತಿರುವ ಇವರು ಹಿಂದೂ, ಕ್ರೈಸ್ತ, ಮತ್ತು ಮುಸಲ್ಮಾನ ಇತ್ಯಾದಿ ಜನಾಂಗಕ್ಕೆ ಸೇರಿದವರಿಗೆಲ್ಲರಿಗೂ ಉದ್ಯೋಗ ನೀಡಿ ಪ್ರೋತ್ಸಾಹಿಸುತ್ತಿರುವ ಶ್ರೀಯುತರು ಈ ದೇಶದ ಏಕತೆ, ಸಮಗ್ರತೆ ಮತ್ತು ಜಾತ್ಯಾತೀತ ಅಂಶಗಳ ಮಹಾನ್ ಹರಿಕಾರರಾಗಿದ್ದಾರೆ.

### ಆದರ್ಶಗಳ ಹರಿಕಾರ, ನಡೆನುಡಿಯೆರಡರ ಅಪೂರ್ವ ಸಂಗಮ

ನುಡಿದಂತೆ ನಡೆಯುವವರು ತಾವಿರುವಲ್ಲಿಯೇ ದೊಡ್ಡವರಾಗಿ ಬೆಳೆಯುತ್ತಾರೆ, ಜಗತ್ತನ್ನೆ ತಮ್ಮೆಡೆಗೆ ಸೆಳೆದುಕೊಳ್ಳುತ್ತಾರೆ. ಮಾತು ಮತ್ತು ಕೃತಿಯ ಮಹಾಸಂಗಮ ಶ್ರೀ ಕುರುಂಜಿಯವರು. ಅವರ ಅಪಾರ ಸಾಧನೆಯ ಹಿಂದೆ ಮಾತಿದೆ ಅದಕ್ಕೆ ಬೆಲೆ ತಂದಿರುವ ಕೃತಿಯ ರಾಶಿಗಳಿವೆ. ಜೊಳ್ಳು ಮಾತುಗಳಿಗೆ ಜೋಗುಳ ಹಾಡುವ ಪ್ರವೃತ್ತಿ ಇವರಲ್ಲಿಲ್ಲ. "ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ" ನುಡಿದರೆ ಮುತ್ತಿನ ಹಾರದಂತಿರಬೇಕು". ಮಾತಾಡಬಲ್ಲವನಿಗೆ ಮಾತೊಂದು ಮಾಣಿಕ್ಯವು" ಇತ್ಯಾದಿ ಕವಿ ಸೂಕ್ತಿಗೆ ಸಮನಾದ ಶ್ರೀ ಕುರುಂಜಿಯವರ ಮಾತು ಮತ್ತು ಕೃತಿ ಇವೆರಡೂ ಅರ್ಥವತ್ತಾಗಿ ಬೆಸೆದುಕೊಂಡಿವೆ. ಇವರ ಬಾಯಿಂದ ಹೊಮ್ಮಿದ ಮಾತುಗಳೆಲ್ಲವೂ ಸ್ವಾತಿ ಮಳೆಯ ಹನಿಗಳು ಕಪ್ಪೆ ಚಿಪ್ಪಿನೊಳಗೆ ಬಿದ್ದು ಮುದ್ದಾದ ಮುತ್ತುಗಳಾಗಿ ಹೆಪ್ಪುಗಟ್ಟಿದಂತೆ. "ನೀವು ಹೊಸ ಕಾಲೇಜೊಂದನ್ನೂ ಕೇಳುತ್ತಿದ್ದೀರಿ ಆದರೆ ಅದಕ್ಕೊಂದು ಕಟ್ಟಡ ನಿಮ್ಮಲ್ಲಿಲ್ಲವಲ್ಲ" ಎಂದು ಹೊಸ ಕಾಲೇಜನ್ನು ಆರಂಭಿಸಲು ಅನುಮತಿ ನೀಡಲು ಬಂದ ತಜ್ಞರ ತಂಡ ಕೇಳಿದಾಗ ಶ್ರೀ ಕುರುಂಜಿಯವರು ಉತ್ತರ ನೀಡುತ್ತಾರೆ." ಈಗ ಒಪ್ಪಿಗೆ ಕೊಡಿ ಮುಂದಿನ ವರ್ಷ ಬಂದು ನೋಡಿ" ಎಂದು ಹೇಳುತ್ತಾರೆ. ನಮ್ಮ ಸಮಾಜದಲ್ಲಿ ಮಾತು ಕೃತಿಯಾಗುವುದು ಬಹಳ ಕಡಿಮೆ. ಈ ಹಿನ್ನೆಲೆಯಲ್ಲಿ ತಜ್ಞರ ತಂಡ ಹಿಂದಿರುಗುತ್ತದೆ. ಮಾರನೆಯ ವರ್ಷ ಅದೇ ತಜ್ಞರ ತಂಡ ಕುರುಂಜಿ ಬಾಗಿಲಿಗೆ ಬಂದು ತಾವು ನಿರೀಕ್ಷಿಸಿರದ ಸುಂದರ ಕಟ್ಟಡ ಕಂಡು ಆಶ್ಚರ್ಯ ಚಕಿತರಾಗುತ್ತಾರೆ. ತಮ್ಮ ಮಾತಿನಂತೆ ನಡೆದು ತೋರಿಸಿರುವ ಧೀಮಂತ ವ್ಯಕ್ತಿಯ ಬಗ್ಗೆ ಹೆಮ್ಮೆ ಪಡುತ್ತಾರೆ. ಇದೇ ಶ್ರೀಯುತರ ಸಾಧನೆಯ ಹಿಂದಿರುವ ಗುಟ್ಟು; ತೆರೆದ ಸತ್ಯ. ಹಾಗಾಗಿಯೇ ಬಂದ ಎಲ್ಲಾ ಸರ್ಕಾರಗಳು ಇವರ ಯೋಜನೆಗಳಿಗೆ ಒಪ್ಪಿಗೆ ನೀಡುತ್ತಾ ಬಂದಿವೆ. ಸಾಧಿಸ

ಅಳುವವನ ಎಡಕ್ಕೆ ಹೊಲಿಯುವವನ ಬಲಕ್ಕೆ ಕೂರಬೇಡ

ತೋರಿಸುವ ಛಲ ಶ್ರೀ ಕುರುಂಜಿಯವರಲ್ಲಿ ಇಲ್ಲದಿದ್ದರೆ ಈ ಸಂಸ್ಥೆ ಇಷ್ಟು ಬೃಹತ್ತಾಗಿ ಬೆಳೆಯಲು ಸಾಧ್ಯವಾಗುತ್ತಿತ್ತೆ?

ಎಣ್ಣೆ ಮತ್ತು ನೀರು ಹೇಗೆ ಬೆರೆಯುವುದಿಲ್ಲವೊ ಹಾಗೆಯೇ ಶ್ರೀ ಕುರುಂಜಿಯವರ ಶ್ರೀಮಂತಿಕೆಯೊಂದಿಗೆ ದುಶ್ಚಟಗಳು ಬೆರೆಯಲಾಗಿಲ್ಲ. ಅವರು ದುಶ್ಚಟಗಳಿಗೆ ದಾಸರಾಗದಿದ್ದುದೇ ಸುಳ್ಯಕ್ಕೆ ವರಪ್ರಸಾದವಾಗಲು ಕಾರಣವಾಯಿತು. "ಧನಿಕರೆಲ್ಲರಂತೆ ತಮ್ಮ ಸಂಪತ್ತನ್ನು ದುಶ್ಚಟಗಳಿಗಾಗಿ ಚೆಲ್ಲದೆ ಸಮಾಜ ಒಳಿತಿಗಾಗಿ ವಿನಿಯೋಗಿಸಿದ್ದರೆ ಪ್ರಗತಿ ಮರೀಚಿಕೆಯಾಗುತ್ತಿತ್ತೆ?"ಎಂದು ಸಾರ್ವಜನಿಕ ಭಾಷಣಗಳಲ್ಲಿ ನೊಂದು ಹೇಳುವ ಶ್ರೀಯುತರ ಧೂಮಪಾನ, ಮಧ್ಯಪಾನ, ಸೋಮಾರಿತನ ದುಂದುವೆಚ್ಚ ಇತ್ಯಾದಿಗಳಿಂದ ದೂರವಿದ್ದು ತಮ್ಮ ಅಭಿವೃದ್ಧಿಯನ್ನು ಗಳಿಸ ಬೇಕೆಂದು ಹೋದಲೆಲ್ಲಾ ಭಿನ್ನವಿಸುವ ಪರಿ ಇವರಿಗಿರುವ ಸಾಮಾಜಿಕ ಕಳಕಳಿಯ ದ್ಯೋತಕ. "ಬೀಡಿ ಸಿಗರೇಟುಗಳನ್ನು ಬಿಟ್ಟರೆ ಹೊಗೆ ಸೊಪ್ಪು ಬೆಳೆಯುವವರ ಪಾಡೇನು" "ನನಗೆ ಧೂಮಪಾನ ಮಾಡದಿದ್ದರೆ ಉತ್ಸಾಹವೇ ಬರುವುದಿಲ್ಲ" "ನನಗೆ ಮಧ್ಯಪಾನ ಮಾಡದಿದ್ದರೆ ಆರೋಗ್ಯ ಕಾಯ್ದುಕೊಳ್ಳುವುದೇ ಕಷ್ಟ" ಇತ್ಯಾದಿ ಪ್ರಶ್ನೆಗಳಿಗೆ ಇವರ ಉತ್ತರ "ಹೊಗೆಸೊಪ್ಪಿನ ಬದಲಿಗೆ ಹಣ್ಣು ತರಕಾರಿ ಬೆಳೆಯಲಿ; ಅದಕ್ಕೇನು ಹಣ ಸಿಕ್ಕುವುದಿಲ್ಲವೆ?" "ನಾನು ಮಧ್ಯಪಾನ ಮತ್ತು ಧೂಮಪಾನ ಮಾಡದಿದ್ದರೂ ಆರೋಗ್ಯವಾಗಿಲ್ಲವೆ" ಎಂಬ ಸಮಂಜಸವಾದ ಉತ್ತರಗಳನ್ನೂ ನೀಡಿ ಹಲವರನ್ನು ಈ ಚಟಗಳಿಂದ ದೂರ ಮಾಡವಲ್ಲಿ ಸಫಲರಾಗಿದ್ದಾರೆ.

ಶ್ರೀ ಕುರುಂಜಿಯವರ ಜೀವನದ ಪರಿ ನಡೆದಾಡುವ ಸಂತನಂತೆ, ಉಸಿರಾಡುವ ದಾರ್ಶನಿಕನಂತೆ. ಸಮಯ ಸಿಕ್ಕಾಗಲೆಲ್ಲಾ ಪುಣ್ಯ ಪುರುಷರ ಕಥೆಗಳನ್ನು ಓದುವ ಹವ್ಯಾಸವನ್ನಿಟ್ಟು ಕೊಂಡಿರುವ ಇವರು ನಿತ್ಯವೂ ತಮ್ಮ ಮನಸ್ಸನ್ನು ನಿರ್ಮಲಗೊಳಿಸುವ ಕಾರ್ಯದಲ್ಲಿ ತೊಡಗಿರುತ್ತಾರೆ ಮತ್ತು ಅದನ್ನು ಬೇರೆಯವರಲ್ಲಿ ನೆಲೆಗೊಳಿಸುವ ಕೈಂಕರ್ಯದಲ್ಲಿರುವ ಕರ್ಮಯೋಗಿ. ಅವರೇ ಪಟ್ಟಿ ಮಾಡಿಟ್ಟುಕೊಂಡಿರುವ ಏಳು ದುಶ್ಚಟಗಳು. ಪರನಿಂದನೆ, ಅಮಲು ಪದಾರ್ಥ ಸೇವನೆ, ಜೂಜುಗಾರಿಕೆ, ಧೂಮಪಾನ, ಸೂಳೆಗಾರಿಕೆ, ಕಳ್ಳತನ, ಸೋಮಾರಿತನ, ದ್ವೇಶ ಇವುಗಳನ್ನು ತ್ಯಜಿಸಬೇಕೆಂದೂ ಮತ್ತು ಅಷ್ಟಗುಣಗಳನ್ನು ಸತ್ಯ, ಶಾಂತಿ, ಧರ್ಮ, ಸನ್ನಡೆ, ಸನ್ನುಡಿ, ಪ್ರೇಮ, ತಾಳ್ಮೆ ಮತ್ತು ಧೈರ್ಯಗಳನ್ನು ಮೈಗೂಡಿಸಿಕೊಂಡು ಮುನ್ನಡೆದರೆ ಇಹಪರಗಳೆರಡರಲ್ಲೂ ಒಳ್ಳೆಯದಾಗುತ್ತದೆಯೆಂದು ಕಳಕಳಿಯ ಮನವಿಗೈಯುತ್ತಾರೆ.

### ಅಗಣಿತ ಗುಣಗಳ ಆಗರವೆನಿಸಿದ ನಡೆದಾಡುವ ಸಂತ

ಆದರ್ಶ ಮೊದಲು ಮನೆಯಲ್ಲಿ ಆರಂಭಗೊಂಡು ನಂತರ ಹೊರಗೆ ಪಸರಿಸಿದರೆ ಅದರ ಕಂಪು ಬಹಳ. ಈ ಅಂಶವನ್ನು ಶ್ರೀ ಕುರುಂಜಿಯವರ ಗೃಹಕೃತ್ಯದ ಕಣಕಣಗಳಲ್ಲಿ ಕ್ಷಣಕ್ಷಣಕ್ಕೂ ಕಾಣಬಹುದಾಗಿದೆ. ಇವರು ಆದರ್ಶಪತಿ, ಆದರ್ಶ ತಂದೆ. ಇವೆರಡರಲ್ಲೂ ಇಡೀ ಸಮಾಜಕ್ಕೆ ಮಾದರಿಯೆನಿಸಿದ್ದಾರೆ.

ಜಾನಕಿಯೆಂಬ ಸತಿಗೆ ಶ್ರೀ ರಾಮಚಂದ್ರ ಪತಿಯೆಂಬಂತೆ, ಶ್ರೀ ಕುರುಂಜಿಯವರ ಬಗ್ಗೆ ಎಷ್ಟು ಬರೆದು ಎಷ್ಟು ಹೇಳಿದರೂ ಅವರ ಧರ್ಮಪತ್ನಿ ಶ್ರೀಮತಿ ಜಾನಕಿಯವರ ಸಾರ್ಥಕ ಬಾಳಿನ ಬಗ್ಗೆ ಹೇಳದಿದ್ದರೆ ಶ್ರೀಯುತರು ಪೂರ್ಣವೆನಿಸರು. ಒಬ್ಬ ಮಹಾನ್ ವ್ಯಕ್ತಿಯ ಸಾಧನೆಯ ಹಿಂದೆ ಒಂದು ಹೆಣ್ಣಿನ ಪ್ರೇರಣಾಶಕ್ತಿ ಯಿರುತ್ತದೆ ಎಂಬ ಮಾತನ್ನು ಅರ್ಥಪೂರ್ಣಗೊಳಿಸಿರುವವರು ಎಲೆ ಮರೆಯ ಫಲದಂತೆ ಹಾಲಿನೊಳಗಿರುವ ತುಪ್ಪದಂತೆ, ಕಬ್ಬಿನ ಕೋಲಿನೊಳಗಿರುವ ಸಿಹಿಯಂತೆ ಪತಿಯ ಶ್ರೇಯಸ್ಸಿಗಾಗಿ ಅನುದಿನವು ಕಾಯ ವಾಚಾ ಮನಸಾ ದುಡಿಯುತ್ತಾ ಪತಿಯನ್ನು ಚಿಗುರಿನಲ್ಲಿಟ್ಟು ನಾನು ಬೇರಾಗಿಹ ಸರಳ ಸುಂದರ ನಿರಾಡಂಬರ ನಿಗರ್ವಿ ಸಾಧ್ವಿ ಶ್ರೀಮತಿ ಜಾನಕಿ ವೆಂಕಟ್ರಮಣಗೌಡರು ಸ್ತ್ರೀ ಸಮುದಾಯದ ಶಿರೋಮಣಿಯೆನಿಸಿದ್ದಾರೆ. ಶ್ರೀಯುತರ ಮನೆಯೊಳಗಿನ ನೆಮ್ಮದಿಯೆ ಅವರ ಮಠದೊಳಗಿನ ಯಶಸ್ಸಿಗೆ ಕಾರಣವಾಗಿದೆಯೆಂಬುದು ತಿಳಿದವರೆಲ್ಲರ ಅಭಿಮತ. ಶ್ರೀಮಂತಿಕೆಯ ಗತ್ತು, ದೊಡ್ಡಸ್ತಿಕೆಯ ಬಿಗುಮಾನ, ಆಡಂಬರದ ಸೆಳೆತಕ್ಕೂ ತುತ್ತಾಗದೆ ಸರಳತೆಯೇ ಮೂರ್ತಿವೆತ್ತಂತಿರುವ ಶ್ರೀಮತಿ ಜಾನಕಿಯವರು ಗೃಹ ಮತ್ತು ತೋಟದ ಎಲ್ಲ ಜವಾಬ್ದಾರಿಯನ್ನೂ ಯಶಸ್ವಿಯಾಗಿ ನಿರ್ವಹಿಸುತ್ತಾ ಪತಿಯ ಶ್ರೇಯಸ್ಸಿಗೆ ಕಾರಣರಾಗಿದ್ದಾರೆ. "ಪತಿ ಪತ್ನಿಯರು 36ರ ಅಂಕಿಯಂತಿರದೆ 63ರ ಅಂಕಿಯಂತಿರಬೇಕು" ಎಂದು ಹೇಳುತ್ತಿರುತ್ತಾರೆ ಅಂತೆಯೇ ಅವರು ಬಾಳುತ್ತಿದ್ದಾರೆ. ಅಂದರೆ 36ರಲ್ಲಿ ಎರಡೂ ಪರಸ್ಪರ ವಿರುದ್ಧ ದಿಕ್ಕಿಗೆ ತಿರುಗಿವೆ ಆದರೆ 63ರಲ್ಲಿ ಎರಡೂ ಅಭಿಮುಖವಾಗಿವೆ, ಹೀಗಿರಬೇಕು ದಾಂಪತ್ಯ.

ಶ್ರೀ ಕುರುಂಜಿ ವೆಂಕಟ್ರಮಣಗೌಡ ಮತ್ತು ಶ್ರೀಮತಿ ಜಾನಕಿ ವೆಂಕಟ್ರಮಣಗೌಡ ದಂಪತಿಗಳಿಗೆ ಮುತ್ತಿನಂಥ ಮೂರು ಮಕ್ಕಳು. ಇವರಲ್ಲಿ ಇಬ್ಬರು ಪುತ್ರರು, ಒಬ್ಬರು ಪುತ್ರಿ. ಮಕ್ಕಳು ಹುಟ್ಟಿದ ಸಂತೋಷ ಅವರು ಗುಣವಂತರಾಗಿ ಬಾಳಿದಾಗಲೇ ಲಭಿಸುವುದೆಂಬ ಮಾತಿದೆ. ಈ ವಿಷಯದಲ್ಲಿ ಶ್ರೀಯುತರು ನಿಜವಾಗಿಯೂ ಭಾಗ್ಯಶಾಲಿ. ಹಿರಿಯ ಪುತ್ರ ಡಾ. ಕೆ.ವಿ. ಚಿದಾನಂದ MBBS; MS; FRSH (LONDON) ಇವರು ಅಕಾಡೆಮಿ ಆಫ್ ಲಿಬರಲ್ ಎಜುಕೇಶನ್ ಸಂಸ್ಥೆಯ ಉಪಾಧ್ಯಕ್ಷರೂ ಮತ್ತು ಕುರುಂಜಿಕಾರ್ಸ್ ಜನರಲ್ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಎರಡನೆಯ ಪುತ್ರ ಡಾ. ಕೆ. ವಿ. ರೇಣುಕಾಪ್ರಸಾದ್ MBBS, FAGE ಇವರು ಅಕಾಡೆಮಿ ಆಫ್ ಲಿಬರಲ್ ಎಜುಕೇಶನ್ ಇದರ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಕುರುಂಜಿಯವರ ಒಬ್ಬಳೇ ಪುತ್ರಿ ಶ್ರೀಮತಿ ಗೋವರ್ಧಿನಿ ಜಯಕುಮಾರ್. ಪದವೀಧರೆಯಾಗಿ ಇವರು ತಮ್ಮ ವೈದ್ಯ ಪತಿಯೊಂದಿಗೆ ಅಮೇರಿಕಾದಲ್ಲಿದ್ದಾರೆ.

ಶ್ರೀ ಕುರುಂಜಿಯವರ ಭಾಗ್ಯದ ಮತ್ತೊಂದು ಪರಮಾನಂದದ ಎರಡು ಸುಂದರ ವರ್ಣದ ಸಮಾನಾಂತರ ರೇಖೆಗಳೆಂದರೆ ಅವರ ಇಬ್ಬರು ಸುಪುತ್ರರು. ಇಂತಹ ಭಾಗ್ಯಕ್ಕೆ ಭಾಜನರಾದವರು ವಿರಳ.

ತಂದೆಯವರ ಶ್ರೇಷ್ಠ ಗುಣಗಳನ್ನು ಪಡಿಯಚ್ಚಿನಂತೆ ಕಾಣುವುದಿದ್ದರೆ ಅದನ್ನು ಶ್ರೀ ಕುರುಂಜಿಯವರ ಮಕ್ಕಳಲ್ಲಿ ಮಾತ್ರ ಎಂಬುದನ್ನು ಜನರ ಬಾಯಲ್ಲಿ ಕೇಳುತ್ತೇವೆ. ಇವರಿಬ್ಬರ ನಡೆ, ನುಡಿ, ಆಲೋಚನೆ, ಸಾಮಾಜಿಕ ಕಳಕಳಿ, ಕರ್ತವ್ಯ ನಿಷ್ಠೆ ಇತ್ಯಾದಿಗಳೆಲ್ಲವೂ ಒಂದೇ ತೆರನಾಗಿವೆ. ಡಾ. ಕೆ. ವಿ. ಚಿದಾನಂದನವರ ಮೈಮನಗಳೆರಡೂ ವೈದ್ಯರಿಗಾಗಿಯೇ ಹೇಳಿ ಮಾಡಿಸಿದಂತಿದ್ದು ಅವರ ಆಗಮನ ಮತ್ತು ಧೈರ್ಯ ತುಂಬು ಪ್ರೀತಿಯ ಮಾತು ರೋಗಿಯ ಔಷಧ ಸೇವನೆಗೆ ಮೊದಲೇ ಅರ್ಧಗುಣಮುಖವಾಗುವಂತೆ ಮಾಡುತ್ತವೆ. ವಿದ್ಯಾಸಂಸ್ಥೆಗಳ ಬೆಳವಣಿಗೆಯಲ್ಲಿ ತಂದೆಯವರೊಂದಿಗೆ ಅಹರ್ನಿಶಿ ದುಡಿಯುತ್ತಿರುವ ಡಾ. ಕೆ. ವಿ. ಚಿದಾನಂದ ತಂದೆಯಂತೆಯೇ, ಸಹನಶೀಲ ಪ್ರೇಮಮಯಿ ಆಡಳಿತಗಾರ. ಡಾ. ಕೆ. ವಿ. ರೇಣುಕಾ ಪ್ರಸಾದ್‌ರವರು ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಇದರ ಪ್ರಧಾನ ಕಾರ್ಯದರ್ಶಿಯಾಗಿ ತಂದೆಯವರ ಅರ್ಧ ಜವಾಬ್ದಾರಿಯನ್ನು ತಮ್ಮ ಮೇಲೆ ತಂದುಕೊಂಡು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ. ಇತರರಲ್ಲಿ ಕಾಣದ ಒಂದು ವಿಶೇಷ ಗುಣವನ್ನು ನಾವು ಇವರಲ್ಲಿ ಕಾಣುತ್ತೇವೆ. ನಾವು ಯೋಚಿಸುತ್ತಿರುವ ವಿಷಯವನ್ನು ಇವರು ಆಗಲೇ ಮಾಡಿ ಮುಗಿಸಿರುತ್ತಾರೆ. ಇವರು ಮಾಡುವ ಯಾವ ಕಾರ್ಯಕ್ಕೂ ಮಂದಗತಿಯಿಲ್ಲ. ನಡೆ, ನುಡಿ, ಚಲನೆ ಎಲ್ಲೆಡೆಯೂ ಶೀಘ್ರತೆಯ ಪರಿಪಾಕ. ಮಿಂಚಲ್ಲಿ ಬೆಳಕು ಮತ್ತು ಕ್ರೀಯೆ ಒಟ್ಟಿಗೆ ಸಂಭವಿಸುವಂತೆ ಇವರ ಮಾತು -ಕೃತಿ. ಸರಸರನೆ ಪಾದರಸದಂತೆ ಲವಲವಿಕೆಯಿಂದ ಕಾರ್ಯಪ್ರವೃತ್ತಾಗಿರುವ ಡಾ. ಕೆ. ವಿ. ರೇಣುಕಾ ಪ್ರಸಾದರನ್ನು ನಾನು ಕಂಡಿದ್ದೇನೆಯೇ ಹೊರತು ನಿಧಾನ ಗತಿಯಲ್ಲಿರುವ ಇವರನ್ನು ಕಂಡಿಲ್ಲ. ಒಂದು ವಿಷಯದಲ್ಲಿ ಇವರು ಈಗಾಗಲೇ ತಂದೆಯವರನ್ನು ಮೀರಿಸಿದ್ದಾರೆ. ಅದೆಂದರೆ ತಂದೆಯವರು 18 ಗಂಟೆ ದುಡಿದರೆ ಇವರು 19ಗಂಟೆ ದುಡಿಯುತ್ತಿರುವದು ಹತ್ತಿರದಿಂದ ನೋಡುವವರಿಗೆ ವೇದ್ಯವಾಗುತ್ತಿದೆ ಇದು ಸಂಸ್ಥೆಯ ನಾಗಾಲೋಟಕ್ಕೆ ನಾಂದಿಯಾಗಬಹುದು. ಇಂತಹ ಸುಪುತ್ರರು ಯುವ ಜನಾಂಗಕ್ಕೆ ಒಂದು ಮಾದರಿ ಯೆನಿಸುವರು. ಶ್ರೀ ಕುರುಂಜಿಯವರ ಇಬ್ಬರು ಸೊಸೆಯಂದಿರಲ್ಲಿ ಹಿರಯವರು ಶ್ರೀಮತಿ ಶೋಭ ಚಿದಾನಂದ, ಎಂ.ಎ. ಪದವೀದರೆ, ಇವರಿಗೆ ಇರುವ ಇಬ್ಬರು ಮಕ್ಕಳಲ್ಲಿ ಒಂದು ಹೆಣ್ಣು, ಮತ್ತೊಂದು ಗಂಡು. ಕಿರಿಯ ಸೊಸೆ ಡಾ. ಕೆ.ಎಸ್. ಜ್ಯೋತಿ ರೇಣುಕಾಪ್ರಸಾದ್ MBBS. ಬರುವ ಸೊಸೆಯರ ಕಾಲ್ಗುಣ ಮತ್ತು ಹುಟ್ಟುವ ಮಕ್ಕಳ ಪುಣ್ಯ, ಎಂಬ ಗಾದೆಯ ಮಾತಿಗೆ ಅನುಗುಣವಾಗಿ ಮನೆಯ ಭಾಗ್ಯ ಉಕ್ಕುತ್ತಿದೆ. ಇಬ್ಬರೂ ಸೊಸೆಯರು ಆದರ್ಶವಾಗಿದ್ದು ಮನೆಯ ನಂದಾದೀಪವನ್ನು ಬೆಳಗಿಸುತ್ತಿದ್ದಾರೆ.

### ಕುದಿಸಿದ ಹಾಲಲಿ ಕೆನೆಗಟ್ಟಿದ ಮೇಲ್ಪದರು

ಶ್ರೀ ಕುರುಂಜಿಯವರು ತಮ್ಮ ಅದ್ಭುತ ಸಾಧನೆ, ವೈವಿಧ್ಯಮಯವಾದ ಕೊಡುಗೆ ಮತ್ತು ತಮ್ಮ ಆದರ್ಶಬಾಳಿನ ಮೂಲಕ ಸರ್ವರಿಗೂ ಮಾದರಿಯೆನಿಸಿದ್ದಾರೆ. ಒಂದು ಸರ್ಕಾರವೇ ಮಾಡಲು ಹಿಂದುಮುಂದೆ ನೋಡಬೇಕಾಗಿರುವ ಕಾರ್ಯವನ್ನು ಒಬ್ಬಂಟಿಗರಾಗಿಯೇ ಸಾಧಿಸಿ ತೋರಿಸುವ ಮೂಲಕ ತಾವೊಬ್ಬರು ವ್ಯಕ್ತಿ ಮಾತ್ರವಲ್ಲ ಬೃಹತ್ ಶಕ್ತಿಯೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಸಮಾಜದ ಉದ್ಧಾರಕ್ಕಾಗಿ ಅನವರತವೂ ದುಡಿಯುತ್ತಿರುವ ಇವರು ಅಗ್ರ ತಾಂಬೂಲಾರ್ಹರೂ ಮತ್ತು ಪ್ರಾತಃಸ್ಮರಣೀಯರು ಆಗಿರುತ್ತಾರೆ. ಅವರ ಅಂತಃಕರಣದ ಮಿಡಿತವನ್ನರಿತವರಿಗೆ ಅವರೊಬ್ಬ ಮಾನವ ಶ್ರೇಷ್ಠರೆಂದು ಸುಂದರ ಶಾಖೆಗಳನ್ನೂ ಹೊಂದಿರುವ ಶ್ರೀ ಕುರುಂಜಿಯವರು ಸಾಲುಗಟ್ಟಿ ಬರುವ ಪಂಡಿತರಿಗೆ ಅಧ್ಯಯನಕ್ಕೆ ರಸಗಟ್ಟಿಯಾಗುವ ದಿನಗಳು ಆರಂಭವಾಗಲಿವೆ.

ಎಲ್ಲರೂ, ಅದರಲ್ಲಿಯೂ ಗೌಡ ಜನಾಂಗವಂತೂ ಹೆಮ್ಮೆಯಿಂದ ಬೀಗುವ ವ್ಯಕ್ತಿತ್ವವನ್ನು ಹೊಂದಿರುವ ಶ್ರೀ ಕುರುಂಜಿಯವರು ನೂರ್ಕಾಲ ಬಾಳಿ ಬದುಕಿ ಆ ಚಂದ್ರಾರ್ಕವಾದ ಕೀರ್ತಿಯನ್ನು ಪಡೆಯಲೆಂಬುದೇ ನಮ್ಮೆಲ್ಲ ಬಯಕೆ ಮತ್ತು ಹರಕೆ. ಒಬ್ಬ ಮಹಾನ್ ವ್ಯಕ್ತಿ ನಮ್ಮೊಂದಿಗಿದ್ದಾರೆ ಎಂಬ ಅರಿವು ನಮ್ಮೆಲ್ಲರಲ್ಲೂ ಮೂಡಿದರೆ ಅದು ನಮ್ಮ ಬದುಕಿನ ಭಾಗ್ಯದ ಅಂಶವೆನಿಸುವುದು. ಶ್ರೀಯುತರು ಇಂದಿನ ಮತ್ತು ಮುಂದಿನ ತಲೆಮಾರಿನ ಜನಾಂಗಕ್ಕೆ ಒಂದು ಬೆಸುಗೆಯಾಗಿ ನಿಲ್ಲುವರು. ಶ್ರೀ ಕುರುಂಜಿಯವರು ತಮ್ಮ ಅರ್ಥಪೂರ್ಣ ಮತ್ತು ಸಾರ್ಥಕ ಬದುಕಿನ ಕಾಲದಲ್ಲಿ ಸಮಾಜಕ್ಕಿತ್ತ ಶ್ರೇಷ್ಠ ಅಂಶಗಳು ಈ ನಾಡಿನ ಮಣ್ಣಿನ ಕಣಕಣಗಳಲ್ಲಿ, ತಾಯಿ ಪಯಸ್ವಿನಿಯ ಹನಿಹನಿಗಳಲ್ಲಿ, ನಳನಳಿಸುವ ಹಚ್ಚ ಹಸುರಿನ ಮರಗಿಡಗಳ ಚಿಗುರಲ್ಲಿ, ಶ್ರೀಯುತರಿಂದ ಉಪಕೃತ ಗೊಂಡಿರುವ ಜನರ ವಂಶದ ಕುಡಿಯಲ್ಲಿ ಶಾಶ್ವತವಾಗಿ ಬೆರೆತು ಸೌರಭ ಸೂಸುತ್ತಾ, ಸ್ಫೂರ್ತಿ ನೀಡುತ್ತಾ, ನಿರಂತರವಾಗಿ ಸಾಗುತ್ತಲೇ ಇರುತ್ತದೆ ಅಂತ್ಯದ ಅಂಚಿರದ ಅನಂತವಾದ ಈ ಸೃಷ್ಟಿಯಲಿ.

**ವಿಳಾಸ : ಶ್ರೀ ಡಿ ಜವರೇಗೌಡ, ಉಪನ್ಯಾಸಕರು,**
**ನೆಹರು ಸ್ಮಾರಕ ಮಹಾವಿದ್ಯಾಲಯ, ಸುಳ್ಯ, ದ.ಕ.**

**3ನೇ ಪುಟದಿಂದ**

ಅದರಲ್ಲಿ ಗೆದ್ದ ಮಕ್ಕಳಿಗೆ ಬಹುಮಾನವನ್ನು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತುಜೆ ಗಣೇಶನವರು ವಿತರಿಸಿದರು. ಮತ್ತು ಮಹಿಳೆಯರ ಸಾಂಸ್ಕೃತಿಕ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಗೆದ್ದ ಮಹಿಳೆಯರಿಗೆ ಕೊಡಗು ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಗೌಡ ಸಮಾಜದ ಅಧ್ಯಕ್ಷರಾದ ಕೋರನ ಪೂಣಚ್ಚನವರು ಬಹುಮಾನ ವಿತರಿಸಿದರು.

ಕೊನೆಯದಾಗಿ ಗುಡ್ಡನ ಮೀನಾಕ್ಷಿ ಇವರಿಂದ ವಂದನಾರ್ಪಣೆ. ಇಂತಹ ಬೇಸಿಗೆ ಶಿಬಿರ ಕಾರ್ಯಕ್ರಮಗಳ ಬಗ್ಗೆ ಇನ್ನು ಹೆಚ್ಚಿನ ಮಕ್ಕಳಿಗೆ ಮಾಹಿತಿ ನೀಡಿ ಜ್ಞಾನಾರ್ಜನೆಯ ವಿಶಯವಾಗಿ ಮುಂದಿನ ವರ್ಷ ಇದೇ ರೀತಿ ಕಾರ್ಯಕ್ರಮವು ಸಂತೋಷದಿಂದ ಸಾಗಲಿ ಎಂದು ಹಾರೈಸುವ

**ವರದಿ : ಅಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ**

**ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.**



# ಆದಿ ಚುಂಚನಗಿರಿ ಮಠ ಮತ್ತು ಶೃಂಗೇರಿ ಶಾರದಾ ಪೀಠಗಳ ಜಗದ್ಗುರುಗಳ ಸಮ್ಮಿಲನ : ಶೃಂಗೇರಿ ಕ್ಷೇತ್ರದ ಅಭಿವೃದ್ಧಿಗೆ ಜಂಟಿ ಯೋಜನೆಗಳು



ಶೃಂಗೇರಿಯಲ್ಲಿ ಮೇ 19ರಂದು ಕೋಟಿ ಅರ್ಚನೆಯ ಫಲಶ್ರುತಿಯಾಗಿ ಸ್ವಾಮಿದ್ವಯರು ಒಂದಾದರು. ಶೃಂಗೇರಿಯ ಅಭಿವೃದ್ಧಿ ಗೆ ಸಂಕಲ್ಪ ತೊಟ್ಟರು. ಇಬ್ಬರೂ ಕಲೆತು ಚರ್ಚಿಸಿ ಜಂಟಿ ಯೋಜನೆ ಹಮ್ಮಿಕೊಳ್ಳಲು ಸಹಮತ ವ್ಯಕ್ತಪಡಿಸಿದರು.

ಕೋಟಿ ಅರ್ಚನೆ ಚಂಡಿಕಾಯಾಗದ ಪೂರ್ಣಾಹುತಿಯಲ್ಲಿ ಪಾಲ್ಗೊಳ್ಳಲು ಬಂದ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಭಾರತೀತೀರ್ಥ ಸ್ವಾಮಿಗಳು ಹಾಗೂ ಆದಿಚುಂಚನಗಿರಿ ಕ್ಷೇತ್ರದ ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಈ ಸಂಕಲ್ಪ ಮಾಡಿದರು.

**ಶೃಂಗೇರಿ ಕಟ್ಟೋಣ :** 'ನಾವು, ನೀವು ಸೇರಿ ಶೃಂಗೇರಿ ಕಟ್ಟೋಣ. ಶೃಂಗೇರಿಯ ಜನತೆಗೆ ಎಲ್ಲ ಸೌಕರ್ಯಗಳನ್ನು ಒದಗಿಸಲು ಒಟ್ಟಾಗಿ ಏನಾದರೂ ಪ್ರಯತ್ನ ಮಾಡೋಣ. ಈ ಬಗೆಯ ಚಿಂತನೆ ಮಾಡಲು ಸಹವರ್ತಿಗಳು ಇರಲಿಲ್ಲ. ಈಗ ಇಬ್ಬರೂ ಕೂತು ಚರ್ಚಿಸೋಣ' ಎಂಬ ಸಲಹೆಯನ್ನು ಇಬ್ಬರೂ ಒಪ್ಪಿಕೊಂಡರು.

ಶೃಂಗೇರಿ ಸುತ್ತಲ ಹಳ್ಳಿಗಳನ್ನು ದತ್ತು ಪಡೆದು ಅಭಿವೃದ್ಧಿ ಪಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಸಾಧ್ಯವಿದ್ದ ಕಡೆ ಸರ್ಕಾರದ ನೆರವು ಪಡೆಯೋದು. ಬಡವರ ಸೇವೆ ಮಾಡುವುದು ಶ್ರೀಗಳ ಜಂಟಿ ಸಂಕಲ್ಪವಾಗಿದೆ.

ಕೋಟಿ ಅರ್ಚನೆ ಸಮಾರೋಪದ ಸಮಾರಂಭದಲ್ಲಿ ಈ ವಿಚಾರವನ್ನು ಬಾಲಗಂಗಾಧರನಾಥ ಸ್ವಾಮಿಗಳೇ ತಿಳಿಸಿದರು. ಶೃಂಗೇರಿ ಪೀಠದ ಬಗ್ಗೆ ಅಪಾರ ಗೌರವ. ಅಭಿಮಾನ ವ್ಯಕ್ತಪಡಿಸಿದ ಅವರು ಶೃಂಗೇರಿ ಶ್ರೀಗಳ ವಿಚಾರಧಾರೆಯಿಂದ ಪ್ರಭಾವಿತ ಆಗಿರುವುದಾಗಿ ಹೇಳಿದರು.

**ಕೋಟಿ ಅರ್ಚನೆಯ ಯಶಸ್ಸಿಗೆ ನೆರವಾದ ಹಾಗೂ ಮೆಚ್ಚುಗೆ ಮಾತುಗಳನ್ನಾಡಿದ ಶ್ರೀ ಭಾರತೀತೀರ್ಥ ಸ್ವಾಮಿಗಳಿಗೆ ಹೃದಯ ತುಂಬಿದ ಅಭಿವಂದನೆ ಸಲ್ಲಿಸಿದರು.**

ಕೇವಲ ಧಾರ್ಮಿಕ ಚಟುವಟಿಕೆಗಳಲ್ಲಿ ನಿರತರಾದರೆ ಸಾಲದು. ಸಮಾಜಕ್ಕೆ, ಜನಸಾಮಾನ್ಯರಿಗೆ ಅನುಕೂಲ ಆಗುವಂಥ ಏನಾದರೂ ಕಾರ್ಯಕ್ರಮ ರೂಪಿಸಬೇಕು. ಆ ನಿಟ್ಟಿನಲ್ಲಿ ತಾವಿಬ್ಬರೂ ಸೇರಿ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

**ಕೃತಜ್ಞತೆ :** ಕೋಟಿ ಅರ್ಚನೆಯ ಯಶಸ್ಸಿಗೆ ಸಹಕರಿಸಿದ ಪ್ರತಿಯೊಬ್ಬರನ್ನು ಸ್ಮರಿಸಿದ ಶ್ರೀಗಳು ತಮ್ಮ ಮೇಲೆ ತೋರಿದ ಪ್ರೀತಿ, ಮಧುರ ಭಾವನೆಗೆ ಕೃತಜ್ಞತೆ ಸಲ್ಲಿಸಿದರು. ಕೋಟಿ ಅರ್ಚನೆಯಿಂದ ಸಕಲರಿಗೂ ಸನ್ಮಂಗಳು ಉಂಟಾಗಲಿ ಎಂದು ಹಾರೈಸಿದರು. 'ಸಾಯಂಕಾಲ ಖರ್ಚು ಮಾಡುವ ಶೇಕಡಾ ಹತ್ತರಷ್ಟು ಹಣವನ್ನಾದರೂ ನಮಗೆ ಕೊಡಿ' ಎಂದು ಮದ್ಯಪಾನ ನಿಷೇಧಕ್ಕೆ ಕರೆ ನೀಡಿದ ಶ್ರೀಗಳು ಮದ್ಯಪಾನ ಪೂರ್ತಿ ನಿಲ್ಲಿಸಿದರೆ ತುಂಬಾ ಸಂತೋಷ ಎಂದು ಹಾಸ್ಯಭರಿತವಾಗಿ ಹೇಳಿದರು. ದೇಶವನ್ನು ಉತ್ತಮವಾಗಿ ಕಟ್ಟೋಣ. ಜಾತಿ, ಭೇದ ಮರೆತು ಎಲ್ಲರೂ ಒಂದಾಗೋಣ ಎಂದು ಕರೆ ನೀಡಿದರು.

ಪ್ರತಿಯೊಂದು ಧರ್ಮದ ತಿರುಳು ಕೂಡಾ ಒಂದೇ. ಒಳ್ಳೆಯ ಕೆಲಸ ಮಾಡುವಾಗ ಜಾತಿ ಗೋಡೆಗಳು ಅಡ್ಡಿ ಬರೋದಿಲ್ಲ. ರಾಜಕೀಯದಲ್ಲೂ ಅಷ್ಟೇ, ಎಲ್ಲವೂ ಜಾತಿ ನೋಡಿ ಆಗೋದಿಲ್ಲ. ಪ್ರೀತಿ ನೋಡಿಯೇ ಓಟು ಕೊಡ್ತಾರೆ ಹೊರತು ಜಾತಿ ನೋಡಿಯೇ ಕೊಡೋದಿಲ್ಲ. ಅದೇ ರೀತಿ ಸ್ವಾಮಿಗಳನ್ನೂ ಗಮನಿಸುತ್ತಾರೆ. ಅವರ ನಡೆ ನುಡಿಗಳ ಬಗ್ಗೆಯೂ ಸಮಾಜ ಅಷ್ಟೇ ಗಮನ ಹರಿಸುತ್ತದೆ ಎಂದರು.

ಈ ಜಂಟಿ ಯೋಜನೆ ಬಗ್ಗೆ ಪ್ರಸ್ತಾಪಿಸಿದ ಬೆಂಗಳೂರು ಓಂಕಾರಾಶ್ರಮದ ಶ್ರೀ ಶಿವಪುರಿ ಸ್ವಾಮಿಗಳು ಧರ್ಮಕಾರ್ಯದ ಜೊತೆಗೆ ಸಾಮಾಜಿಕ ಕಾರ್ಯ ಆಗಲಿ ಬೆಳಗಲಿ ಎಂದು ಹಾರೈಸಿದರು.

ಆಧ್ಯಾತ್ಮ ಬೋಧನೆ ಯಾರಿಗೆ ಬೇಕು ಎಂದು ವಿಶ್ಲೇಷಿಸಿದ ಅವರು ಬಡವರಿಗೆ ಆಹಾರ, ವಸತಿ ಮೊದಲು ಬೇಕು. ಅದನ್ನೂ ಕೊಡುವವರು ಬೇಕು. ಈ ದಿಕ್ಕಿನಲ್ಲಿ ಬಾಲಗಂಗಾಧರನಾಥ ಸ್ವಾಮಿಗಳು ಮಾಡುತ್ತಿರುವ ಕಾರ್ಯಗಳು ಸ್ಮರಣೀಯ. ಅವರು ನಡೆದು ಬಂದ ರೀತಿ ಅನುಕರಣೀಯ ಎಂದರು.

ಆದಿಚುಂಚನಗಿರಿ ಮಠ ಹಾಗೂ ಕ್ಷೇತ್ರದ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಕಾರ್ಯಗಳ ಬಗ್ಗೆ ಸಮಾರಂಭದಲ್ಲಿ ಮಾತನಾಡಿದ ಎಲ್ಲರೂ ಅಭಿಮಾನದ ಮಾತುಗಳನ್ನು ಆಡಿದರು.

ಕದ್ರಿ ಮಠದ ರಾಮಮೋಹನ್‌ನಾಥಜಿ ಕೃಪಲಾನಿ, ಕಂದಾಯ ಸಚಿವ ಹೆಚ್.ಸಿ. ಶ್ರೀಕಂಠಯ್ಯ, ಸಣ್ಣ ಕೈಗಾರಿಕಾ ಸಚಿವ ಕಾಶಪ್ಪನವರ್, ಸಂಸತ್ ಸದಸ್ಯ ಡಿ. ಸಿ. ಶ್ರೀಕಂಠಪ್ಪ. ಬಿಜೆಪಿ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ, ಮಾಜಿ ಶಿಕ್ಷಣ ಸಚಿವ ಹೆಚ್. ಜಿ. ಗೋವಿಂದೇಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಾ. ಸಿ. ವಿಠಲ್ ಮತ್ತಿತರರು ಇದೇ ಮಾತುಗಳನ್ನು ಆಡಿದರು.

---

ಜಾರಿದ ಮಾತು, ಬಿಟ್ಟ ಬಾಣವು ಒಂದೇ

## 'ಸಮ್ಮಿಳನ ಕೂಟ' ಗೌಡ ಸಮಾಜ, ನಂಜರಾಯಪಟ್ಟಣ

ಕೊಡಗು ದಿನಾಂಕ 07-05-2000 ನೇ ಭಾನುವಾರ ಪೂರ್ವಾಹ್ನ 10-00ರಿಂದ ಕಾವೇರಿ ನದಿತೀರ 'ದುಬಾರೆ'ಯಲ್ಲಿ ಸಮಾಜದ ಅಧ್ಯಕ್ಷರಾದ ಶ್ರೀ ಮೂಟೇರ ನಂಜುಂಡನವರ ಅಧ್ಯಕ್ಷತೆಯಲ್ಲಿ ವಿಜ್ರಂಭಣೆಯಿಂದ ನಡೆಯಿತು.

ಕರೆಯೋಲೆ ಪ್ರಕಾರ ಶ್ರೀಮತಿ ಶ್ರೀ ಊರುಬೈಲು ಪಿ. ಜಯಪ್ರಕಾಶ್. ಅಧ್ಯಕ್ಷರು ಜಿಲ್ಲಾ ಪಂಚಾಯ್ತಿ ಕೊಡಗು ಜಿಲ್ಲೆ. ಕಾರಣಾಂತರದಿಂದ ಹಾಜರಾಗಲಿಲ್ಲ.

ಮುಖ್ಯ ಅತಿಥಿಗಳಾಗಿ ಶ್ರೀಮತಿ/ಶ್ರೀ ದಂಬೆಕೋಡಿ ಎಸ್. ಆನಂದ ಜನರಲ್ ಮೇನೇಜರ್ ಕೆ.ಎಸ್.ಎಫ್.ಸಿ. ಹಾಗೂ ಅಧ್ಯಕ್ಷರು ಗೌಡ ಸಮಾಜ ಬೆಂಗಳೂರು ರವರು ಉಪಸ್ಥಿತರಾಗಿ ಕಾರ್ಯಕ್ರಮ ನಡೆಯಿತು.

ಐಯಂಡ್ರ ಶ್ರೀಮತಿ ಲಲಿತಾ ಚಿದಂಬರ ಹಾಗೂ ಪುತ್ರಿ ಮಾನಸರವರುಗಳಿಂದ ಪ್ರಾರ್ಥನೆ ನಡೆಯಿತು. ಸಮಾಜದ ಬಾಂದವರಾಗಿದ್ದು ಮೃತಪಟ್ಟ ಕೊಳ್ಳೀರ ಮಾಯಮ್ಮ, ಕೊಳ್ಳೀರ ಉಮೇಶ. ಕೆದಂಬಾಡಿ ನಿರ್ಮಲ, ಕೋಟುಮಾಡು ನಾಗವೇಣಿ - ಇವರುಗಳ ಆತ್ಮಕ್ಕೆ ಶಾಂತಿ ಕೋರಲಾಯ್ತು.

ಸಮಾಜದ ಅಧ್ಯಕ್ಷರು ಮುಖ್ಯ ಅತಿಥಿಗಳನ್ನೂ ಸನ್ಮಾನಿತರಾಗೀ ಬಂದು ಶ್ರೀ ಕಳಂಜನ ಸೋಮಯ್ಯ ನಿವೃತ್ತ ವ್ಯವಸ್ಥಾಪಕರು. ಸಿಂಡಿಕೇಟ್ ಬ್ಯಾಂಕ್ ಹಾಗೂ ಸರ್ವರನ್ನು ಸ್ವಾಗತಿಸಿದರು.

ಸಮಾಜದ ಕಾರ್ಯದರ್ಶಿಗಳಾದ ಕೆಮ್ಮಾರನ ಶ್ರೀ ಉತ್ತಯ್ಯನವರಿಂದ ವಾರ್ಷಿಕ ವರದಿಯನ್ನು ಓದಲಾಯ್ತು.

ಕೆಮ್ಮಾರನ ಶ್ರೀಮತಿ /ಶ್ರೀ ಉತ್ತಯ್ಯನವರುಗಳ ಮಕ್ಕಳಿಂದಲೂ, ಕೋಟುಮಾಡು ಶ್ರೀಮತಿ/ಶ್ರೀ ತಿಮ್ಮಯ್ಯನವರ ಮಕ್ಕಳಿಂದಲೂ, ಐಯಂಡ್ರ ಶ್ರೀಮತಿ/ ಶ್ರೀ ಲಲಿತಾ ಚಿದಂಬರ ರವರ ಪುತ್ರಿಯಿಂದಲೂ ವಿವಿಧ ವಿನೋದಾವಳಿಗಳು ನಡೆದು ಬಹುಮಾನ ಪಡೆದರು.

ಈ ಹಿಂದೆ ನಮ್ಮೂರಲ್ಲಿ ಮುಖ್ಯ ಶಿಕ್ಷಕಿಯಾಗಿ ನಿವೃತ್ತಿ ಹೊಂದಿದ ಶ್ರೀಮತಿ ಮೂಟೇರ ಪೊನ್ನಮ್ಮನವರು ರೂ 2000/-ವನ್ನು ನಿರಖಿ ಠೇವಣಿಯಾಗಿ ಬ್ಯಾಂಕಿನಲ್ಲಿಟ್ಟು ಬರುವ ವಾರ್ಷಿಕ ಬಡ್ಡಿ ಹಣವನ್ನು 10ನೇ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದ ಕುಲಬಾಂದವ ಮಕ್ಕಳಿಗೆ ವರ್ಷಂಪ್ರತಿ ಬಹುಮಾನವಾಗಿ ಕೊಡಬೇಕೆಂದು ಕೇಳಿಕೊಂಡಮೇರೆ ಈ ವರ್ಷದಿಂದಲೇ ಬಹುಮಾನವಾಗಿ ಕೊಡಲಾಯ್ತು

ನಮ್ಮ ಸಮಾಜದಲ್ಲಿ ಸಂಪಾದಿಸಿದ್ದು ಹಣದಿಂದ ಎರಡು (ಒಂದು ಜೊತೆ) ಕಾಸ್ತಾಳಿಯನ್ನು ಲಗ್ನಕಾರ್ಯಕ್ಕಾಗಿ ತಯಾರಿಸಿದನ್ನು ಶ್ರೀಮತಿ ದಂಬೆಕೋಡಿ ಮಾಲ ಆನಂದರವರು ಒಂದು ಕಾಸ್ತಾಳಿಯನ್ನು ಶ್ರೀ ದಂಬೆಕೋಡಿ ಆನಂದರವರು ಇನ್ನೊಂದು ಕಾಸ್ತಾಳಿಯನ್ನು ಉದ್ಘಾಟನೆ ಮಾಡಿ ಸರ್ವಕುಲ ಬಾಂಧವರು ಲಗ್ನಕಾರ್ಯಕ್ಕಾಗಿ ಉಪಯೋಗಿಸಿ ಎಂದು ಹೊಗಳಿ ಸಮಾಜದ ಅಧ್ಯಕ್ಷರ ಹಸ್ತಕ್ಕೆ ಕೊಟ್ಟರು.

ನಿವೃತ್ತಿ ಹೊಂದಿದ ಕಳಂಜನ ಶ್ರೀ ಸೋಮಯ್ಯನವರನ್ನು ದಂಬೆ ಕೋಡಿ ಶ್ರೀ ಆನಂದರವರು ಶಾಲುಹೊದಿಸಿ ಹಾರ ಹಾಕಿ ಫಲಪುಷ್ಪನೀಡಿ ಗೌರವಿಸಿದರು.

ಸಮ್ಮಿಳನ ಕೂಟ ನಡೆಯುತ್ತಿರುವಾಗಲೇ Ex. M.L.A.ಶ್ರೀ ದಂಬೆಕೋಡಿ ಮಾದಪ್ಪನವರೂ ಕೊಡಗು ಜಿಲ್ಲಾ ಜಾತ್ಯಾತೀತ ಜನತಾ ಪಾರ್ಟಿಯ ಅಧ್ಯಕ್ಷರಾದ ಉತ್ತಯ್ಯನವರುಗಳು ಹಾಜರಾಗಿ ಕೂಟವನ್ನು ಚಂದಕಾಣಿಸಿದರು.

ಪ್ರೌಢಶಾಲಾ ಅಧ್ಯಕ್ಷರಾದ ಶ್ರೀ ಐಯಂಡ್ರ ಭೀಮಯ್ಯನವರು 'Lucky Dip'ನ್ನು ಎತ್ತಿ ಅದೃಷ್ಟಶಾಲಿಗಳ ಸಂಖ್ಯೆಯನ್ನು ಬಯಲು ಪಡಿಸಿದರು.

ಮುಖ್ಯ ಅತಿಥಿಗಳಿಂದಲೂ Ex. MLA ಶ್ರೀ ಡಿ.ಎಸ್. ಮಾದಪ್ಪನವರಿಂದಲೂ. ಶ್ರೀ Y. M. ಉತ್ತಯ್ಯನವರಿಂದಲೂ ಭಾಷಣಗಳಾದನಂತರ ಶ್ರೀ ಆ.ಸು. ಬೋಪಣ್ಣನವರಿಂದ ಸುಧೀರ್ಘ ವಂದನಾರ್ಪಣೆಯಾಯ್ತು.

ಕೊನೆಗೆ ಸರ್ವರಿಗೆ ಕೊಡಗಿನ ಸಾಂಪ್ರದಾಯಿಕ ಭೋಜನ ಕೂಟ ಏರ್ಪಡಿಸಿತ್ತು.

**ಎಂ. ಕೆ. ನಂಜುಂಡ,**

**ಅಧ್ಯಕ್ಷರು, ಗೌಡ ಸಮಾಜ,ನಂಜರಾಯಪಟ್ಟಣ**

---

### ನಗೆ ಹನಿ

ಒಂದ್ ಸಲ ಮಡಿಕೇರಿಲಿ "ಅಲ್ಪ ಸಂಖ್ಯಾತರ ಉಳಿವು"ತ ಹೇಳುವ ವಿಷಯದ ಬಗ್ಗೆ ಮೆರವಣಿಗೆ ಹೋಗ್ತಾ ಇತ್. ಅದರ್‌ಲಿ, ಅಲ್ಪ ಸಂಖ್ಯಾತರ್‌ಗ "ಬೇಕೇ ಬೇಕು ನ್ಯಾಯ ಬೇಕು" ಎಂದ್ ಕೂಗಿಕಂಡ್ ಹೋಗ್ತಾ ಇದ್ದೊ. ಆಗ ಅವರ ಹಿಂದೆ ಟಿಬೇಟ್‌ಗ "ಬೆಕ್ಕೆ ಬೆಕ್ಕು ನಾಯಿ ಬೆಕ್ಕು" ತ ಕೂಗ್ತಾ ಹೋಗ್ತಿದ್ದೊ.

**ಯಾಲದಾಳು. ಈ. ಚಂದ್ರಕಲಾ. ಮಡಿಕೇರಿ.**

---

### ಸ್ವರ್ಗಸ್ಥರಾದೊ

ಮೇ ತಿಂಗ್ಳ 25ರ್ಲಿ ಮಡಿಕೇರಿ ತಾಲೂಕ್ ಬೆಟ್ಟಗೇರಿ ಊರ್‌ನ ನೈಯಣಿ ಲೇಟ್ ಚಿಣ್ಣಪ್ಪನವ್ರ ಧರ್ಮಪತ್ನಿ ಚಿಣಮ್ಮನವು ನಿಧನರಾದೊ. ಇವುಕೆ 97ವರ್ಷ ಪ್ರಾಯ ಆಗಿತ್ತ್‌ಗಡ. ಇವು ಅಪಾರ ಸಂಸಾರನ ಬುಟ್ಟು ಹೋಗೋಳೊತ ತಿಳ್ಸ್‌ಬಂದುಟ್ಟು.

ಸಿದ್ದಾಪುರ ನಿವಾಸಿ ಆದ ಪೇರಿಯನ ಕಾರ್ಯಪ್ಪನವ್ರ ಧರ್ಮಪತ್ನಿ ಅಮ್ಮಾಜಿಯವು ತಾರೀಖ್ ಮೇ 19ರ್ಲಿ ಸ್ವರ್ಗಸ್ಥರಾದೊ. ಇವು ಪತಿ ಮತ್ತೆ ಮಂಜ್ಣ ಹಂಗೆ ಅಪಾರ ಬಂದುವರ್ಗ ಬುಟ್ಟು ಹೋಗೋಳೊ.

ಬಿಳಿಗೇರಿ ಗ್ರಾಮದ ತುಂತಜ್ಜೀರ ಕಾಳಪ್ಪನವರ ಧರ್ಮಪತ್ನಿ ಕಾವೇರಮ್ಮನವರು ತಾ. 31-5-2000ರಂದು ನಿಧನ ಹೊಂದಿದರು. ಮೃತರು ಐವರು ಪುತ್ರರನ್ನು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಇವರಿಗೆ 90 ವರ್ಷ ವಯಸ್ಸು ಆಗಿತ್ತು.

---

ಆಡು ಮುಟ್ಟದ ಸೊಪ್ಪಿಲ್ಲ




✦ ಕೌಂಡಿನ್ಯ : ಧಾರವಾಹಿ -32

ಬಂಗಲೆಯ ಹಾಲ್‌ನಲ್ಲಿ !

ಸೋಫಾದಲ್ಲಿ ದೊಡ್ಡ ಅಣ್ಣ ವೀರಭದ್ರ ಪಿಳಿ ಪಿಳಿ ಕಣ್ಣು ಬಿಡುತ್ತಾ ಕುಳಿತು ಕೊಂಡಿದ್ದಾನೆ.

ಅವನ ಮನಸ್ಸಿಗೆ ಅರಿವಾಗಿಲ್ಲ !

ಭಾವನೆಗಳ ಸ್ಪಂದವಿಲ್ಲ

ಆದರೆ ಮನಸ್ಸು ಕೆಡಿಸಿಕೊಂಡಿರೋದು ಪ್ರಸನ್ನ ಮಾತ್ರ ! ಅವನು ಅತ್ತಿತ್ತ ಚಡಪಡಿಸುತ್ತಾ ತಿರುಗುತ್ತಿದ್ದಾನೆ.

ಭಯ, ಗಾಬರಿ, ಆತಂಕ !

ರಮ್ ಕುಡಿಯುತ್ತಿದ್ದಾನೆ

ಸಿಗರೇಟ್ ಸೇದುತ್ತಿದ್ದಾನೆ.

ಅವನು ಅಂದು ಕೊಂಡಿದ್ದೇನು ಈಗ ನಡೆಯುತ್ತಿರುವುದಾದರು ಸಹ ಏನು? ಎಲ್ಲಾ ತಿರುಗು ಮುರುಗು.

ಲಿಂಗಯ್ಯನನ್ನು ಅನುಮಾನಿಸಿದ್ದನು !

ಲಿಂಗಯ್ಯ ಯಾವುದೋ ದುರುದ್ದೇಶದಿಂದ ಹುಚ್ಚನಂತೆ ನಾಟಕ ಆಡುತ್ತಿದ್ದಾನೆ ಅಂತ ಅಂದುಕೊಂಡಿದ್ದಾನೆ !

ಎರಡು ಸಲ ತನ್ನನ್ನು ಸಾಯಿಸಲು ಲಿಂಗಯ್ಯ ಪ್ರಯತ್ನಿಸಿದ್ದನು ಅಂತ ಅನುಮಾನ ಬಂದಿತು !

ಅನುಮಾನ ಬರುವಂತ ಘಟನೆಗಳು ನಡೆದಿತ್ತು. ಈ ಲಿಂಗಯ್ಯ ಸತ್ತು ಹೋಗಿದ್ದಾನೆ!

ಅಂದರೆ ಈ ಪ್ರಕರಣದ ಹಿಂದೆ ಬೇರೆ ಯಾರೋ ಇದ್ದಾರೆ ಅಂತ ಆಯಿತು !

ಲಿಂಗಯ್ಯನನ್ನು ಈ ಬಂಗಲೆಯಿಂದ ಹೊರಗೆ ಎತ್ತಿಕೊಂಡು ಹೋಗಿ ಬುದ್ಧಿವಂತಿಕೆ ಉಪಯೋಗಿಸಿದ್ದಾರೆ !

ಅಕ್ಕ ಅರುಂಧತಿಗೂ ಹೀಗೆ ಆಯಿತು !

ಅರುಂಧತಿ ನನ್ನನ್ನು ಸಾಯಿಸಲು ಪ್ರಯತ್ನಿಸುತ್ತಿದ್ದಾಳೆ ಅಂತ ಅನುಮಾನ ಬಂದಿತ್ತು. !

ಅರುಂಧತಿ ಸಹ ಸತ್ತಳು !

ಅರುಂಧತಿ ನನ್ನನ್ನು ಸಾಯಿಸಲು ಪ್ರಯತ್ನಿಸಲೇ ಇಲ್ಲ ಎಂದು ಅವಳ ಡೈರಿಯಿಂದ ಗೊತ್ತಾಯಿತು.

ಭಾವ ಸಹ ಹುಚ್ಚುನಂತೆ ನಾಟಕ ಆಡುತ್ತಿದ್ದಾನೆ ಅಂತ ಅಂದು ಕೊಂಡೆ. ಅವರು ಸಹ ಸತ್ತರು !

ನಮ್ಮ ಕುಟುಂಬದಲ್ಲಿ ಪ್ರತಿಯೊಬ್ಬರೂ ಸಹ ಈ ರೀತಿ ನಿಗೂಢ ರೀತಿಯಲ್ಲಿ ಸಾಯುತ್ತಿದ್ದಾರೆ.

ಇದಕ್ಕೆ ಕಾರಣ ಏನು !

ಇದರ ಹಿಂದೆ ಯಾರಿದ್ದಾರೆ?

ರಮ್ ಕುಡಿಯುತ್ತಿರುವಾಗ ಸೋಫಾದಲ್ಲಿ ಪಿಳಿಪಿಳಿ ಕಣ್ಣು ಬಿಡುತ್ತಾ ಕುಳಿತಿದ್ದ ದೊಡ್ಡಣ್ಣ ವೀರಭದ್ರ ಕಂಡನು !

ಬೆಚ್ಚಿ ಬಿದ್ದನು ಪ್ರಸನ್ನ !

ನನ್ನವರೆಲ್ಲಾ ನಾಟಕ ಆಡುತ್ತಿದ್ದಾರೆ ಅಂತ ಅನುಮಾನಿಸಿದೆ. ಎಲ್ಲರೂ ಸಹ ಒಬ್ಬೊಬ್ಬರಾಗಿ ಸಾಯುತ್ತಿದ್ದಾರೆ.

ಈಗ ಉಳಿದಿರೋದು ವೀರಭದ್ರ ಮಾತ್ರ !

ಇಲ್ಲ...... ಇಲ್ಲ....... ಅವನನ್ನು ಅನುಮಾನಿಸಲಾರೆ. ಅಣ್ಣನಿಗೆ ಸದಾ ರಕ್ಷಣೆಯನ್ನು ಕೊಡಬೇಕು !

ಇಲ್ಲದಿದ್ದರೆ ಕೊಲೆಗಾರ ಅವನನ್ನು ಸಹ ಮತ್ತೊಂದು ರೀತಿಯಲ್ಲಿ ಹುತ್ತದ ಹತ್ತಿರ ಕರೆದುಕೊಂಡು ಹೋಗಬಹುದು.

ಪ್ರಸನ್ನ ಭಯಗೊಂಡನು.

ಕೆಲಸದ ಆಳುಗಳನ್ನು ಕರೆದು ಸೂಚನೆ ನೀಡಿದನು. ಸದಾ ಯಾರಾದರೂ ಇಬ್ಬರು ಅಣ್ಣನ ಜೊತೆ ಇದ್ದು ರಕ್ಷಣೆ ನೀಡುತ್ತಿರಬೇಕೆಂದು ತಿಳಿಸಿದರು.

ಈಗ ವೀರಭದ್ರನನ್ನು ಕೆಲಸದವರು ಅವನ ಕೋಣೆಗೆ ಕರೆದುಕೊಂಡು ಹೋದರು.

ಪ್ರಸನ್ನ ರಮ್ ಕುಡಿಯುತ್ತಿದ್ದಾನೆ !

ಅಮಲು ತಲೆಗೇರುತ್ತಿದೆ !

ರೇವತಿ ನೆನಪಾದಳು.

ಕೋಪದಿಂದ ಹಲ್ಲು ಕಡಿದನು. ಅವಳನ್ನು ಕತ್ತರಿಸಿ ಎಸೆಯಬೇಕು ಎನ್ನುವಂತಹ ಕೋಪ ಬರುತ್ತಿದೆ !

ಮಲ್ಲಿಗೆಯ ಪರಿಮಳದೊಂದಿಗೆ ಗೆಜ್ಜೆಯ ಶಬ್ದ ಕೇಳಿಬಂದಾಗ ಸರ್‍ರನೆ ತಲೆ ಎತ್ತಿದನು.

ರೇವತಿ ನಿಂತಿದ್ದಳು.

ಪ್ರಸನ್ನ ವ್ಯಂಗ್ಯವಾಗಿ "ಓ..... ಪತ್ತೇದಾರಿ ಕೆಲಸವನ್ನು ಮುಗಿಸಿಕೊಂಡು ಬಂದಿದ್ದೀರ ಅಂತ ಕಾಣುತ್ತೆ. ಮೇಡಂ ಕೊಲೆಗಾರ ಯಾರು ಅಂತ ಹೇಳುತ್ತೀರ?"

ರೇವತಿಯ ಮುಖ ಕೆಂಪೇರಿತು.

ಪ್ರಸನ್ನ ಕೋಪದಿಂದ "ಕಮಾನ್... ಹೇಳಿ ಹೇಳಿ.. ಕೊಲೆಗಾರ ಯಾರು ಅಂತ ಹೇಳಿ. ಆ ಸೂಳೆಮಗನ ಸೊಂಟ ಮುರಿದು ಉಳಿದಿರೋ ಒಬ್ಬ ಅಣ್ಣನನ್ನಾದರೂ ಉಳಿಸಿಕೊಳ್ಳುತ್ತೇನೆ?"

ರೇವತಿ ಮೆಲ್ಲನೆ "ಕೊಲೆಗಾರ ಯಾರು ಅಂತ ನನಗೆ ತಿಳಿದಿದ್ದರೆ ಆಗಲೇ ಹೇಳಿರುತ್ತಿದ್ದೆ"

"ಹಾಗಾದ್ರೆ ಮತ್ತೇನ್ರಿ ಗೊತ್ತಿದೆ ನಿಮಗೆ?"

ರೇವತಿ "ಈ ನಿಗೂಢ ಪ್ರಕರಣದ ಬಗ್ಗೆ ಬೆಳಕನ್ನು ಚೆಲ್ಲುವಂತಹ ಸಣ್ಣ ಸುಳಿವು."

"ಅದಕ್ಕೆ ಪೋಲಿಸರನ್ನು ಬರಲು ಹೇಳಿದ್ರಿ?"

"ಹೌದು, ಅದರಲ್ಲಿ ತಪ್ಪೇನು?"

20ನೇ ಪುಟಕ್ಕೆ

ಇಲ್ಲಿಯವರೆಗೆ.........

ಲಿಂಗಯ್ಯನ ಸಾವಿನ ಪ್ರಕರಣದಿಂದ ತನಗೆ ಒಂದು ಸುಳಿವು ಗೊತ್ತಾಗಿದೆ ಎಂದು ರೇವತಿ ಪೋಲಿಸ್ ಅಧಿಕಾರಿಗೆ ಹೇಳುತ್ತಾಳೆ. ಪೂಜಾರಿ, ಶ್ರೀಕಂಠ ಎಚ್ಚರಿಕೆ ನೀಡುತ್ತಾರೆ. ಅವರು ಈಗ ಎಡತೊರೆ ಬಂಗಲೆಗೆ ಬರುತ್ತಾರೆ.

ಮುಂದೆ ಓದಿ..........

ಆತುರಗಾರನಿಗೆ ಬುದ್ಧಿ ಮಟ್ಟು

## ಪ್ರೀತಿ :

ಪ್ರೀತಿ ಅನ್ನುವುದು ಆತ್ಮದಿಂದ ಸಾಕ್ಷಾತ್ಕರಿಸುತ್ತದೆ. ಪ್ರೀತಿಯು ಕೇವಲ ಎರಡು ಅಕ್ಷರದ ಪದವಾದರೂ ತನ್ನೊಳಗೆ ಹಲವಾರು ಅರ್ಥಗಳನ್ನು ಅಡಗಿಸಿಕೊಂಡಿದ್ದು ಸಂದರ್ಭಕ್ಕೆ ತಕ್ಕ ಭಾವನೆಯನ್ನು ಅದು ಅಭಿವ್ಯಕ್ತಪಡಿಸುತ್ತದೆ. ಆಗತಾನೆ ಹುಟ್ಟಿದ ನವಜಾತ ಶಿಶು ತನ್ನ ತಾಯಿಯೊಂದಿಗೆ ಹೊಂದಿರುವ ಪ್ರೀತಿಯೇ ಮಾತೃವಾತ್ಸಲ್ಯ. ಆ ಮಗುವಿಗೆ ತನ್ನ ತಾಯಿಯನ್ನು ಮಾತ್ರ ವಾತ್ಸಲ್ಯದಿಂದ ನೋಡು ಎಂದು ಯಾರೂ ಬೋಧನೆಯನ್ನು ಮಾಡಿಲ್ಲ. ಭಕ್ತಿ ಹಿರಿಯರಲ್ಲಿ ಹೊಂದಿರುವ ಪ್ರೀತಿಯೇ ಗೌರವ. ಪ್ರಾಣಿಗಳಲ್ಲಿ ಅಂಗವಿಕಲರಲ್ಲಿ, ಬಡವರಲ್ಲಿ ಇರುವ ಪ್ರೀತಿಯೇ ಅನುಕಂಪ, ಕರುಣೆ. ಸಮವಯಸ್ಕರಾದ ಸ್ತ್ರೀ-ಪುರುಷ ಲಿಂಗಗಳಲ್ಲಿ ಹೊಂದಿರುವ ಪ್ರೀತಿಯೆ ಗೆಳೆತನ, ಸ್ನೇಹ. ಆತ್ಮೀಯತೆ. ಹೀಗೆ ಅಣ್ಣ, ತಮ್ಮ ಅಕ್ಕ, ತಂಗಿ, ಮಗ ಮಗಳು, ಹೆಂಡತಿ, ಬಂಧುಗಳು, ಪ್ರಕೃತಿ ಇಷ್ಟವಾದ ವಸ್ತು, ಬಣ್ಣ ಹೀಗೆ ತಮ್ಮ ಪಂಚೇಂದ್ರಿಯಗಳ ಇಚ್ಛೆಗೆ ನಮ್ಮ ಮನಸ್ಸನ್ನು ಸಂತುಷ್ಟಿಗೊಳಿಸುವ, ಹಗುರಗೊಳಿಸುವ ಆಂತರೀಕ ಭಾವನೆಯೇ ಪ್ರೀತಿ.

ಬದುಕಿನ ಜೀವ ಜಲವೆ ಪ್ರೀತಿ ಅದಿಲ್ಲದೆ ಇರಲಾರುದು ಬದುಕಿಗೆ ಅರ್ಥ, ಗೊತ್ತುಗುರಿಗಳ ಪತ. ವಯಸ್ಸು, ದೇಹ, ಮನಸ್ಸು ಪ್ರೀತಿ ಒಂದಕೊಂದು ತಾಳೆ ಹಾಕಿ ನೋಡದ ಪರಸ್ಪರ ದೈಹಿಕ ಆಕರ್ಷಣಾ ಮಟ್ಟ ಉಳಿಯುವ ಸಹೃದಯಗಳೆರಡರ ಸಂಗಮ. ಪ್ರೀತಿ ಯಾವಾಗ, ಎಲ್ಲಿ ಹೇಗೆ? ಸಾಕ್ಷಾತ್ಕರವಾಯಿತು ಎಂದು ಊಹೆಗೂ ನಿಲುಕದ ವಸ್ತು, ವಿಷಯ. ನಿಯಮಿತ ಶಕ್ತಿಯೇ ಪ್ರೀತಿ ಇದನ್ನು ಯಾರೂ ನಿರ್ದೇಶಿಸಲಾರರು, ನಿಗ್ರಹಿಸಲಾರರು, ನಿಯಂತ್ರಿಸಲಾರರು, ನಾಶಪಡಿಸಲಾರರು. ಸ್ವಚ್ಛಂದದ ನದಿಯಂತೆ ತನ್ನೊಡಲೊಳಗೆ ಹುಟ್ಟಿ ಇಚ್ಚೆ ಇದ್ದೆಡೆಗೆ ಹರಿಯಲಾರಂಭಿಸುತ್ತದೆ. ಕಲ್ಲಬಂಡೆಗಳನ್ನ ಸೀಳಿ, ಕಂದಕದೆತ್ತರಗಳನ್ನ ದುಮುಕಿ ಜಲಪಾತವಾಗಿ ಶೃತಿಗೈಯುತ್ತಾ ಶಾಂತಸಾಗರದಿ ಲೀನವಾಗಿ ಅಲೆಯಂತ ನೆನಪುಗಳನ್ನು ಮತ್ತೆ ಆ ನದಿಯನ್ನು ಹುಡುಕುವ ಪ್ರಯತ್ನದಲ್ಲಿ ತರಂಗ ತರಂಗವಾಗುತ್ತದೆ.

ಪ್ರೀತಿ ಕಣ್ಮ್‌ನ ಸೆಳೆಯುವ ಜಲದಾರೆ. ಅವರ್ಣೀಯ, ಅತ್ಯದ್ಭುತ ಅನುಭವ. ತನ್ನೆದೆಯೊಳಗೆ ಮಿಡಿಯುವ ಲಯ. ಬದುಕಿನ ನೂರೆಂಟು ಬೇಗೆಗಳ ನಡುವಿನ ಸಂತಸ, ಸರಸ, ಸಲ್ಲಾಪಗಳು ವಸಂತ ನಿಶ್ಚಿಂತೆಯ ನೆರಳ ನೀಡುವ ಆಶ್ರಯ ಅಪಸ್ಸರಗಳ ಜಗತ್ತಿನಿಂದ ಕಿನ್ನರ ಲೋಕಕ್ಕೆ ಕರೆದೊಯ್ಯುವ ಯಕ್ಷಿಣಿ ಸುಮಧುರ ಸಂಗೀತ ಸುಧೆಯನ್ನು ಸುರಿದು ಸೋತ ಹೃದಯವನ್ನು ಸಂತೈಸುವ ಅಮೃತಧಾರೆ.

ಪ್ರೀತಿ ಆರಂಭದಿಂದ ಅಂತ್ಯದವರೆಗೆ ಎದೆಯ ಗೂಡಿನಲ್ಲಿ ಕದಲದೆ ಕುಳಿತ ಪ್ರೀತಿ. ಪ್ರೀತಿ ಎಂಬ ಕ್ರಿಯೆಯ ಚಾಲಕ, ನಿಯಂತ್ರಕ, ನಿರ್ದೇಶಕ. (ಬೆಚ್ಚನೆಯ ಭಾವ, ನವಚೈತನ್ಯದ ಜೀವ. ಪ್ರೀತಿ ಪರಸ್ಪರ ಹಂಚಿಕೊಂಡಷ್ಟು ನಲಿವು ಹೆಚ್ಚುವುದು ನೋವು ಹಗುರವಾಗುದು. ಪ್ರೀತಿ ತಾಯಿಯ ಗರ್ಭದಿಂದ ಭೂತಾಯಿಯ ಗರ್ಭದವರೆಗೆ ಇರುವ ಜೀವನ ಪ್ರಯಾಣದ ನಡುವಿನ ಜೀವನದ ಅರುಣರಾಗ.

**ತೆಕ್ಕಡೆ ಬಿ. ಕುಮಾರ್, ಮುತ್ತಾರ್ಮುಡಿ.**

## ಐ. ಕ್ಯೂ. ಎಂದರೇನು?

ಐ.ಕ್ಯೂ. ಎಂದರೆ "ಇಂಟೆಲಿಜೆನ್ಸ್ ಕೋಶಂಟ್". ಕೆಲವು ಸಿದ್ದಪಡಿಸಿದ, ಸಾವಿರಾರು ಜನರಿಗೆ ಕೊಟ್ಟು ಮೌಲ್ಯಮಾಪನ ಮಾಡಿ ಪ್ರಶ್ನೆಗಳು, ಚಟುವಟಿಕೆಗಳನ್ನು ಕೊಟ್ಟು, ವ್ಯಕ್ತಿ ಅವನ್ನು ತಪ್ಪಿಲ್ಲದೆ ಎಷ್ಟು ಅವಧಿಯಲ್ಲಿ ಮಾಡುತ್ತಾನೆ ಗಮನಿಸಿ ಅಂಕಗಳನ್ನು ನೀಡಲಾಗುತ್ತದೆ. ನಮ್ಮ ದೇಶದಲ್ಲಿ ಸಾಧಾರಣವಾಗಿ 'ಬಿನೆ-ಕಾಮತ್ ಇಂಟೆಲಿಜೆನ್ಸ್ ಟೆಸ್ಟ್' ಅನ್ನು ಬಳಸಲಾಗುತ್ತದೆ. ಇದರಿಂದ ಮಗು/ವ್ಯಕ್ತಿಯ 'ಮಾನಸಿಕ ವಯಸ್ಸು' ತಿಳಿದು ಬರುತ್ತದೆ. ಅದರಿಂದ ಐ. ಕ್ಯೂ. ವನ್ನು ಲೆಕ್ಕಹಾಕಬಹುದು. ಉದಾಹರಣೆಗೆ ಹನ್ನೆರಡು ವರ್ಷ ವಯಸ್ಸಿನ, ಹುಡುಗನ ಮಾನಸಿಕ ವಯಸ್ಸು ಹತ್ತು ಎಂದಾದರೆ,

$$\text{ಐ. ಕ್ಯೂ.} = \frac{\text{ಮಾನಸಿಕ ವಯಸ್ಸು}}{\text{ನಿಜವಾದ ವಯಸ್ಸು}} \times 100$$

$$= \frac{10}{12} \times 100 = 83$$ ಆ ಹುಡುಗನ ಐ.ಕ್ಯೂ 83.

ಸಾಧಾರಣವಾಗಿ ಯಾವುದೇ ಸಮುದಾಯದಲ್ಲಿರುವ ಜನಗಳಲ್ಲಿ ಶೇಕಡಾ 68ರಷ್ಟು ಮಂದಿಗೆ ಐ.ಕ್ಯೂ. 85 ರಿಂದ 110 ಇರುತ್ತದೆ. ಆದ್ದರಿಂದ ಈ ಶ್ರೇಣಿಯನ್ನು 'ಆವರೇಜ್ ಐ. ಕ್ಯೂ.' ಎಂದು ಕರೆಯಲಾಗುತ್ತದೆ. ಐ. ಕ್ಯೂ. 70 ಕ್ಕಿಂತ ಕಡಿಮೆ ಇದ್ದರೆ, ಆ ಸ್ಥಿತಿಯನ್ನು 'ಬುದ್ಧಿಮಾಂದ್ಯತೆ' ಎನ್ನಲಾಗುತ್ತದೆ.

**ಸಂಗ್ರಹ : ಉಳುವಾರನ ಧನುಜ ಜನಾರ್ಧನ್**
**ಕುಶಾಲನಗರ**

## ನಗೆ ಹನಿ

### ಹೋಪ್ಲಸ್ ಬ್ಲಡ್

ನಮ್ಮ ಮನೆ ಹತ್ತಿರದ ಸಹದ್ಯೋಗಿಯೊಬ್ಬರು ಅಪಘಾತಕ್ಕೊಳಗಾಗಿ ತುರ್ತು ಚಿಕಿತ್ಸಾ ಘಟಕದಲ್ಲಿದ್ದರು. ಅವರಿಗೆ ತುರ್ತಾಗಿ 'ಎ'ಪಾಸಿಟಿವ್ ರಕ್ತದ ಅಗತ್ಯವಿತ್ತು. ವಿಷಯ ತಿಳಿದಾಗ ಡಾಕ್ಟರ್ 2ನೇ ಬ್ರಾಂಚ್‌ನಲ್ಲಿ ಒಬ್ಬರದು ಮಾತ್ರ ಆ ಗುಂಪಿನ ರಕ್ತವಾಗಿದ್ದು. ಅವರು ರಕ್ತದಾನವನ್ನು ಮಾಡಿದರು. ಆದರೆ ರೋಗಿಯ ಚೇತರಿಕೆಗೆ ಮತ್ತೊಂದು ಬಾಟಲ್ ರಕ್ತದ ಅಗತ್ಯವಿತ್ತು. ಆಫೀಸಿನ ಇನ್ನೊಂದು ಶಾಖೆ ಸ್ವಲ್ಪ ದೂರದಲ್ಲಿತ್ತು. ಆ ದಿನ ಫೋನ್ ಸರಿಯಿಲ್ಲದ ಕಾರಣ. 4ನೇ ದರ್ಜೆ ನೌಕರನನ್ನು ಕರೆದು ಆ ಶಾಖೆಗೆ ಹೋಗಿ ವಿಷಯ ತಿಳಿಸಿ ಅಲ್ಲಿರುವವರ ರಕ್ತದ ಗುಂಪು ತಿಳಿದುಕೊಂಡು ಬರಲು ಹೇಳಿದರು ಅವನು ಹಿಂತಿರುಗಿ ಬಂದು "ಮೇಡಂ" ಅವರದ್ದು ಹೋಪ್ಲೆಸ್ ಬ್ಲಡಂತೆ" ಎಂದು ಹೇಳಿದ. ಡಾಕ್ಟರ್ ಒಂದು ಕ್ಷಣ ಬಹಳ ಗಾಬರಿಯಾಯಿತು ನಂತರ ನಿಜ ತಿಳಿದಾಗ ನಗೆ ತಡೆಯಲಾಗಲಿಲ್ಲ (ಓ ಪ್ಲಸ್) ಅವನ ಮಾತಿನಲ್ಲಿ ಹೋಪ್ಲೆಸ್ ಆಗಿತ್ತು.

**ಸಂಗ್ರಹ : ಅಚ್ಚಲ್ಪಾಡಿ ಬೀನ ಗೋಪಾಲ, ಮಡಿಕೇರಿ**

**ಗಾಳಿ ಕುಡ್ದ್ ಬದ್ಕಿದೆ, ನೀರ್ ಕುಡ್ದ್ ಸತ್ತದೆ, ಅದ್ ಎಂಥಾ? (ಬೆಂಕಿ)**

# ವಿದ್ಯಾವಂತ ನಿರುದ್ಯೋಗಿಗಳಿಗೆ ಮಾರ್ಗದರ್ಶಿ - 3

ಟಿ. ಪಿ. ಕುಮಾರ ಜಯ

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.

| 1 | 2 | 3 | 4 |
|---|---|---|---|
| 1 | ಫಾಲ್ಕನ್ ಟೈರ್‍ಸ್ | ಅಟೆಂಡೆಂಟ್ ಆಪರೇಟರ್ | 35 |
| | ಕೆ.ಆರ್. ಎಸ್. ರಸ್ತೆ | ಫಿಟ್ಟರ್ | 3 |
| | ಮೇಟಗಳ್ಳಿ, ಮೈಸೂರು-10 | ಎಲೆಕ್ಟ್ರಿಷಿಯನ್ | 2 |
| | | ಬಾಯ್ಲರ್ ಅಟೆಂಡೆಂಚ್ | 2 |
| 2 | ಮಂಗಳೂರು ಮೋಟಾರ್‍ಸ್ ವರ್ಕ್ಸ್ | ಎಂ.ಎಂ.ವಿ. | 1 |
| | ವಿನೋಬ ರಸ್ತೆ, ಮೈಸೂರು -5 | | |
| 3 | ಸುಂದರಂ ಮೋಟಾರ್‍ಸ್ | | |
| | ನಂ. 676, ಎಂ.ಎಂ.ವಿ. | | |
| | ಮಿರಾಜ್ ರಸ್ತೆ, ಮೈಸೂರು -10 | ಮೆಕ್ಯಾನಿಕ್ ಡಿಸಲ್ | 1 |
| 4 | ಸಿಕೋ ಮ್ಯಾನುಪ್ಯಾಕ್ಚರ್‍ಸ್ | ಫಿಟರ್ | 1 |
| | ಮಾನಂದವಾಡಿ ರಸ್ತೆ | ಟರ್‍ನರ್ | 1 |
| | ಪಿ.ಬಿ. ನಂ. 305 | ಮೆಕಾನಿಸ್ಟ್ | 1 |
| | ಮೈಸೂರು -8 | ಶೀಟ್ ಮೆಟಲ್ ವರ್ಕ್‌ರ್ | 1 |
| 5. | ಶಿವಮೊಗ್ಗ ಸ್ಟೀಲ್ ಲಿ. | ಫಿಟರ್ | 2 |
| | ಕೆ.ಆರ್. ರಸ್ತೆ | ಎಲೆಕ್ಟ್ರೀಷಿಯನಂ | 2 |
| | ಮೈಸೂರು -16 | | |
| 6 | ಗೌರ್‍ನಮೆಂಟ್ ಸಿಲ್ಕ್ | ಬಾಯ್ಲರ್ ಅಟೆಂಡೆಂಟ್ | 2 |
| | ಮುಳ್ಳೂರು ರಸ್ತೆ, ಕೊಳ್ಳೆಗಾಲ - 4 | | |
| 7 | ಗೌರ್‍ನಮೆಂಟ್ ಸಿಲ್ಕ್ (KSIC) | ವೇವರ್ | 4 |
| | ಮತ್ತು ವೇವಿಂಗ್ ಫ್ಯಾಕ್ಟರಿ, | ಬಾಯ್ಲರ್ ಅಟೆಂಡೆಂಟ್ | 1 |
| | ಮಾನಂದವಾಡಿ ರಸ್ತೆ. | | |
| | ಮೈಸೂರು -8 | | |
| 8. | ಗೌರ್‍ನಮೆಂಟ್ ಸಿಲ್ಕ್ (KSIC) | ಬಾಯ್ಲರ್ ಅಟೆಂಡೆಂಟ್ | 1 |
| | ಟಿ. ನರಸೀಪುರ - 571 124 | | |
| 9 | ಮೈಸೂರು ಪ್ರಿಂಟರ್‍ಸ್ ಅಂಡ್ | ಬುಕ್ ಬೈಂಡರ್ | 1 |
| | ಪಬ್ಲಿಷಿಂಗ್ ಕ್ಲಾಕ್ ಟವರ್ | | |
| | ಎದುರು, ಮೈಸೂರು -1 | | |
| 10 | ಬೆಂಗಳೂರು ಪ್ರೆಸ್ | ಹ್ಯಾಂಡ್ ಕಂಟೋಸಿಟರ್ | 1 |
| | ಸ್ಯಾಚು ಸ್ಟೇರ್, ಮೈಸೂರು -1 | ಬುಕ್ ಬೈಂಡರ್ | 1 |
| 11 | ಸರ್ಕಾರದ ಟೆಕ್ಸ್ಟ್ ಬುಕ್ಸ್ ಪ್ರೆಸ್ | ಹ್ಯಾಂಡ್ ಕಂಪೋಸಿಟರ್ | 13 |
| | ಸರಸ್ವತಿಪೂರಂ, ಮೈಸೂರು -9 | ಬುಕ್ ಬೈಂಡರ್ | 30 |
| | | L.P.M.M. | 07 |
| | | L.P.M.M | 03 |
| 12 | ಕರ್ನಾಟಕ ಸೋಪ್ಸ್ ಮತ್ತು | ಬಾಯ್ಲರ್ ಅಟೆಂಡೆಂಟ್ | 2 |
| | ಡಿಟರ್ಜೆಂಟ್ಸ್ ಲಿಮಿಟೆಡ್ | | |
| | (ಸ್ಯಾಂಡಲ್ ವುಡ್ ಆಯಿಲ್ | | |
| | ಡಿವಿಜನ್), ಮೈಸೂರು ೮ | | |
| 13 | ಸೌತ್ ಇಂಡಿಯನ್ ಪೇಪರ್ | ಫಿಟರ್ | 2 |
| | ಮಿಲ್ಸ್ ಲಿ., ಚಿಕ್ಕಯ್ಯನ ಛತ್ರ | ಎಲೆಕ್ಟ್ರಿಷಿಯನ್ | 1 |
| | ನಂಜನಗೂಡು | ಬಾಯ್ಲರ್ ಅಟೆಂಡೆಂಟ್ | 2 |
| 14 | ಹುಣಸೂರು ಪ್ಲೈವುಡ್ ವರ್ಕ್ | ಫಿಟ್ಟರ್ | 1 |
| | ಪ್ರೈವೇಟ್ ಲಿ., ಹುಣಸೂರು | | |
| 15 | ಟ್ರಸ್ಟ್ ವೆಲ್ ಫೌಂಡರ್‍ಸ್ | ಮೌಲ್ಡರ್ | 5 |
| | ಮೇಟಗಳ್ಳಿ, ಕೆ.ಆರ್. ಎಸ್. ರಸ್ತೆ | | |
| | ಮೈಸೂರು -6 | | |
| 16 | ಯುನಿವರ್ಸಿಟಿ ಪ್ರಿಟಿಂಗ್ ಪ್ರೆಸ್ | ಹ್ಯಾಂಡ್ ಕಂಪೊಸಿಟರ್ | 4 |
| | ಮಾನಸ ಗಂಗೋತ್ರಿ | ಬುಕ್ ಬೈಂಡರ್ | 3 |
| | | L.P.M.M. | 3 |
| 17 | ಚಾಮುಂಡಿ ಮೆಶಿನ್ ಟೂಲ್ಸ್ | ಫಿಟ್ಟ್ರ | 1 |
| | ಲಿಮಿಟೆಡ್, ಕೆ.ಆರ್.ಎಸ್.ರಸ್ತೆ | ಮೆಕಾನಿಸ್ಟ್ | 2 |
| | ಮೇಟಗಳ್ಳಿ, ಮೈಸೂರು | | |
| 18 | ಸುಜಾತ ಟೆಕ್ಸ್‌ಟೈಲ್ಸ್ ಮಿಲ್ಸ್ | ಟೆಕ್ಸಂ-ಮೆಕಾನಿಕ್ | 6 |
| | ನಂಜನಗೂಡು-571301 | ಡೋಫರ್ ಕಂ ಪ್ರೆಸರ್ | 3 |
| 19 | ವಿಕ್ರಾಂತ್ ಟೈರ್‍ಸ್ ಲಿ., | ಫಿಟ್ಟರ್ | 08 |
| | ಮೈಸುರು | ಟರ್‍ನರ್ | 02 |
| | | ಎಲೆಕ್ಟ್ರಿಷಿಯನ್ | 03 |
| | | ವೆಲ್ಡರ್ | 03 |
| | | ಎಲೆಕ್ಟ್ರಿಕ್ ಮೆಕಾನಿಕ್ | 04 |
| 20 | ಕೆ.ಎಸ್. ಆರ್.ಟಿ.ಸಿ. ಮೈಸೂರು | ಮೆಕಾನಿಕ್ ಡಿಸೆಲ್ | 190 |
| | ಡಿವಿಜನ್, ಮೈಸೂರು -15 | ಆಟೋ ಎಲೆಕ್ಟ್ರಿಷಿಯನ್ | 05 |
| | | ಫಾರ್‍ಗರ್ ಮತ್ತು H.T. | 03 |
| 21 | ಕರೀಂ ಸಿಲ್ಕ್ ಇಂಟರ್‍ನ್ಯಾಷನಲ್ | ಫಿಟ್ಟರ್ | 02 |
| | ಲಿಮಿಟೆಡ್, ನಂ. 6 ಮತ್ತು 7 | ಬಾರ್ ಅಟೆಂಡೆಂಟ್ | 01 |
| | ಇಂಡಸ್ಟ್ರಿಯಲ್ ಏರಿಯಾ | | |
| | ನಂಜನಗೂಡು-571301 | | |
| 22 | ಮಹದೇಶ್ವರ ಸಹಕಾರಿ ಸಕ್ಕರೆ | ಫಿಟ್ಟರ್ | 02 |
| | ಕಾರ್ಖಾನೆ ಲಿ., ಕುಂತೂರು, | M.W.M. | 02 ಸರಿಯಾಗಿ |
| | ಕೊಳ್ಳೇಗಾಲ ತಾ\|\| | ವೈರ್‌ಮೆನ್ 01 | ನಡೆಯುತ್ತಿಲ್ಲ |
| | | ಬಾಯ್ಲರ್ ಅಟೆಂಡೆಂಟ್ | 02 |
| 23 | ಟ್ರೈಟಾನ್ ವ್ಯಾಲ್ವ್‌ಸ್ ಲಿ., | ಫಿಟ್ಟರ್ | 02 |
| | ಇಲವಾಲ ರಸ್ತೆ, ಬೆಳವಾಡಿ I.E. | ಮೆಕಾನಿಸ್ಟ್ | 04 |
| | ಮೈಸೂರು -86 | ಟರ್‍ನರ್ | 02 |
| 24 | ವಿಷ್ಣು ಫಾರ್‍ಗರ್ ಮೈಸೂರು | ಫಿಟ್ಟರ್ | 01 |
| | ಲಿ., ಕೆ.ಆರ್.ಎಸ್. ರಸ್ತೆ, | ಟರ್‍ನರ್ | 02 |
| | ಮೇಟಗಳ್ಳಿ, ಮೈಸೂರು-16 | ಮೆಕಾನಿಸ್ಟ್ | 01 |
| | | ಫಾರ್‍ಗೆಟ್ ಅಂಡ್ H.T. | 05 |
| 25 | ವಿಜಯಾ ವೈರ್‍ಸ್ ಅಂಡ್ | ಎಲೆಕ್ಟ್ರಿಷಿಯನ್ | 01 |
| | ಫಿಲೆಮೆಂಟ್ಸ್ ಕೆ.ಆರ್. ಎಸ್. ರಸ್ತೆ | | |
| | ಮೈಸೂರು16 | | |
| 26 | ಟ್ರೈವೆಂಟ್ ಇಂಜಿನಿಯರಿಂಗ್ | ಟರ್‍ನರ್ | 01 |
| | ವರ್ಕ್ಸ್, 1,2,3 ಟಿ.ಎ., | ಮೆಕಾನಿಸ್ಟ್ | 01 |
| | ಕೆ.ಆರ್. ಎಸ್. ರಸ್ತೆ, | ಮೆಕನಾನಿಸ್ಟ್ | 01 |
| | ಮೈಸೂರು 1-6 | | |
| 27 | ರಾಮನ್ ಬೋರ್ಡ್‌ಲಿ., | ಫಿಟ್ಟರ್ | 01 |
| | ತಾಂಡವಪುರ, | ಎಲೆಕ್ಟ್ರಿಷಿಯನ್ | 01 |

**ಮಳೆಗೆ ಅರ್‍ಲ್ಲದೆ, ಬಿಸಿಲಿಗೆ ಅರ್‍ಲ್ಲದೆ, ಅದ್ ಎಂಥಾ? (ಕೊಡೆ)**

| | | | |
|---|---|---|---|
| | ನಂಜನಗೂಡು | ಬಾಯ್ಲರ್ | 01 |
| | | ಅಟೆಂಡೆಂಟ್ | 01 |
| 28 | ಶ್ರೀ ರಾಮ ಸಹಕಾರಿ ಸಕ್ಕರೆ | ಬಾಯ್ಲರ್ ಅಟೆಂಡೆಂಟ್ | 02 |
| | ಕಾರ್ಖಾನೆ ಲಿ., ಚುಂಚನಕಟ್ಟೆ | ಫಿಟ್ಟರ್ | 02 |
| | ಕೆ.ಆರ್. ನಗರ ತಾ||, | ಸ್ಟೀಂ ಟರ್ನರ್ ಆಪರೇಟರ್ | 01 |
| | ಕೆ.ಆರ್. ನಗರ ತಾ.|| | ಎಲೆಕ್ಟ್ರಿಷಿಯನ್ | 01 |
| | ಮೈಸೂರು ಡಿಸ್ಟ್ರಿಕ್ | ಟರ್ನರ್ | 01 |
| | | ಮೆಕಾನಿಸ್ಟ್ | 01 |
| | | ವೆಲ್ಡರ್ | 01 |
| 29 | ಬೊರಕ ಅಲ್ಯೂಮಿನಿಯಂ ಲಿ., | ಮೆಕಾನಿಸ್ಟ್ | 3 |
| | ನಂ. 1, ಕೆ.ಆರ್. ಎಸ್. ರಸ್ತೆ | ಫಿಟ್ಟರ್ | 2 |
| | ಮೈಸೂರು -16 | | |
| 30 | ವಿಲ್‌ಕಿನ್‌ಸನ್ ಸ್ಟೋರ್ಡ್ ಇಂಡಿಯಾ | ಫಿಟ್ಟರ್ | 02 |
| | 110-113-ಕಿಡೇ ಏರಿಯಾ, | ವೆಲ್ಡರ್ | 1 |
| | ಮೇಟಗಳ್ಳಿ, ಮೈಸೂರು-16 | M.W.M | 1 |
| 31 | ಜೀಪ್ ಇಂಡಸ್ಟ್ರಿಯಲ್ | | |
| | ಸಿಂಡಿಕೇಟ್ | ಫಿಟ್ಟರ್ | 01 |
| | ನಂ. 120, 122 | (ಪಿ) ವೆಲ್ಡರ್ | 1 |
| | ಬೆಳಗೊಳ ಐ. ಎ., ಮೈಸೂರು -16 | | |
| 32 | ಆನಂದ ಟ್ರಾನ್ಸ್ ಪೋರ್ಟ್ | ಪ್ಲೇಟ್ ಮೇಕರ್ | 2 |
| | ಮತ್ತು ಟ್ರೇಡರ್, ವಿನೋಬ ರಸ್ತೆ | L.OM. M. | 3 |
| | ಮೈಸೂರು-1 | | |
| 33 | ರಾಜ ಆಟೋ ಅಂಡ್ ಡೀಸಲ್ | ಮೆಕಾನಿಕ್ ಮೋಟಾರ್ ಸೈಕಲ್ | 1 |
| | ಸರ್ವೀಸ್, ಊಟಿ ರಸ್ತೆ | | |
| | ಮೈಸೂರು | | |
| 34. | ಆಟೋಮೋಟಿವ್ ಆಕ್ಸಲ್ ಲಿ., | ಮೆಕಾನಿಸ್ಟ್ | 8 |
| | ಹೂಟಗಳ್ಳಿ | ಫಿಟ್ಟರ್ | 8 |
| | ಐ.ಎ. ಹುಣಸೂರು ರಸ್ತೆ | ಟರ್ನರ್ | 8 |
| | ಮೈಸೂರು-86 | ವೆಲ್ಡರ್ | 8 |
| | | ಎಲೆಕ್ಟ್ರಿಷಿಯನ್ | 3 |
| | | M.W.M. | 1 |
| | | ಇನ್‌ಸ್ಟ್ರುಮೆಂಟ್ ಮೆಕಾನಿಕ್ | 1 |
| | | ಮೆಕಾನಿಕ್ ಮೋಟಾರ್ ಸೈಕಲ್ | 5 |
| 35 | ಗ್ಲೌಟ್ರೋನಿಸ್, ಲಿ. ಹೂಟಗಳ್ಳಿ | ಫಿಟ್ಟರ್ | 1 |
| | ಇಂಟಸ್ಟ್ರಿಯಲ್ ಏರಿಯಾ, | | |
| | ಮೈಸೂರು -86 | | |
| 36 | ಸ್ಮಿತ್ ಕ್ಲೈಂ ಫಾರ್ಮಟಿಕಲ್ ಲಿ., | ಫಿಟ್ಟರ್ | 1 |
| | ನಂ. 107, ಬೆಳಗೊಳ ಐ.ಎ., | | |
| | ಮೇಟಗಳ್ಳಿ, ಮೈಸೂರು-16 | ಮೆಕಾನಿಕ್ ಮೈಟ್ (ಸಿ.ಪಿ.) | 1 |
| 37 | ಮೆಟಲ್ ಕ್ಯಾಂಪ್ ಕ್ಯಾಪ್ಸ್ | ಎಲೆಕ್ಟ್ರಿಷಿಯನ್ | 1 |
| 38 | ಸಾನ್ ಇಂಜಿನಿಯರಿಂಗ್ ಅಂಡ್ | ಮೆಕಾನಿಸ್ಟ್ | 2 |
| 39 | ಇಂಡಿಯನ್ ಅಲ್ಯೂಮಿಸಿಯಂ ಕಂ. | ಎಲೆಕ್ಟ್ರಿಷಿಯನ್ | 3 |
| | (ಎಲೆಕ್ಟ್ರಿಕಲ್ ಡಿವಿಜನ್) | ಎಲೆಕ್ಟ್ರಾನಿಕ್ ಮೆಕಾನಿಕ್ | 10 |
| | ಇಂಡಾಲ್ ಏರಿಯಾ, | ಫಿಟ್ಟರ್ | 2 |
| | ನಂಜನಗೂಡು | | |
| 40 | ಜೆಮಿನಿ ಡಿಸ್ಟಿಲರಿ ಲಿ., | ಫಿಟ್ಟರ್ | 1 |
| | ಚಾಮರಾಜನಗರದ ರಸ್ತೆ | ಎಲೆಕ್ಟ್ರಿಷಿಯನ್ | 1 |
| | ನಂಜನಗೂಡು -571 301 | ಬಾಯ್ಲರ್ ಅಟೆಂಡೆಂಟಂ | 2 |
| 41 | ಸೂಪರ್ ಫೈನ್ ಅರೋಮೆಟಿಕ್ | ಬಾಯ್ಲರ್ ಅಟೆಂಡೆಂಟ್ | 2 |
| | ಕಂಪನಿ ಲಿ., ನಂ. 10, | | |
| | ಕೆ.ಐ. ಎ.ಡಿ.ಬಿ. ನಂಜನಗೂಡು | | |
| 42 | ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂ. ಲಿ., | ಎಲೆಕ್ಟ್ರಿಷಿಯನ್ | 07 |
| | ಯೂನಿಟ್ 4, ಬೆಳವಾಡಿ ಐ. ಎ. | ಎಲೆಕ್ಟ್ರಿಕ್ ಮೆಕಾನಿಕ್ | 03 |
| | ಮೈಸೂರು-86 | | |
| 43 | ಲಾರ್ಸನ್ ಮತ್ತು ಟೂಬ್ರೋ ಲಿ., ಹೂಟಗಳ್ಳಿ | | |
| | | ಎಲೆಕ್ಟ್ರಾನಿಕ್ ಮೆಕಾನಿಕ್ | 02 |
| | KAIDB, A, ಹೆಬ್ಬಾಳ್, ಮೈಸೂರು -86 | | |
| 44 | ನೆಸ್ಲೇ (ಇಂಡಿಯಾ) ಲಿ., ಪುಡ್ ಸ್ಪೆಸಲಿಸ್ಟ್ ಲಿ., | | |
| | | M.W.ಮೆಕ್ | 01 |
| | ನಂಜನಗೂಡು | M.R.AC | 03 |
| | | ಬಾಯ್ಲರ್ ಅಟೆಂಡೆಂಟ್ | 04 |
| | | ಎಲೆಕ್ಟ್ರಿಷಿಯನ್ | 01 |
| 45 | ರಿಕಾನ್ ಮೆಕಾನಿಕ್ ಟೂಲ್ಸ್ (ಪ್ರೈ.)ಲಿ., | ಮೆಕನಿಸ್ಟ್ | 01 |
| | ಹೂಟಗಳ್ಳಿ ಐ.ಎ. | ಫಿಟರ್ | 01 |
| | ಹುಣಸೂರು ರಸ್ತೆ, ಮೈಸೂರು 86 | ಟರ್ನರ್ | 01 |
| 46 | ಅಡ್ವಾನ್ಸ್ ಕಾಂಪೋನೆಂಟ್ಸ್ ಮತ್ತು ಇನ್‌ಸ್ಟ್ರುಮೆಂಟ್ಸ್ | | |
| | ಪ್ರೈ.ಲಿ., 3ಎ-5ಎ/ಎ ಬೆಳವಾಡಿ | ಎಲೆಕ್ಟ್ರಾನಿಕ್ | |
| | ಐ.ಎ, ಮೈಸೂರು 86 | ಮೆಕಾನಿಕ್ | 01 |
| 47 | ಟೆಕ್ನೋ ಟೂಲ್ಸ್ ನಂ. 12.13 | ಮೆಕಾನಿಸ್ಟ್ | 01 |
| | ಬೆಳವಾಡಿ ಐ.ಎ. ಮೈಸೂರು-86 | | |
| 48 | ವೆನ್‌ಲಾನ್ ಫಾಲಿಸ್ಟರ್ ಫಿಲ್ಮ್ ಲಿ., | ಎಲೆಕ್ಟ್ರಿಷಿಯನ್ | 01 |
| | ನಂ. 26 (ಪಿ) ಬೆಳವಾಡಿ ಐ.ಎ | ಬಾಯ್ಲರ್ ಅಟೆಂಡೆಂಟ್ | 02 |
| | ಮೈಸೂರು -86 | ಪಿ.ಪಿ.ಓ | 01 |
| 49 | ಗಣೇಶ್ ಗೇರ್ಸ್ ಲಿ., | ಟರ್ನರ್ | 03 |
| | ಮೇಟಗಳ್ಳಿ ಐ.ಎ ಪಿ.ನಂ.106, | | |
| | ಕೆ.ಆರ್. ಎಸ್. ರಸ್ತೆ | ಮೆಕಾಗ್ರೈಂಡರ್ | 01 |
| | ಮೈಸೂರು -16 | ಮೆಕಾನಿಸ್ಟ್ | 01 |
| 50 | ದೀಪಕ್ ಟೂಲ್ಸ್ ಮತ್ತು ಹೀಟ್ ಟ್ರೇಟರ್ | | |
| | | F& H ಟ್ರೇಟರ್ | 01 |
| | ಬಿ. 14 ಹೆಬ್ಬಾಳ್ ಐ.ಎ. ಮೈಸೂರು -16. | | |

ಮುಂದುವರಿಯುತ್ತದೆ

## ಕೊಡಗು ಮತ್ತು ದ.ಕ. ಜಿಲ್ಲಾ ಗೌಡ ಮಹಿಳಾ ಸಂಘ, ಮೈಸೂರು

ನಮ್ಮ ಸಂಘದ ಮಾಸಿಕ ಸಭೆಯನ್ನು ದಿನಾಂಕ 15-6-2000ದ ಗುರುವಾರ ಅಪರಾಹ್ನ 2-30ಕ್ಕೆ ಕೊಡಗು ಗೌಡ ವಿದ್ಯಾಸಂಘ ಶಾಖೆ, ಜಯಲಕ್ಷ್ಮಿ ಪುರಂ, ಮೈಸೂರು. ಇಲ್ಲಿ ನಡೆಸಲಿದ್ದು, ಮಾನ್ಯ ಸದಸ್ಯರು ಮತ್ತು ನಮ್ಮ ಎಲ್ಲಾ ಮಹಿಳೆಯರು ಸಮಯಕ್ಕೆ ಸರಿಯಾಗಿ ಆಗಮಿಸಿಬೇಕಾಗಿ ವಿನಂತಿ.

ಕಾರ್ಯದರ್ಶಿ

**ರೂಪ ಇಲ್ಲೆ, ಗುಣ ಇಲ್ಲೆ, ರುಚಿ ಇಲ್ಲೆ, ಇದ್ ಇಲ್ಲದೆ ಗತಿ ಇಲ್ಲೆ, ಎಂಥಾ? (ನೀರ್)**

# "ಗುರುಮಹಿಮೆ"

"ಹರ ಮುನಿಯೆ ಗುರು ಸಲಹುವ ಗುರು ಮುನಿಯೆ ಹರ ಒಲಿಯ" ಎಂಬ ಲೋಕೋಕ್ತಿಯಂತೆ, ಗುರು ಮಹಿಮೆ ಅಪಾರವಾದದ್ದು. ಗುರುವೇ ಮುಕ್ತಿಗೆ ಸಾಧನ. ಆದ್ದರಿಂದಲೇ ಶ್ರೀ ಕೃಷ್ಣ ಪರಮಾತ್ಮ ಕೂಡ ತಾನು ಆದ್ಯಂತ್ಯ ತಿಳಿದವನಾದರೂ ತನಗೊಬ್ಬ ಗುರು ಬೇಕೆಂದು ಗುರುವನ್ನು ಅರಸಿಕೊಂಡು ಹೋಗಿ ಗುರುಕುಲದಲ್ಲಿ ವಿದ್ಯೆ ಕಲಿಯುತ್ತಾನೆ.

ಮಾನವ ಕಡಲೆಯ ಆಸೆಯಲ್ಲಿ ಬಲೆಗೆ ಬಿದ್ದಿರುವ ಮಂಗನಂತೆ. ಈ ಮೋಹ ಜಾಲದಿಂದ ಬಿಡಿಸಲು ಗುರುವಿಗೆ ಮಾತ್ರ ಸಾಧ್ಯ. ವಿದ್ಯುತ್ ಶಕ್ತಿ ಭಗವಂತನೇ ಆದರೂ ಆ ಭಗವದ್ ಬೆಳಕನ್ನು (ವಿದ್ಯುತ್) ನಮ್ಮವರೆಗೆ ಎಳೆದು ತರಲು ಸಹಕಾರಿಯಾದ ಸಾಧನ (ವಿದ್ಯುತ್ ತಂತಿ)ವೆ ಗುರುವು. ದೇವ ಮಂದಿರಕ್ಕೆ ಗುರುವೇ ಬಾಗಿಲು.

ಹಸಿ ಪಿಟ್ಟನಂತಿರುವ ಮಾನವ ಸಂಸಾರವೆಂಬ ಬಾಣಲಿಯಲ್ಲಿ ಸುಖ, ದುಃಖ ನೋವು ಎಂಬ ಕಾದ ಎಣ್ಣೆಯಲ್ಲಿ ಬಿದ್ದು ಕರಕಲಾಗುವ ಮುನ್ನ ಗುರು ಕರುಣೆ ಎಂಬ ಜಾಲರಿಯು ಅವನನ್ನು ಎತ್ತಿ ಪ್ರೇಮವೆಂಬ ರಸಪಾಕದಲ್ಲಿ ಮುಳಗಿಸಿ, ಗುರುವಾಣಿಯ ಅಮೃತವನ್ನು ಪಾನ ಮಾಡಿಸಿ ಮಾನವನನ್ನು ಪರಿಪಕ್ವವಾಗಿಸುವುದು.

ಭವವೆಂಬ ಕಡಲಿನಲ್ಲಿ ಮೋಹವೆಂಬ ಅಲೆಯು ಮತ್ತೆ ಮತ್ತೆ ಬರುತ್ತಿರಲು ಆಸೆ ಎಂಬ ತಂಗಾಳಿಯು ಬೀಸಿ ಮಾನವನನ್ನು ಸೆಳೆಯುತ್ತಿರಲು ಬಂಧುಗಳು, ಬಳಗ ಮಕ್ಕಳು ಎಂಬ ಮೋಹ ಪಾಶದಲ್ಲಿ ಬಂದಿಯಾಗಿರಲು, ಸಂಸಾರದ ಸುಳಿಗೆ ಸಿಲುಕಿ ಕಡಲಿನಾಳಕ್ಕೆ ಇಳಿದಿರುವ ಈ ಜೀವಕ್ಕೆ ಭಕ್ತಿ ಎಂಬ ದೋಣಿಯಿತ್ತು ಗುರುವು ಅಂಬಿಗನಂತೆ ನಿಂತು, ಸಂಸಾರ ಸಾಗರವನ್ನು ದಾಟಿಸಿ ಮುಕ್ತಿಗೆ ಕೊಂಡೊಯ್ಯುವನು. ಗುರು ಭಕ್ತಿಯ ಪರಾಕಾಷ್ಠೆಗೇರಿದ ಏಕಲವ್ಯನ ಕತೆಯೇ ಇದಕ್ಕೆ ನಿದರ್ಶನ.

ಬಾಲಯೋಗಿಯೊಬ್ಬ ಗುರು ಜಪ ಮಾಡುತ್ತಾ ಎಲ್ಲರೂ ನೋಡುತ್ತಿದ್ದಂತೆಯೇ ತುಂಬಿದ ನದಿಯನ್ನು ನೀರಿನ ಮೇಲೆ ನಡೆಯುತ್ತಾ ದಾಟಿದನಂತೆ. ಇದನ್ನು ನೋಡಿದ ಗುರು ಅಹಂನಿಂದ ನಾನು ನಾನು ಎಂದು ಹೇಳುತ್ತಾ ನೀರಿನ ಮೇಲೆ ನಡೆಯಲು ಹೋಗಿ ಮುಳುಗಿ ಹೋದನಂತೆ. ಇದರಿಂದ ಗುರುಭಕ್ತಿಯ ಬಲವನ್ನು ಅರಿತುಕೊಳ್ಳಬಹುದು. ಅಣಿಮಾದಿ ಅಷ್ಟಸಿದ್ಧಿಗಳೂ ಅನನ್ಯ ಗುರುಭಕ್ತಿಯ ಫಲದಿಂದ ಲಭಿಸುವುದು.

"ಗುರು ಪಾದ ಸೇವೆ ತಾ ದೊರೆಕೊಂಡಿತಾದಡೆ
ಪಿರಿದಾದ ಪಾಪ ಪರಿಯುವುದು ಕರ್ಪೂರದ
ಗಿರಿಯು ಸುಟ್ಟಂತೆ ಸರ್ವಜ್ಞ" ಎಂದು ಸರ್ವಜ್ಞ ಕೂಡ ಗುರು ಮಹಿಮೆಯನ್ನು ಕೊಂಡಾಡಿದ್ದಾರೆ.

ಗುರು ಮಹಿಮೆಗೆ ಇನ್ನೊಂದು ಉದಾಹರಣೆ ತ್ರೋಟಕಾಚಾರ್ಯರು. ಇವರು ಆದಿಗುರು ಶಂಕರಾಚಾರ್ಯ ಶಿಷ್ಯರಲ್ಲಿ ಒಬ್ಬರು. ಇವರ ಹಿಂದಿನ ಹೆಸರು ಗಿರಿ ಎಂದು. ಅನನ್ಯ ಭಕ್ತಿಯಿಂದ ಗುರುಗಳ ಸೇವೆ ಮಾಡುತ್ತಾ ಸದಾ ಅವರ ಸನ್ನಿಧಿಯಲ್ಲೇ ಇರುತ್ತಿದ್ದನು. ಒಂದು ದಿನ ನದಿಗೆ ಸ್ನಾನಕ್ಕೆಂದು ಹೋದವನು ಬಹಳ ಹೊತ್ತು ಹಿಂತಿರುಗಿರಲಿಲ್ಲ. ಗುರುಗಳು ಪ್ರವಚನಕ್ಕಾಗಿ ಬಂದು ಕುಳಿತಿದ್ದರು. ಸುತ್ತಲೂ ಶಿಷ್ಯವೃಂದದವರು ಪಾಠಕ್ಕಾಗಿ ಗ್ರಂಥಗಳನ್ನು ಮುಂದಿಟ್ಟು ಕೊಂಡು ಕುಳಿತ್ತಿದ್ದರು. ಶ್ರೀ ಶಂಕರಾಚಾರ್ಯರು ಗಿರಿ ಬರುವುದನ್ನು ಕಾಯುತ್ತಿದ್ದರು. ಮಿಶ್ರಭಾಷೆ ಮಾತನಾಡುವ ಶೃಂಗೇರಿಯವನಾದ ಇವನನ್ನು ಕಂಡರೆ ಉಳಿದ ಶಿಷ್ಯರಿಗೆ ತಾತ್ಸಾರ. ಹೀಗಿರಲು ಒಬ್ಬ ಶಿಷ್ಯ, ಗುರುಗಳೇ ನಾವೆಲ್ಲರೂ ಬಂದಿದ್ದೇವೆ ಪಾಠ ಪ್ರಾರಂಭಿಸಿ ಎಂದು ವಿನಂತಿಸಿಕೊಂಡನು. ಗಿರಿ ಬರಲಿ ಎಂದು ಗುರುಗಳು ಹೇಳಿದರು. ಹೆಡ್ಡನಿಗೇಕೆ ಕಾಯುವುದು ಎಂದು ಇನ್ನೊಬ್ಬ ಶಿಷ್ಯ ಕುಚೊದ್ಯವಾಡಿದನು. ಆಗ ಗುರುಗಳು "ಗಿರಿಯು ಹೆಡ್ಡನೇ" ಎಂದು ಹೇಳಿ ಮನಸ್ಸಿನಲ್ಲಿಯೇ ಅವನನ್ನು ಆಶೀರ್ವದಿಸಿದರು. ಅದೇ ವೇಳೆಗೆ ಗಿರಿಯು ಸ್ನಾನ ಮುಗಿಸಿ ಮಠಕ್ಕೆ ಹಿಂತಿರುಗುತ್ತಲಿದ್ದನು. ಇದ್ದಕ್ಕಿದ್ದಂತೆ ಅವನಲ್ಲಿ ಪಾಂಡಿತ್ಯ ಸಂಚಾರವಾಯಿತು. ಅವನು "ತ್ರೋಟಕಾವೃತ್ತದಲ್ಲಿ ಶ್ರೀ ಶಂಕರಾಚಾರ್ಯರ ಮಹಿಮೆಯನ್ನು ಅದ್ವೈತ ಮತದ ದೇವಾಲಯಗಳನ್ನು ಕುರಿತು, ಕವನಗಳಲ್ಲಿ ಹಾಡುತ್ತಾ ಸಭೆಯನ್ನು ಪ್ರವೇಶಿಸಿದನು. ಅವನ ಪಾಂಡಿತ್ಯವನ್ನು ನೋಡಿ ಅಲ್ಲಿದ್ದ ಶಿಷ್ಯವೃಂದ ನಾಚಿ ತಲೆತಗ್ಗಿಸಿತು. ಶ್ರೀ ಶಂಕರಾಚಾರ್ಯರು ಗಿರಿಯನ್ನು ಮುಂದೆ ಕರೆದು ಅವನ ತಲೆಯ ಮೇಲೆ ತಮ್ಮ ವರದ ಹಸ್ತವನ್ನಿಟ್ಟು "ತ್ರೋಟಕಾಚಾರ್ಯ" ಎಂದು ಘೋಷಿಸಿದರು. ಅವನು ಹಾಡಿದ ಸ್ತೋತ್ರಕ್ಕೆ ಶೃತಿಕಾರ ಸಮುದ್ಧರಣ ಎಂದು ಹೆಸರಾಯಿತು. ಇವನು ಸನ್ಯಾಸ ಸ್ವೀಕರಿಸಿ, ತ್ರೋಟಕಾಚಾರ್ಯ ಎಂಬ ಹೆಸರಿನಿಂದ ಪ್ರಸಿದ್ಧನಾಗಿ ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಒಂದಾದ ಬದರಿಕಾಶ್ರಮ ಮಠದ ಪ್ರಪ್ರಥಮ ಪೀಠಸ್ಥರಾದರು. ಹೀಗೆ ಗುರು ಮಹಿಮೆಗೆ ಬೇರೆ ಸಾಟಿಯೇ ಇಲ್ಲ. "ಗುರುವಿನ ಗುಲಾಮನಾಗುವ ತನಕ ದೊರಕದಣ್ಣಾ ಮುಕುತಿ" ಎಂದು ದಾಸರು ಕೂಡ ಗುರು ಮಹಿಮೆಯನ್ನು ಹಾಡಿ ಹೊಗಳಿದ್ದಾರೆ.

**ವಿದ್ಯಾರ್ಥಿಗಳಿಗೆ :** ಹೈಸ್ಕೂಲ್ (ಪ್ರೌಢಶಾಲೆ) ದಾಟಿದ ನಂತರದ ಗುರುಶಿಷ್ಯ ಸಂಘದ ಕೇವಲ ವ್ಯಾಪಾರಿಕವಾಗಿ ಬಿಟ್ಟಿದೆ. ಅಆ ಕಲಿಸುವ ಗುರುಗಳಿಂದ ಮೊದಲ್ಗೊಂಡು ಉಪನ್ಯಾಸಕರವರೆಗೆ ಹೆಚ್ಚೇಕೆ ಪ್ರತಿಯೊಂದು ವಿಚಾರವನ್ನು ತಿಳಿಯ ಹೇಳುವವರು ಗುರು ಸ್ಥಾನದಲ್ಲಿ ನಿಲ್ಲುತ್ತಾರೆ. ಆದ್ದರಿಂದ ಗುರುಗಳಿಗೆ ಭಕ್ತಿ ಗೌರವ ತೋರಿಸದರೆ ಜೀವನದಲ್ಲಿ ಏನನ್ನಾದರೂ ಲೀಲಾಜಾಲವಾಗಿ ಸಾಧಿಸಬಹುದು. ಯಾವ ಗುರುಗಳಲ್ಲಿ ನೀವು ಹೆಚ್ಚಿನ ಭಕ್ತಿ ಗೌರವ ತೋರಿಸುವಿರೂ ಅಂಥವರು ಪಾಠಗಳಲ್ಲಿ ಬಹಳ ಮುಂದಿರುವುದೇ ಇದಕ್ಕೆ ಸಾಕ್ಷಿ. ಆದ್ದರಿಂದ ನಿಮಗೆ ಯಾವ ಪಾಠಗಳು ಕಷ್ಟ ಕರವಾಗಿದೆಯೊ ಅಂತಹ ಪಾಠಕ್ಕೆ ಬರುವ ಗುರುಗಳನ್ನು ಗೌರವಿಸಿ ವಿಧೇಯರಾಗಿ ನಡೆದುಕೊಳ್ಳಿ. ಬರ ಬರುತ್ತಾ ನಿಮಗೆ ಅವರ ಪಾಠಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿ ಹೆಚ್ಚು ಅಂಕಗಳನ್ನು ಗಳಿಸುತ್ತೀರಿ. ಇದು ಖಂಡಿತಾ ಸಾಧ್ಯವಿದೆ. ಪ್ರಯತ್ನಿಸಿ ನೋಡಿ, ಪರೀಕ್ಷಿಸಲು ಗೌರವ ತೋರಿಸುವ ನಾಟಕ ಆಡಬೇಡಿ, ನಿಮ್ಮ ಅಂತರಾಳದಿಂದ ಮೂಡಿ ಬಂದ ಭಾವನೆಗಳಿಗೆ ಮಾತ್ರ ಸಾಧ್ಯತೆ ಇರುವುದು.

- ಬಿಟ್ಟೀರ ಚೋಂದಮ್ಮ ಶಂಭು, ಬೆಂಗಳೂರು

**ಬಿಳಿ ಕುದುರೆಗೆ ಹಸರ್ ಬಾಲ, ಇದ್ ಎಂಥಾ? (ಮೂಲಂಗಿ)**

## ಲಗ್ನ ಕಾರ್ಯಗ

1. ಅರ್ವತೋಕ್ಲು ಗ್ರಾಮದ ಪೂಜಾರಿರ ಮಾದಪ್ಪನವ್ರ ಎರಡನೇ ಮಂಜ **ಪ್ರದೀಪ್**ಗೂ ಮತ್ತ್ ಕುಯ್ಯಂಗೇರಿ ಗ್ರಾಮದ ಕುರ್ಕಡ ಆನಂದ್‌ನವ್ರ ಮಗ್ಳ್ **ಸೋನಿ** ಇವಳ ಮದ್ವೆ ತಾರೀಖ್ 27-4-2000ರ್ಲಿ ಮಡಿಕೇರಿ ಯ ಕೆಳಗಿನ ಗೌಡ ಸಮಾಜಲಿ ನಡ್ತ್.
2. ಕುಂಬಳದಾಳ್ ಗ್ರಾಮದ ಕುಂಜಿಲನ ರಾಮಯ್ಯನವ್ರ ಮಂಜ **ಕುಮಾರ್(ರಾಜು)**ಗೂ ಮತ್ತ್ ಸಕ್ಲೇಸ್‌ಪುರ ನಿವಾಸಿ ಮಂಜಪುರ ಭೀಮಯ್ಯನವ್ರ ಮಗ್ಳ್ **ದೇವಕಿ**ಗೂ ತಾರೀಖ್ 15-5-2000 ರ್ಲಿ ಹೈದನ ಮನೆಲಿ ಭಾರಿ ಲಾಯ್ಕಾಗಿ ನಡ್ತ್.
3. ಮುಕ್ಕೋಡು ಗ್ರಾಮದ ಗುಡ್ಡೇರ ದಿ. ಕಾರ್ಯಪ್ಪನವ್ರ ಮಗ್ಳ್ **ಗಂಗಮ್ಮ**ಂಗೂ ಮತ್ತೆ ಬಲ್ಲಮಾವಟಿ ಗ್ರಾಮದ ಹೊಸೋಕ್ಲು ದಿ. ತಿಮ್ಮಯ್ಯನವ್ರ ಮಂಜ **ಅಶೋಕ್**ಗೂ ತಾರೀಖ್ 17-5-2000ರ್ಲಿ ಹೈದನ ಮನೆಲಿ ಮದ್ವೆ ಕಳ್ತ್.
4. ಮದೆನಾಡ್ ಗ್ರಾಮದ ನೆರಿಯನ ಸೋಮಯ್ಯನವ್ರ ಮಂಜ **ಡಾ. ಪ್ರವೀಣ್**ಗೂ ಮತ್ತ್ ತೀರ್ಥ ಹಳ್ಳಿ ತಾಲೋಕು ಅಡ್ವೋಕೇಟ್ A.P. ಕೃಷ್ಣಪ್ಪನವ್ರ ಮಗ್ಳ್ **ಡಾ. ಅಶ್ವಿನಿ**ಗೂ ತಾರೀಖ್ 15-5-2000ರ್ಲಿ ಶಿವಮೊಗ್ಗದ ಆದಿ ಚುಂಚನಗಿರಿ ಸಭಾ ಭವನಲಿ ಭಾರಿ ವಿಜೃಂಭಣೆಯಿಂದ ನಡ್ತ್.
5. ಗಾಳಿಬೀಡ್ ಗ್ರಾಮದ ಯಾಲದಾಳು ಕೇಶವನಂದ (Dysp), ಇವರ ಮಂಜ ಲೆಫ್ಟಿನೆಂಟ್ **ಚಂದನ್**ಗೂ ಮತ್ತೆ ಬೆಂಗಳೂರು ನಿವಾಸಿ ಕೆ.ಎಸ್. ಆನಂದ ಇವರ ಮಗ್ಳ್ **ಡಾ. ಮಂಥನ್**ಗೂ ತಾರೀಖ್ 21-5-2000ರ್ಲಿ ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ಬಾರಿ ಗೌಜಿಲಿ ಕಳ್ತ್.
6. ಬೆಂಗಳೂರು ನಿವಾಸಿ ಕುಲ್ಲ ಚೆಟ್ಟೀರ ನಂಜಪ್ಪನವ್ರ ಮಗ್ಳ್ **ಜ್ಯೋತಿ**ಗೂ ಮತ್ತೆ ಪುತ್ತೂರು ತಾಲೂಕು ಕೆದಂಬಾಡಿ ಬಾಬಣ್ಣ ಗೌಡ್ರ ಮಂಜ **ಗೋಪಾಲ ಕೃಷ್ಣ**ಂಗೂ ತಾರೀಖ್ 28-5-2000ಲಿ ಬೆಂಗಳೂರಿನ ಜಸ್ಮ ಭವನಲಿ ಬಾರಿ ಲಾಯ್ಕ್‌ಲಿ ನಡ್ತ್
7. ನರಿಯಂದಡ ಗ್ರಾಮದ ತೋಟಂಬೈಲು ಪುರಂದರ (ಮಿಟ್ಟು) ಇವ್ರ 2ನೇ ಮಗ್ಳ್ **ಜ್ಯೋತಿ**ಗೂ, ಕಗ್ಗೋಡ್ಲು ಗ್ರಾಮದ ಬೀಚನ ಪಳಂಗಪ್ಪನವ್ರ 3ನೇ ಮಂಜ **ಪುರುಷೋತ್ತಮ**ಂಗೂ ಮೂರ್ನಾಡಿನ ಗೌಡ ಸಮಾಜಲಿ ತಾರೀಖ್ 17-6-2000ಲಿ ಲಗ್ನ ಕಳ್ತ್.
8. ಮಡಿಕೇರಿ ನಿವಾಸಿ ಯಾಲದಾಳು ಬೋಪಯ್ಯನವ್ರ ಮಂಜ **ಮನೋಜ್** ಅವಂಗೂ ಮತ್ತೆ ಮೈಸೂರಿನ ಶಿವಶಂಕರ್ ಎಂ.ಎಸ್. ಅವ್ರ ಮಗ್ಳ್ **ಶೋಬಾ**ಂಗೂ ತಾರೀಖ್ 5-6-2000ರ್ಲಿ ಮೈಸೂರು ಹುಣಸೂರು ರಸ್ತೆಯಲ್ಲಿರ್ಪ ಕಾಂತಿ ನಾಗರಾಜ ಕಲ್ಯಾಣ ಮಂಟಪಲಿ ಬಾರಿ ಲಾಯ್ಕಾಗಿ ನಡ್ತ್‌ಗಡ.

13ನೇ ಪುಟದಿಂದ

ರೇವತಿ ಕಡೆ ಕೋಪದಿಂದ ನೋಡುತ್ತಾ "ನೀವು ಈಗಲೇ ನಿಮ್ಮ ಊರಿಗೆ ಹೊರಟು ಹೋಗಿ ರೇವತಿ"

ಅವಳು ಕೋಪದಿಂದ "ಯಾಕೆ"? ಪ್ರಸನ್ನ ರೇಗುತ್ತಾ "ಎಲ್ಲರನ್ನೂ ಭಯಂಕರ ರೀತಿಯಲ್ಲಿ ಸಾಯಿಸುತ್ತಿರುವ ಸೂತ್ರದಾರ ನಮ್ಮನ್ನು ಖಂಡಿತಾ ಉಳಿಸಲಾರ. ನೀವು ಮೊದಲು ಇಲ್ಲಿಂದ ಹೊರಡಿ".

"ಹೋಗುತ್ತೇನೆ"

"ತುಂಬಾ ಸಂತೋಷ"

"ಆದರೆ ಈಗಲ್ಲ"

"ಇನ್ಯಾವಾಗ?"

"ಪೋಲಿಸರ ಜೊತೆ ಮಾತಾಡಿದ ಮೇಲೆ"

"ವಾಟ್.....?"

ರೇವತಿ ಗಂಭೀರವಾಗಿ "ಇಂತಹ ಬೆದರಿಕೆಗೆಲ್ಲಾ ಹೆದರುವ ಹೆಣ್ಣು ನಾನಾಗಿದ್ದರೆ ಈ ಊರಿನಿಂದ ಯಾವತ್ತೋ ಹೋಗಿರುತ್ತಿದ್ದೆ. ಈ ನಿಗೂಢತೆಯನ್ನು ಕಂಡು ಹಿಡಿಯಬೇಕು ಅಂತ ಇನ್ನು ಉಳಿದುಕೊಂಡಿದ್ದೇನೆ."

ಪ್ರಸನ್ನ ತೀಕ್ಷ್ಣವಾಗಿ "ಅದಕ್ಕೆ ಮೊದಲೇ ನಿಮ್ಮ ದೇಹಕ್ಕೂ ಸಹ ಹಾವುಗಳು ಸುತ್ತಿಕೊಂಡರೆ?"

ರೇವತಿ ಬೆಚ್ಚಿ ಬಿದ್ದಳು !

ಭಯ.... ಅನುಮಾನ !

ದೇಹದಲ್ಲಿ ಸಣ್ಣಗೆ ನಡುಕ ! ಸತ್ಯ ಹೊರಬರದಂತೆ ತಡೆಯಲು ಪರೋಕ್ಷವಾಗಿ ಎಚ್ಚರಿಕೆ ನೀಡುತ್ತಿರುವ ಪ್ರಸನ್ನ !

ಹಾವಿನ ಹೆಡೆಯ ನೆರಳಲ್ಲಿ ನಾನಿದ್ದೇನೆ !

ಇದು ಬಂಗಲೆ ಅಲ್ಲ. ಮೃತ್ಯು ಪಂಜರ !

ರೇವತಿ ಭಯದಿಂದ ನಡುಗಿದಳು !

(ಮುಂದುವರೆಯುತ್ತದೆ)

## ನಗೆ ಹನಿ : ಅಡಿಕೆ ಚೂರ್

ಒಂದ್ ಊರ್‌ಲಿ ಜಿಪುಣ ಶೆಟ್ಟಿ ಇತ್ತ್. ಅವನ ಮಂಜಗೆ ಒಂದ್ ದಿನ ಜೋರಾಗಿ ಹಲ್ಲ್‌ಬೇನೆ ಶುರ್ ಆತ್, ಅದಕ್ಕೆ ಟೌನ್‌ಲಿರೋ ಡಾಕ್ಟ್ರತ್ರ ಬಾತ್. ಡಾಕ್ಟ್ರ ಅವನ ಹಲ್ಲ್ ನೋವ್‌ನ ವಾಸಿಮಾಡ್ತ್.

ಮನೆಗೆ ಬಾಕನ ಅಪ್ಪ ಕೇಳ್ತ್. ಆಗ ಮಂಜ ಹೇಳ್ತ್ ನನ್ನ ಹಲ್ಲ್‌ನ ಸಂದಿಲಿ ಒಂದು ಚೂರು ಅಡಿಕೆ ಸಿಕ್ಕಿತ್ತ್. ಅದನ್ನ ಡಾಕ್ಟ್ರ ತೆಗ್ತ್‌ತ ಹೇಳ್ತ್. ಆಗ ಅಪ್ಪ ಕೇಳ್ತ್ ಡಾಕ್ಟ್ರಗೆ ಎಷ್ಟ್ ದುಡ್ಡು ಕೊಟ್ಟತ. ಆಗ ಮಂಜ ನೂರೈವತ್ತು ರುಪಾಯಿ ಕೊಟ್ಟೆತ ಹೇಳ್ತ್ ! ಆ ಸಣ್ಣ ಅಡಿಕೆ ಚೂರ್‌ಗಾಗಿ ನೂರೈವತ್ತ್ ರೂಪಾಯಿ ಖರ್ಚ್ ಮಾಡ್ದ, ಅದೇ ದುಡ್ಡ್‌ಲಿ ಮಾರ್ಕೆಟ್‌ಲಿ ಒಂದ್ ಕೆ.ಜಿ. ಅಡಿಕೆ ಬರ್‌ತ್ತಿತ್ತಲ್ಲಾ ! ಆ ಜಿಪುಣನ ಮಂಜಂಗೋ ಅಳಕೋ ನಗಾಡಕೋತ ತಿಳ್‌ತ್‌ಲೇ ಹಂಗಾತ್ ಅವನ ಪಾಡ್.

**ಸಂಗ್ರಹ : ಅಚ್ಚಲ್ಪಾಡಿ ಬೀನ ಗೋಪಾಲ, ಮಡಿಕೇರಿ**

**ಅಟ್ಟದ ಮ್ಯಾಲೆ ಪುಟ್ಟಲಕ್ಷ್ಮೀ, ಅದ್ ಎಂಥಾ? (ಬೊಟ್ಟು)**

## ಕೃತಜ್ಞತೆ ಮತ್ತು ವಂದನೆ



ಶ್ರೀಮತಿ ಪೇರಿಯನ ಅಮ್ಮಾಜಿ
W/o ಶ್ರೀ ಪೇರಿಯನ ಕಾರ್ಯಪ್ಪ

ನನ್ನ ಧರ್ಮ ಪತ್ನಿ ಶ್ರೀಮತಿ ಅಮ್ಮಾಜಿ ದಿನಾಂಕ 19-5-2000ರಲ್ಲಿ ವೈಕುಂಠವಾಸಿಯಾದ ಸಂದರ್ಭ, ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂತೈಸಿ ಸಹಕರಿಸಿದ ನನ್ನ ಬಂದು ಬಳಗದವರಿಗೂ, ಗ್ರಾಮಸ್ಥರಿಗೂ ಹಾಗೂ ಹಿತೈಷಿಗಳೆಲ್ಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಅಂತೆಯೇ ತಾ|| 3-6-2000 ದ ಶನಿವಾರದಂದು ಸಿದ್ದಾಪುರದ ಸ್ವರ್ಣಮಾಲದಲ್ಲಿ ಮೃತಳ ತಿಥಿ ಕರ್ಮಾತರವನ್ನು ಏರ್ಪಡಿಸಿದ ಸಂದರ್ಭದಲ್ಲಿ ಸರ್ವರೂ ಆಗಮಿಸಿ ಮೃತಳ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಿರುವುದಕ್ಕೆ ವಂದನೆಗಳು.

ದುಃಖತಪ್ತ
ಪತಿ : ಪೇರಿಯನ ಕಾರ್ಯಪ್ಪ
ಮತ್ತು ಮಕ್ಕಳು.

"ಗಲ್ಫ್ ಕಾಟೇಜ್"
ಸಿದ್ಧಾಪುರ, ಕೊಡಗು.

## ನಿಧನ

ಮೈಸೂರಿನ ಹೆಬ್ಬಾಳು ನಿವಾಸಿ ಹೊಸೂರು ದೇವರಾಜ್‌ರವರ ಧರ್ಮಪತ್ನಿ ಇಂದಿರಾರವರು ದಿನಾಂಕ 8-6-2000ರಲ್ಲಿ ವಿಧಿವಶವಾದರು. ಇವರಿಗೆ 28 ವರ್ಷ ಪ್ರಾಯವಾಗಿತ್ತು. ಮೃತರು ಪತಿ ಮತ್ತು 3 ಹಾಗೂ 4 ವರ್ಷದ ಪುಟಾಣಿಗಳನ್ನು ಅಗಲಿದ್ದಾರೆ.

* * * * *

ವೀರಾಜಪೇಟೆ ತಾಲೂಕು ಚೆನ್ನಂಗಿ ಗುಡ್ಲೂರು ಗ್ರಾಮದ ದಿ|| ನಡುಮನೆ ಅಪ್ಪಯ್ಯನವರ ಧರ್ಮಪತ್ನಿ ಸಂಣಮ್ಮನವರು ದಿನಾಂಕ 4-6-2000ದಲ್ಲಿ ನಿಧನರಾದರು. ಇವರಿಗೆ 85ವರ್ಷ ಪ್ರಾಯವಾಗಿತ್ತು. 3ಗಂಡು ಮತ್ತು 3 ಹೆಂಣು ಮಕ್ಕಳು ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿದ್ದರೆ.

ವರದಿ : ಸಂಗಾತಿ



ಅಂಚೆಮನೆ ಚಿಣ್ಣಮ್ಮ ಚಿಣ್ಣಪ್ಪ
ಅಭ್ಯತ್ ಮಂಗಲ

ಜನನ:12 - 4-1924
ಮರಣ 27-6-1999

## 1ನೇ ವರ್ಷದ ಪುಣ್ಯ ಸ್ಮರಣೆ

ನೀವು ನಮ್ಮನ್ನು ಅಗಲಿ ತಾರೀಖು 27-6-2000ಕ್ಕೆ 1 ವರ್ಷವು ಸಂದರೂ ನಿಮ್ಮ ಸವಿ ನೆನಪು ಹಾಗೂ ಆಶೀರ್ವಾದಗಳು ನಮ್ಮಲ್ಲಿ ಸದಾ ಹಚ್ಚಹಸುರಾಗಿದೆ. ನಿಮ ತ್ಯಾಗ, ಪ್ರೀತಿ, ವಾತ್ಸಲ್ಯಗಳಿಂದ ಕೂಡಿದ ಆದರ್ಶ ಜೀವನ ನಮಗೆ ಮಾರ್ಗದರ್ಶನವಾಗಿದೆ.

ನಿಮ್ಮ ದಿವ್ಯಾತ್ಮಕ್ಕೆ ಆ ಭಗವಂತನು ಚಿರಶಾಂತಿ ಕರುಣಿಸಲೆಂದು ಮನಪೂರ್ವಕ ಪ್ರಾರ್ಥಿಸುವ

ಮಕ್ಕಳು, ಅಳಿಯಂದಿರು,ಸೊಸೆಯಂದಿರು, ಮೊಮ್ಮಕ್ಕಳು ಹಾಗೂ
ಅಪಾರ ಬಂದು ಬಳಗದವರು.

**ಪ್ರಕಟಣೆ :** ತುಂತಜೆ ಉಲ್ಲಾಸ ಮತ್ತು ಭಾರತಿ, ಬಾರಿಕೆ ಜನಾರ್ಧನ ಮತ್ತು ಬೀನಾ ಕುಮಾರಿ

## ಕೊಡಗು ಗೌಡ ವಿದ್ಯಾ ಸಂಘ, ಮಡಿಕೇರಿ

(ಸ್ಥಾಪನೆ: 1908)

1995 ರಿಂದ 2000 ಇಸವಿಯವರೆಗಿನ ಮಹಾಸಭೆಯನ್ನು ದಿನಾಂಕ 19-6-2000ದ ಸೋಮವಾರ ಪೂರ್ವಾಹ್ನ 10-30ಗಂಟೆಗೆ ಮಡಿಕೇರಿಯ ಗೌಡ ವಿದ್ಯಾರ್ಥಿ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕುಯ್ಯಮುಡಿ ಕೆ. ಪೂರ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

**ವಿಶೇಷ ಆಹ್ವಾನಿತರಾಗಿ**

ಶ್ರೀ ತೋಟಂಬೈಲು ಎಂ. ನಾಣಯ್ಯ, ಅಧ್ಯಕ್ಷರು, ಕೊಡಗು ಗೌಡ ಸಮಾಜ
ಶ್ರೀ ತುಂತಜ್ಜೀರ ಗಣೇಶ, ಅಧ್ಯಕ್ಷರು, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ
ಶ್ರೀಮತಿ ಚೀಯಂಡಿ ರಾಧ ಯಾದವ್, ಅಧ್ಯಕ್ಷರು, ಗೌಡ ಮಹಿಳಾ ಒಕ್ಕೂಟ

**ಇವರುಗಳು ಆಗಮಿಸುವರು**

*ತಾವುಗಳು ಸಮಯಕ್ಕೆ ಸರಿಯಾಗಿ ದಯಮಾಡಿಸಿ, ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರುವ*

**ಸಿ.ಪಿ. ರಘುಪತಿ,**
ಮ್ಯಾನೇಜರ್

**ಕೆ.ಆರ್. ಅನಂತ್‌ಕುಮಾರ್**
ಗೌರವ ಕಾರ್ಯದರ್ಶಿ

**ಕೆ.ಕೆ. ಪೂರ್ಣಯ್ಯ**
ಅಧ್ಯಕ್ಷರು ಹಾಗೂ ಕಾರ್ಯಕಾರಿ ಮಂಡಳಿ

**ಕಾರ್ಯಕ್ರಮ :** ಪ್ರಾರ್ಥನೆ, ಸ್ವಾಗತ ಭಾಷಣ, ಸಂತಾಪ ಸೂಚನೆ (ಮೃತಪಟ್ಟ ಸದಸ್ಯರಿಗೆ), ಕಳೆದ ಮಹಾಸಭೆಯ ವರದಿ, ಆಡಳಿತ ಮಂಡಳಿಯ ವರದಿ ದಿನಾಂಕ 1-1-1995 ರಿಂದ 31-3-2000ದ ವರೆಗಿನ ಆಡಿಟ್ ವರದಿ ವಾಚನ ಹಾಗೂ 2000ದಿಂದ 2001ರ ವರೆಗಿನ ಅಂದಾಜು ಆಯಾ ವ್ಯಯ ಪತ್ರ ಮಂಜೂರು ಮಾಡುವುದು, ನಾಲ್ಕು ವರ್ಷಗಳಲ್ಲಿ ಹಾಲಿ ಕಾರ್ಯಕಾರಿ ಮಂಡಳಿ ಮಾಡಿದ ಸಾಧನೆಗಳ ವರದಿ, ನಾಲ್ಕು ವರ್ಷಗಳಲ್ಲಿ ಹಾಲಿ ಕಾರ್ಯಕಾರಿ ಮಂಡಳಿ ಮಾಡಿದ ಸಾಧನೆಗಳ ವರದಿ, ಕಾರ್ಯಕಾರಿ ಮಂಡಳಿ ಚುನಾವಣೆ, ಠರಾವುಗಳು, ಇತರ ವಿಷಯಗಳು, ಅಧ್ಯಕ್ಷರ ಭಾಷಣ, ವಂದನಾರ್ಪಣೆ, ಊಟೋಪಚಾರ

***ವಿಶೇಷ ಸೂಚನೆ :***

1) ಆಡಿಟ್ ವರದಿಯನ್ನು ಸಂಘದ ನೋಟಿಸ್ ಬೋರ್ಡಿನಲ್ಲಿ ಹಾಕಲಾಗಿದೆ
2) ವಿದ್ಯಾ ಸಂಘದ ಸದಸ್ಯತನ ಮೊಬಲಗನ್ನು ರೂ. 11-00ರಿಂದ ರೂ. 101-00ಕ್ಕೆ ಏರಿಸಲು ಈ ಹಿಂದೆಯೇ ತೀರ್ಮಾನಿಸಲಾಗಿದೆ. ಸಂಘದಲ್ಲಿ ರೂ. 11-00ರ ಸದಸ್ಯರಾಗಿರುವವರು ತಾವಾಗಿಯೇ ಮುಂದೆ ಬಂದು ರೂ. 101-00 ಮೊತ್ತವನ್ನು ಭರ್ತಿಮಾಡಿಕೊಳ್ಳಬೇಕಾಗಿ ವಿನಂತಿ.
3) ಠರಾವುಗಳನ್ನು ದಿನಾಂಕ 12-6-2000ದ ಒಳಗಾಗಿ ಸಂಘದ ವ್ಯವಸ್ಥಾಪಕರಿಗೆ ತಲುಪಿಸುವಂತೆ ಕೋರಿದೆ.

**ಆಹ್ವಾನ ಪತ್ರಿಕೆ ಸಿಕ್ಕದವರು ಇದನ್ನೇ ಆಹ್ವಾನವೆಂದು ಪರಿಗಣಿಸುವುದು**

---

## ಉದ್ಯೋಗ ವಾರ್ತೆ

ಕನಿಷ್ಠ ಪಿ.ಯು.ಸಿ. ಉತ್ತೀರ್ಣರಾಗಿರುವ 17 ವರ್ಷಕ್ಕೆ ಮೇಲ್ಪಟ್ಟ ಕಲಾ, ವಿಜ್ಞಾನ, ವಾಣಿಜ್ಯ ವಿಷಯಗಳಲ್ಲಿ 65% ಕ್ಕಿಂತ ಹೆಚ್ಚು ಅಂಕ ಗಳಿಸಿದ ಅಭ್ಯರ್ಥಿಗಳು ಸಾಮಾನ್ಯ ನರ್ಸಿಂಗ್ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಯು ರೂ 10/- ಪಾವತಿಸಿದರೆ ಮೈಸೂರಿನ ಕೆ.ಆರ್.ಎಸ್. ಆಸ್ಪತ್ರೆಯ ಕಛೇರಿಯಲ್ಲಿ ದಿನಾಂಕ 12-6-2000 ರಿಂದ ಲಭಿಸುತ್ತದೆ. ಆಸಕ್ತರು ಸಂಪರ್ಕಿಸುವುದು.

— ಸಂಪಾದಕಿ.

---

## ಪಾರೆ ಮಜಲು ತ್ರಿಶೂಲ್



ಪಾರೆಮಜಲು ಗೋಪಾಲ ಇವರ ಮಂಙ ತ್ರಿಶೂಲ್ ಈ ವರ್ಷದ ಏಳನೇ ಕ್ಲಾಸ್ ಪರೀಕ್ಷೆಲಿ ಒಟ್ಟು 561 ಮಾರ್ಕ್ಸ್ ತೆಗ್ದ್ 93.50% ಬಂದುಟು. ಇಂವ ಸೆಂಟ್ ಜೋಸೆಫ್ ಕಾನ್ವೆಂಟ್ ಮಡಿಕೇರಿ ಇಲ್ಲಿ ಓದಿದ್. ಇವ್ನ ಉಜ್ವಲ ಭವಿಷ್ಯಕ್ಕೆ ಶುಭ ಹಾರೈಸೊಣೊ.

---

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.